ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 6 ಸೋಮವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 345 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅಬ್ಬಾ... ಸುರಕ್ಷಿತವಾಗಿ ಸಿಕ್ಕ ಶರಣ್ಯ

ಸತತ ಪರಿಶ್ರಮಪಟ್ಟು ರಕ್ಷಿಸಿ ಕರೆತಂದ ಕುಡಿಯ ಯುವಕರು

ಮಡಿಕೇರಿ,ಏ.5– ಕೊಡಗಿನ ಬೆಟ್ಟಕ್ಕೆ ಚಾರಣಕ್ಕೆ ತೆರಳಿ ನಾಪತ್ತೆಯಾಗಿದ್ದ ಕೇರಳದ ಟೆಕ್ಕಿ ಶರಣ್ಯ(36) ಸುರಕ್ಷಿತವಾಗಿ ಪತ್ತೆಯಾಗಿದ್ದಾರೆ.

ಸ್ಥಳೀಯ ಕುಡಿಯ ಜನಾಂಗದ ತಂಡವು ಶರಣ್ಯ ಅವರನ್ನು ಪತ್ತೆಮಾಡಿ ಭಾನುವಾರ ಸುರಕ್ಷಿತವಾಗಿ ಕರೆತರುವಲ್ಲಿ ಯಶಸ್ವಿಯಾಗಿದ್ದು, ಇದರೊಂದಿಗೆ ಕಳೆದ ನಾಲ್ಕು ದಿನಗಳಿಂದ ಮೂಡಿದ್ದ ಆತಂಕ ದೂರವಾಗಿದೆ.

ಕುಡಿಯ ಜನಾಂಗದ ಅಯ್ಯಪ್ಪ, ಸುಬ್ರಹ್ಮಣಿ, ಮಣಿಕಂಠ, ರಾಜು, ಮಣಿ ಎಂಬ ಐವರು ಯುವಕರ ತಂಡವು ಗುರುವಾರ ಕಾಣೆಯಾಗಿದ್ದ ಶರಣ್ಯ ಅವರಿಗೆ ಹುಡುಕಾಟ ನಡೆಸಿತ್ತು. ಈ ವೇಳೆ ತಡಿಯಂಡಮೋಳ್ ಬೆಟ್ಟದ ಟ್ರೆಕ್ಕಿಂಗ್ ಪಾಯಿಂಟ್‌ನಿಂದ 3.5 ಕಿ.ಮೀ ದೂರದ ಮಲೆ ತಿರಿಕೆ ಅರಣ್ಯದೊಳಗಿನ ಪಾಂಡನ ಬೆಟ್ಟದ ಬಳಿ ಶರಣ್ಯ ಅವರನ್ನು ಪತ್ತೆ ಮಾಡಿದ್ದಾರೆ.

ಈ ಯುವಕರು ಶರಣ್ಯ ಹೆಸರಿಡಿದು ಗಟ್ಟಿಧ್ವನಿಯಲ್ಲಿ ಕೂಗುವುದನ್ನು ಕೇಳಿಸಿಕೊಂಡ ಶರಣ್ಯ, ಅದಕ್ಕೆ ಪ್ರತಿಕ್ರಿಯಿಸಿದ್ದಾರೆ. ಧ್ವನಿ ಕೇಳಿಸಿದ ಕಡೆ ಹುಡುಕಾಟ ಮುಂದುವರೆಸಿದಾಗ ಶರಣ್ಯ ಪತ್ತೆಯಾಗಿದ್ದಾರೆ. ನಂತರ ಆಕೆಯನ್ನು ಸುರಕ್ಷಿತವಾಗಿ ಕರೆ ತಂದು, ಶೋಧನಾ ಪಡೆಗೆ ಒಪ್ಪಿಸಿದ್ದಾರೆ. ■ 6ನೇ ಪುಟಕ್ಕೆ

ಪ್ರತಿ ದಿನ ನೀರು ಕುಡಿದೇ ಜೀವ ಉಳಿಸಿಕೊಂಡಿದ್ದೆ

ಮಡಿಕೇರಿ, ಏ.5– ತಡಿಯಂಡಮೋಳ್ ಬೆಟ್ಟಕ್ಕೆ ಚಾರಣಕ್ಕೆ ತೆರಳಿ ದಾರಿತಪ್ಪಿ ಕಂಗಾಲಾಗಿದ್ದ ನಾನು, ನಾಲ್ಕು ದಿನ ಬರೀ ನೀರು ಕುಡಿದು ಜೀವ ಉಳಿಸಿಕೊಂಡಿದ್ದೇನೆ ಎಂದು ಟೆಕ್ಕಿ ಶರಣ್ಯ



ತಿಳಿಸಿದರು. ನಾನು ಕಾಡಿನಲ್ಲಿ ದಾರಿ ತಪ್ಪಿದಾಗ ಹೋಂ ಸ್ಟೇ ಮಾಲೀಕರಿಗೆ ಕರೆ ಮಾಡಿ, ಫಾರೆಸ್ಟ್ ಚೆಕ್ ಪೋಸ್ಟ್ ಸಿಬ್ಬಂದಿಗೆ ವಿಷಯ ತಿಳಿಸುವಂತೆ ಹೇಳಿದ್ದೆ. ಆದರೆ ಮೊಬೈಲ್‌ನಲ್ಲಿ ಕೇವಲ 1 ಪರ್ಸೆಂಟ್ ಚಾರ್ಜ್ ಇತ್ತು. ಹಾಗಾಗಿ ಪೂರ್ಣ ವಿಷಯ ತಿಳಿಸುವಷ್ಟರಲ್ಲಿ ಮೊಬೈಲ್ ಸ್ವಿಚ್ ಆಫ್ ಆಯಿತು. ಬಳಿಕ ಯಾರನ್ನೂ ಸಂಪರ್ಕಿಸಲು ಸಾಧ್ಯವಾಗಲಿಲ್ಲ ಎಂದು ತಮ್ಮ ನಾಲ್ಕು ದಿನಗಳ ವನವಾಸವನ್ನು ವಿವರಿಸಿದರು. ಪ್ರತಿ ದಿನ ಕತ್ತಲಾಗುತ್ತಿದ್ದಂತೆ ದೊಡ್ಡ ಮರದ ಬುಡದಲ್ಲಿ ಆಶ್ರಯ ಪಡೆಯುತ್ತಿದ್ದೆ. ■ 6ನೇ ಪುಟಕ್ಕೆ



ಶರಣ್ಯಳನ್ನು ಸುರಕ್ಷಿತವಾಗಿ ಕರೆತಂದ ಕುಡಿಯ ಯುವಕರು.

ಬೆಂಗಳೂರಿನಿಂದ ಕೇರಳಕ್ಕೆ ತೆರಳುತ್ತಿದ್ದ ಖಾಸಗಿ ಬಸ್‌ನಲ್ಲಿ 17.50 ಲಕ್ಷ ಹಣ ಪತ್ತೆ

ಚುನಾವಣೆ ಹಿನ್ನೆಲೆ ಅಕ್ರಮ ಹಣ ವರ್ಗಾವಣೆ ಶಂಕೆ; ಯುವಕ ವಶಕ್ಕೆ

ಬೆಂಗಳೂರು, ಏ.5– ಕೇರಳ ವಿಧಾನ ಸಭಾ ಚುನಾವಣೆ ಹಿನ್ನೆಲೆಯಲ್ಲಿ ಕರ್ನಾಟಕದಿಂದ ಅಕ್ರಮವಾಗಿ ಹಣ ವರ್ಗಾವಣೆಯಾಗುತ್ತಿರುವ ಶಂಕೆ ವ್ಯಕ್ತವಾಗಿದೆ.

ಇದಕ್ಕೆ ಪುಷ್ಟಿ ನೀಡುವಂತೆ ಬೆಂಗಳೂರಿನಿಂದ ಕೇರಳಕ್ಕೆ ಖಾಸಗಿ ಬಸ್‌ನಲ್ಲಿ ಸಾಗಿಸುತ್ತಿದ್ದ ಬರೋಬ್ಬರಿ 17.50 ಲಕ್ಷ ರೂಪಾಯಿ ಅಕ್ರಮ ಹಣವನ್ನು ಅಬಕಾರಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಕರ್ನಾಟಕದ ಯುವಕನೊಬ್ಬನನ್ನು ಬಂಧಿಸಿ, ತೀವ್ರ ವಿಚಾರಣೆ ನಡೆಸಲಾಗುತ್ತಿದೆ.

ಚೆಕ್‌ಪೋಸ್ಟ್‌ನಲ್ಲಿ ವಶ: ಬೆಂಗಳೂರಿನಿಂದ ತಿರುವನಂತಪುರಂನ ಕಳಕ್ಕೂಟ್ಟಂಗೆ ಹೊರಟಿದ್ದ ಖಾಸಗಿ ಬಸ್ಸನ್ನು ಅಮರವಿಳ ಚೆಕ್‌ಪೋಸ್ಟ್‌ನಲ್ಲಿ ಅಬಕಾರಿ ಅಧಿಕಾರಿಗಳು ತಪಾಸಣೆ ನಡೆಸಿದಾಗ ಪ್ರಯಾಣಿಕರೊಬ್ಬರ ಬ್ಯಾಗ್ ತುಂಬಾ 500 ರೂ. ಮುಖಬೆಲೆಯ ಕಂತೆ ಕಂತೆ ನೋಟುಗಳು ಪತ್ತೆಯಾಗಿವೆ. ಅಧಿಕಾರಿಗಳು ತಕ್ಷಣವೇ ಹಣವನ್ನು ಎಣಿಕೆ ಮಾಡಿ, ಅಕ್ರಮ ಹಣ ಸಾಗಾಟದ ಆರೋಪದ ಮೇಲೆ ಕರ್ನಾಟಕದ 29 ವರ್ಷದ ನಾರಾಯಣ ಸ್ವಾಮಿ ಎಂಬುವವರನ್ನು ವಶಕ್ಕೆ ಪಡೆದಿದ್ದಾರೆ. ವಿಚಾರಣೆ ವೇಳೆ ಕಳಕ್ಕೂಟ್ಟಂ ತಲುಪಿದ ನಂತರ ಅಲ್ಲಿ ಒಬ್ಬ ವ್ಯಕ್ತಿ ಬಂದು ಈ ಹಣವನ್ನು ಪಡೆದುಕೊಳ್ಳುವುದಾಗಿ ತನಗೆ ತಿಳಿಸಲಾಗಿತ್ತು ಎಂದು ನಾರಾಯಣ ಸ್ವಾಮಿ ತಿಳಿಸಿದ್ದಾನೆ. ಬೆಂಗಳೂರಿನಲ್ಲಿ ಈ ಹಣವನ್ನು ಕೊಟ್ಟವರು ಯಾರು ಮತ್ತು ಕೇರಳದಲ್ಲಿ ಇದನ್ನು ಸ್ವೀಕರಿಸಬೇಕಾದವರು ಯಾರು ಎಂಬ ಬಗ್ಗೆ ಆತ ಯಾವುದೇ ಖಚಿತ ಮಾಹಿತಿ ನೀಡಿಲ್ಲ. ■ 6ನೇ ಪುಟಕ್ಕೆ


ಮುಖ್ಯಮಂತ್ರಿ ಸಿದ್ದರಾಮಯ್ಯ ಪಕ್ಕಾ ಅಹಿಂದ ವಿರೋಧಿ

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ತೀವ್ರ ವಾಗ್ದಾಳಿ

- ತಮ್ಮನ್ನು ಬೆಳೆಸಿದ ವರ್ಗ ಬದಿಗೊತ್ತಿ ಅವಕಾಶವಾದಿ ರಾಜಕಾರಣ
- ಗ್ಯಾರಂಟಿ ಹೊರತಾಗಿ ಕಾಂಗ್ರೆಸ್ ಬಳಿ ಬೇರೆ ಬಂಡವಾಳವೇ ಇಲ್ಲ; ವ್ಯಂಗ್ಯ

ದಾವಣಗೆರೆ, ಏ.5– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಮತ್ತು ಕುರ್ಚಿ ಉಳಿಸಿಕೊಳ್ಳಲು ತಮ್ಮನ್ನು ಬೆಳೆಸಿದ ಅಹಿಂದ ವರ್ಗವನ್ನೇ ಹತ್ತಿಕ್ಕಲು ಪ್ರಯತ್ನಿಸುತ್ತಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೇರ ಆರೋಪ ಮಾಡಿದ್ದಾರೆ.

ದಾವಣಗೆರೆಯಲ್ಲಿ ಭಾನುವಾರ ಬೆಳಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಅವಕಾಶವಾದಿ ರಾಜಕಾರಣ ದಾವಣಗೆರೆ ದಕ್ಷಿಣ ವಿಧಾನ ಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಜಗಜ್ಜಾಹೀರಾಗಿದೆ. ಅಹಿಂದ ವರ್ಗದ ಮುಸ್ಲಿಂ ಜನಾಂಗದ ಮತಗಳಿಂದಲೇ ರಾಜಕೀಯ ಶಕ್ತಿ ಬಳಸಿಕೊಂಡ ಅವರು, ಈಗ ಕಣದಲ್ಲಿರುವ ಯಾವೊಬ್ಬ ಮುಸ್ಲಿಂ ಅಭ್ಯರ್ಥಿಗೂ ಮತ ಹಾಕಬೇಡಿ ಎಂದು ಬಹಿರಂಗವಾಗಿ ಕರೆ ನೀಡಿದ್ದಾರೆ. ಸಾಮಾಜಿಕ ನ್ಯಾಯ ಎಂದರೆ ಇದೇನಾ ಎಂದು ಪ್ರಶ್ನಿಸಿದರು. ನಾನು ಅಹಿಂದ ವರ್ಗದ ನಾಯಕ, ಈ ವರ್ಗಕ್ಕೆ ದೊಡ್ಡ ಕೊಡುಗೆ ನೀಡಿದ್ದೇನೆ ಎನ್ನುತ್ತಾರೆ.



ಆದರೆ ವಾಲ್ಮೀಕಿ ನಿಗಮದ ಕಥೆ ಏನಾಯ್ತು? ನಿಗಮದಲ್ಲಿ ಲೂಟಿಯಾಗಿರುವುದನ್ನು ಸ್ವತಃ ಒಪ್ಪಿಕೊಂಡಿದ್ದಾರೆ. ದೇವರಾಜ್ ಅರಸು ನಿಗಮದ ಮೂಲಕ ಬಡವರಿಗೆ ನೀಡಲಾಗುವ ಗಂಗಾ ಕಲ್ಯಾಣ ಯೋಜನೆಯಲ್ಲೂ ಲೂಟಿ ಆಗಿದೆ ಎಂದು ಕಿಡಿಕಾರಿದರು. ಉಪ ಚುನಾವಣೆಯಲ್ಲಿ ■ 6ನೇ ಪುಟಕ್ಕೆ

ಕೈಗಾರಿಕೆ ಅಭಿವೃದ್ಧಿಗೆ ಅಡ್ಡಿ

ಕರ್ನಾಟಕದಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಕಾರ್ಖಾನೆಗಳ ಪುನಃಶ್ಚೇತನಕ್ಕೆ ಕೇಂದ್ರ ಸರ್ಕಾರ ಸಿದ್ಧವಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸ್ಪಂದಿಸುತ್ತಿಲ್ಲ. ಕುದುರೆಮುಖ ಕಬ್ಬಿಣ ಅದಿರು ಕಂಪನಿಗೆ ಕೇಂದ್ರದಿಂದ 1700 ಕೋಟಿ ಬಂಡವಾಳ ನೀಡಿದ್ದರೂ ವಿನಾ ಕಾರಣ ರಾಜಕಾರಣ ಮಾಡಿ ಕಂಪನಿ ಮುಳುಗಿಸುವ ಹುನ್ನಾರಕ್ಕೆ ರಾಜ್ಯ ಸರ್ಕಾರ ಕೈಹಾಕಿದೆ. ಅರಣ್ಯ ಕಾಯ್ದೆ ಮುಂದಿಟ್ಟುಕೊಂಡು ಹೆಚ್‌ಎಂಟಿ ಪುನಶ್ಚೇತನಕ್ಕೂ ಅಡ್ಡಿಪಡಿಸುತ್ತಿದೆ.

–ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಇರಾನ್ ಪರಮಾಣು ವಿದ್ಯುತ್ ಸ್ಥಾವರಗಳತ್ತ ದಾಳಿ

ತಲೆಮಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಭೀತಿ

- ವಿಶ್ವ ಆರೋಗ್ಯ ಸಂಸ್ಥೆ ಮುಖ್ಯಸ್ಥರ ಕಳವಳ
- ಇರಾನ್ ಮಿಲಿಟರಿ ಅಧಿಕಾರಿಗಳ ಹತ್ಯೆ, ನಮ್ಮ ಇಬ್ಬರು ಪೈಲಟ್‌ಗಳ ರಕ್ಷಣೆ: ಟ್ರಂಪ್
- ಕಾರ್ಯಾಚರಣೆ ವೇಳೆ ಐವರು ಯುಎಸ್ ಸೈನಿಕರು ಹತ, ಸಾರಿಗೆ ವಿಮಾನ ಛಿದ್ರ: ಇರಾನ್

ನವದೆಹಲಿ: ಇರಾನ್‌ನ ಪರಮಾಣು ವಿದ್ಯುತ್ ಸ್ಥಾವರದ ಮೇಲಿನ ದಾಳಿ ಹಲವು ತಲೆಮಾರುಗಳ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥರು ಅತೀವ ಕಳವಳ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ 37ನೇ ದಿನಕ್ಕೆ ಕಾಲಿಟ್ಟಿದ್ದು, ಇರಾನ್‌ನಲ್ಲಿನ ಪರಮಾಣು ಕೇಂದ್ರಗಳ ಸುರಕ್ಷತೆಯ ಬಗ್ಗೆ ಎಚ್ಚರಿಕೆ ವಹಿಸುವಂತೆ ವಿಶ್ವ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕ ಟೆಡ್ರೋಸ್ ಅಧಾನೊಮ್ ಘೆಬ್ರೆಯೆಸಸ್ ಭಾನುವಾರ ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, ಇರಾನ್ ಮೇಲಿನ ದಾಳಿ ಪರಮಾಣು ದುರಂತಕ್ಕೆ ಕಾರಣವಾಗಬಹುದು. ತಲೆಮಾರುಗಳ ಮೇಲಿನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಬಹುದು. ಇರಾನ್‌ನಲ್ಲಿನ ಪರಮಾಣು ಕೇಂದ್ರಗಳ ಸುರಕ್ಷತೆಯ ಕುರಿತು ಮತ್ತೊಮ್ಮೆ ಕಳವಳ ವ್ಯಕ್ತಪಡಿಸುತ್ತೇನೆ. ಬುಶೆಹ್ರ್ ಪರಮಾಣು ವಿದ್ಯುತ್ ಸ್ಥಾವರದ ಮೇಲಿನ ದಾಳಿಯು ಪರಮಾಣು ದುರಂತಕ್ಕೆ ಕಾರಣವಾಗಬಹುದು. ಸಂಘರ್ಷ ಪ್ರತಿದಿನ ಆತಂಕ ಹೆಚ್ಚಿಸುತ್ತಿದ್ದು, ನಾವು ಈಗ ■ 6ನೇ ಪುಟಕ್ಕೆ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆರೋಗ್ಯದ ಬಗ್ಗೆ ವದಂತಿ

ನ್ಯೂಯಾರ್ಕ್: ಇರಾನ್‌ಗೆ ಹಾರ್ಮೊಜ್ ಜಲಸಂಧಿಯನ್ನು ತೆರೆಯುವುದಕ್ಕೆ 48 ಗಂಟೆಗಳ ಗಡುವು ನೀಡಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆರೋಗ್ಯದ ಬಗ್ಗೆ ವದಂತಿ ಹರಿದಾಡುತ್ತಿವೆ.



ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹಲವು ಪೋಸ್ಟ್‌ಗಳಲ್ಲಿ ಡೊನಾಲ್ಡ್ ಟ್ರಂಪ್ ಅವರ ಆರೋಗ್ಯ ತೀವ್ರವಾಗಿ ಹದಗೆಟ್ಟಿರುವ ಹಿನ್ನೆಲೆಯಲ್ಲಿ ಅವರನ್ನು ವಾಲ್ಟರ್ ರೀಡ್ ನ್ಯಾಷನಲ್ ಮಿಲಿಟರಿ ಮೆಡಿಕಲ್ ಸೆಂಟರ್‌ಗೆ ದಾಖಲಿಸಲಾಗಿದ್ದು, ಆಸ್ಪತ್ರೆ ಸುತ್ತಮುತ್ತ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಆಡಳಿತ ಕೇಂದ್ರ ವೈಟ್‌ಹೌಸ್‌ಗೂ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಹೇಳಲಾಗುತ್ತಿದೆ. ಯುದ್ಧದ ವಿಚಾರದಲ್ಲಿ ತೆಗೆದುಕೊಂಡಿರುವ ಏಕ ಪಕ್ಷೀಯ ನಿರ್ಧಾರದಿಂದ ಕೆರಳಿರುವ ಸ್ವಪಕ್ಷೀಯರೇ ಟ್ರಂಪ್ ಅವರ ಪದಚ್ಯುತಿಗೆ ಪ್ರಯತ್ನ ನಡೆಸಿದ್ದಾರೆ. 249 ವರ್ಷಗಳ ಇತಿಹಾಸ ಹೊಂದಿರುವ ಅಮೆರಿಕದಲ್ಲಿ ಮುಂದಿನ 18 ಗಂಟೆಗಳಲ್ಲಿ ಮಹತ್ವದ ಬೆಳವಣಿಗೆಯಾಗಲಿದೆ ಎಂದು ಅಮೆರಿಕ ಮೂಲದ ಮಾಧ್ಯಮಗಳಲ್ಲಿ ವರದಿಯಾಗಿದೆ ಎನ್ನಲಾಗುತ್ತಿದೆ.

ಆದರೆ ಪ್ರಮುಖ ಅಂತರರಾಷ್ಟ್ರೀಯ ಸುದ್ದಿಸಂಸ್ಥೆಗಳ ಇತ್ತೀಚಿನ ವರದಿಗಳ ಪ್ರಕಾರ, ಟ್ರಂಪ್ ಇರಾನ್ ಜೊತೆಗಿನ ಸಂಘರ್ಷಕ್ಕೆ ಸಂಬಂಧಿಸಿದಂತೆ ಪ್ರಕಟಣೆಗಳು ಮತ್ತು ಸಾಮಾಜಿಕ ಜಾಲತಾಣ ಪೋಸ್ಟ್‌ಗಳನ್ನು ಮುಂದುವರಿಸಿದ್ದಾರೆ ಎಂದು ತಿಳಿಸಿವೆ. ಇದನ್ನು ಪುಷ್ಟೀಕರಿಸುವಂತೆ ಇಂದು ಎಫ್–15 ಯುದ್ಧವಿಮಾನದಲ್ಲಿದ್ದ ಅಮೆರಿಕದ ವಾಯುಪಡೆಯ ಸೈನಿಕನ ರಕ್ಷಣಾ ಕಾರ್ಯಾಚರಣೆಯ ಬಗ್ಗೆ ಟ್ರಂಪ್ ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. ಆದರೆ ಇರಾನ್‌ಗೆ ನೀಡಿರುವ 48 ಗಂಟೆಗಳ ಗಡುವು ಮುಗಿಯುತ್ತಿರುವಾಗಲೇ ಟ್ರಂಪ್ ಬಗ್ಗೆ ಹಲವು ರೀತಿಯ ವದಂತಿಗಳು ಹರಿದಾಡುತ್ತಿರುವುದು ಕುತೂಹಲ ಮೂಡಿಸಿದೆ

ಮೈಸೂರಿನ 'ಕೆಂಪು ಸುಂದರಿ' ವೋಲ್ವೋ ಬಸ್ ಗುಜರಿಗೆ

ಸಂಚಾರ ನಿಲ್ಲಿಸಿದ 15 ವರ್ಷ ಮೇಲ್ಪಟ್ಟ 33 ಬಸ್‌ಗಳು

ಕೇಂದ್ರ ಸರ್ಕಾರದ ಆದೇಶ ಪರಿಪಾಲನೆ; 2011 ರಲ್ಲಿ ನರ್ಮ್ ಯೋಜನೆಯಡಿ ಖರೀದಿಸಿದ್ದ ಎಲ್ಲಾ ವೋಲ್ವೋಗಳು ಸ್ಕ್ರ್ಯಾಪ್‌ಗೆ



ಮೈಸೂರು, ಏ.5(ಬಿಎಲ್‌ಯು)– ಹವಾನಿಯಂತ್ರಿತ ಐಷಾರಾಮಿ ವ್ಯವಸ್ಥೆ, ಉನ್ನತ ಗುಣಮಟ್ಟದ ಸುರಕ್ಷತೆ ಸೇರಿದಂತೆ ಹಲವು ವಿಶಿಷ್ಟ ಸೌಲಭ್ಯದೊಂದಿಗೆ ಮೈಸೂರು ನಗರದ ಜನರಿಗೆ ಆರಾಮದಾಯಕ ಪ್ರಯಾಣದ ಅನುಭವ ನೀಡುತ್ತಿದ್ದ 'ಕೆಂಪು ಸುಂದರಿ' ಕೆಎಸ್‌ಆರ್‌ಟಿಸಿ ವೋಲ್ವೊ ಬಸ್ ಕಣ್ಮರೆಯಾಗಿವೆ.

ಹದಿನೈದು ವರ್ಷ ಮೇಲ್ಪಟ್ಟ ವಾಹನಗಳನ್ನು ಸಂಚಾರಕ್ಕೆ ಬಳಸದೆ ಅವುಗಳನ್ನು ಗುಜರಿ(ಸ್ಕ್ರ್ಯಾಪಿಂಗ್)ಗೆ ಹಾಕಬೇಕೆಂದು ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಆದೇಶದ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿದ್ದ 33 ವೋಲ್ವೋ ಬಸ್‌ಗಳ ಸಂಚಾರವನ್ನು ಕೆಎಸ್‌ಆರ್‌ಟಿಸಿ ಸ್ಥಗಿತಗೊಳಿಸಿದೆ. ಮೈಸೂರು ನಗರದಲ್ಲಿ ಸಂಚರಿಸುತ್ತಿದ್ದ ಎಲ್ಲಾ ವೋಲ್ವೊ ಬಸ್‌ಗಳು 15 ವರ್ಷ ಮೇಲ್ಪಟ್ಟಿತ್ತು. ಈ ಕಾರಣದಿಂದ ಮೈಸೂರಿನ ಕೆಎಸ್‌ಆರ್‌ಟಿಸಿ ವಿಭಾಗವು ನಗರದಲ್ಲಿ ಸಂಚರಿಸುತ್ತಿದ್ದ 33 ವೋಲ್ವೋ ಬಸ್‌ಗಳ ಸಂಚಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿ ಗುಜರಿಗೆ ಹಾಕಿದೆ.

ಸುಸ್ಥಿರ ಸಾರ್ವಜನಿಕ ಸಾರಿಗೆ, ಉನ್ನತ ಸುರಕ್ಷತೆ, ಐಷಾರಾಮಿ ಪ್ರಯಾಣಕ್ಕೆ ಜಾಗತಿಕವಾಗಿ ಹೆಸರುವಾಸಿಯಾಗಿದ್ದ ವೋಲ್ವೊ ಬಸ್‌ಗಳು ಭಾರತಕ್ಕೆ ಪರಿಚಯವಾದಾಗ ದೇಶದ ಪ್ರಯಾಣಿಕರಿಗೆ ವಿಶಿಷ್ಟ ಪ್ರಯಾಣದ ಅನುಭವ ನೀಡಿತ್ತು. ಸ್ವೀಡಿಷ್ ದೇಶದ ಕಂಪನಿಯ ಈ ವೋಲ್ವೊ ಬಸ್‌ಗಳು ದೀರ್ಘ ಪ್ರಯಾಣಕ್ಕೆ ಉತ್ತಮವಾಗಿತ್ತು. ಈ ಹಿನ್ನೆಲೆಯಲ್ಲಿ ನರ್ಮ್ ಯೋಜನೆಯಲ್ಲಿ 2011ರಲ್ಲಿ ಮೈಸೂರು ■ 6ನೇ ಪುಟಕ್ಕೆ

ವೋಲ್ವೊಗೆ ಪರ್ಯಾಯವಾಗಿ ಮುಂದಿನ ವರ್ಷ 100 ಎಲೆಕ್ಟ್ರಿಕ್ ಬಸ್

ವೋಲ್ವೊ ಬಸ್‌ಗಳಿಗೆ ಬದಲಾಗಿ ಇನ್ನು ಮುಂದೆ ಅದೇ ರೀತಿಯ ಉನ್ನತ ಗುಣಮಟ್ಟ ಹಾಗೂ ಆರಾಮದಾಯಕ ಪ್ರಯಾಣದ ಅನುಭವವಿರುವ ಪರಿಸರ ಸ್ನೇಹಿ ಎಲೆಕ್ಟ್ರಿಕ್ ಬಸ್‌ಗಳನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗುವುದು. ಮೈಸೂರು ನಗರಕ್ಕೆ 100 ಎಲೆಕ್ಟ್ರಿಕ್ ಬಸ್‌ಗಳ ಬೇಡಿಕೆ ಸಲ್ಲಿಸಿದ್ದು, ಮುಂದಿನ ವರ್ಷದ ಆರಂಭದಲ್ಲಿ ದೊರೆಯುವ ಸಾಧ್ಯತೆ ಇದೆ. ಬನ್ನಿಮಂಟಪದಲ್ಲಿ ಎಲೆಕ್ಟ್ರಿಕ್ ಬಸ್‌ಗಳಿಗಾಗಿ ಪ್ರತ್ಯೇಕ ಡಿಪೋ, ಚಾರ್ಜಿಂಗ್ ಸ್ಟೇಷನ್ ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಈ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿದ ನಂತರ ಸರ್ಕಾರ ಮೈಸೂರು ನಗರಕ್ಕೆ ಮುಂದಿನ ವರ್ಷದಲ್ಲಿ ಎಲೆಕ್ಟ್ರಿಕ್ ಬಸ್‌ಗಳನ್ನು ನೀಡಲಿದೆ. ಮೈಸೂರು ಗ್ರಾಮಾಂತರ ಬಸ್ ವಿಭಾಗದಲ್ಲಿ ಸಂಚಾರ ಮಾಡುತ್ತಿರುವ 14 ಎಲೆಕ್ಟ್ರಿಕ್ ಬಸ್‌ಗಳಿಗೆ ಈಗ ಎರಡು ಚಾರ್ಜಿಂಗ್ ಪಾಯಿಂಟ್‌ಗಳಿವೆ. ಹೊಸದಾಗಿ ಬರುವ 100 ಎಲೆಕ್ಟ್ರಿಕ್ ಬಸ್‌ಗಳಿಗೆ ಅಗತ್ಯ ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸುವ ಜವಾಬ್ದಾರಿಯನ್ನು ಚೆಸ್ಕಾಂಗೆ ವಹಿಸಲಾಗಿದೆ. ಹೊಸ ಬಸ್ ಡಿಪೋ ನಿರ್ಮಾಣವಾದ ನಂತರ ಚೆಸ್ಕಾಂನವರು ಚಾರ್ಜಿಂಗ್ ಪಾಯಿಂಟ್ ಸ್ಥಾಪಿಸಿ, ಕೆಎಸ್‌ಆರ್‌ಟಿಸಿಗೆ ಹಸ್ತಾಂತರ ಮಾಡಲಿದ್ದಾರೆ.

– ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಕೆಎಸ್‌ಆರ್‌ಟಿಸಿ, ಮೈಸೂರು ನಗರ ವಿಭಾಗ

ಮೈಸೂರು ಮಿತ್ರ

ಸೋಮವಾರ 6 ಏಪ್ರಿಲ್ 2026

ಹಸಿರು ಕ್ರಾಂತಿ ಮೂಲಕ ಅನ್ನ ಉಣಿಸಿದವರು ಅನ್ನದಾತ ಬಾಬು ಜಗಜೀವನರಾಮ್



ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಡಾ.ಬಾಬು ಜಗಜೀವನರಾಮ್ ಅಧ್ಯಯನ ಪೀಠದಿಂದ ಡಾ.ಬಾಬು ಜಗಜೀವನರಾಮ್ ಅವರ ಜಯಂತಿ ಆಚರಿಸಲಾಯಿತು.

ಮೈಸೂರು, ಏ.5(ಜಿಎ)–ಹಸಿದ ಭಾರತಕ್ಕೆ ಹಸಿರು ಕ್ರಾಂತಿ ಮೂಲಕ ಅನ್ನ ಉಣಿಸಿದವರು ಅನ್ನದಾತ ಬಾಬು ಜಗಜೀವನರಾಮ್ ಎಂದು ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಶೈಕ್ಷಣಿಕ ವಿಭಾಗದ ಡೀನ್ ರಾಮನಾಥ ನಾಯ್ಡು ತಿಳಿಸಿದರು.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಡಾ.ಬಾಬು ಜಗಜೀವನ ರಾಮ್ ಅಧ್ಯಯನ ಪೀಠದ ವತಿಯಿಂದ ಆಯೋಜಿಸಿದ್ದ ಡಾ.ಬಾಬು ಜಗಜೀವನ ರಾಮ್ 119ನೇ ಜಯಂತಿ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, ಮೂಲತಃ ದಲಿತ ಕುಟುಂಬದ ಹಿನ್ನೆಲೆಯಲ್ಲಿ ಬೆಳೆದು ನಿಂತ ಪರಿ ಬೆರಗು ಹುಟ್ಟಿಸುತ್ತದೆ. ಹಸಿರು ಕ್ರಾಂತಿ ಹರಿಕಾರ ಸ್ವಾತಂತ್ರ್ಯ ಸೇನಾನಿ ಕಾರ್ಮಿಕ ವರ್ಗದ ನೇತಾರ ಬಾಂಗ್ಲಾ ದೇಶ ಉಗಮಕ್ಕೆ ಕಾರಣಿಭೂತರು ಭಾರತದ ಸಂವಿಧಾನ ರಚನೆಯಲ್ಲಿ ಡಾ.ಬಾಬು ಜಗಜೀವನರಾಮ್ ಪಾತ್ರ ಹಾಗೂ ಸಂವಿಧಾನ ರಚನಾ ಐದು ಸಮಿತಿಯ ಸದಸ್ಯರಾಗಿದ್ದರು ಎಂದು ತಿಳಿಸಿದರು.

ಬಾಬು ಜಗಜೀವನರಾಮ್ ಅಧ್ಯಯನ ಪೀಠದ ನಿರ್ದೇಶಕರಾದ ಪ್ರೊ.ಶರಣಮ್ಮ ಮಾತನಾಡಿ, ಭಾರತದ ದೇಶದ ರಕ್ಷಣಾ ಇಲಾಖೆ ವಹಿಸಿಕೊಂಡ ಸಂದರ್ಭದಲ್ಲಿ ಪಾಕಿಸ್ತಾನ ಭಾರತಕ್ಕೆ ಶರಣಾಗತಿಯಾಗುವಂತೆ ಮಾಡಿ ಹೊಸ ರಾಷ್ಟ್ರವಾದ ಬಾಂಗ್ಲಾದೇಶ ಉದಯಕ್ಕೆ ಕಾರಣರಾದರು ಎಂದರು.

ಬಾಬೂಜಿಯವರು ಎಲ್ಲ ಸಮಾಜದ ಪರವಾಗಿ ಕೆಲಸ ಮಾಡಿದ ವ್ಯಕ್ತಿತ್ವ, ಇವರು ಸಾರಿಗೆ, ರಕ್ಷಣಾ, ಕಾರ್ಮಿಕ, ರೈಲ್ವೆ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಹೊಸ ಯೋಜನೆಗಳನ್ನು ತರುವ ಮೂಲಕ ಇತಿಹಾಸ ನಿರ್ಮಿಸಿದರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸತ್ಯನಾರಾಯಣಗೌಡ, ಪ್ರೊ.ಚಂದ್ರಶೇಖರ, ದಯಾನಂದ, ಪ್ರವೀಣ್, ಸಿದ್ದೇಗೌಡ, ಚೇತನ ಮತಿತ್ತರರು ಉಪಸ್ಥಿತರಿದ್ದರು.



ಹಸಿರುಕ್ರಾಂತಿ ಹರಿಕಾರ ಬಾಬು ಜಗಜೀವನ್‌ರಾಮ್ ಜಯಂತಿ ಅಂಗವಾಗಿ ಮೈಸೂರಿನ ರೈಲ್ವೆ ನಿಲ್ದಾಣದ ಬಳಿಯಿರುವ ಬಾಬು ಜಗಜೀವನ್‌ರಾಮ್ ಪ್ರತಿಮೆಗೆ ಮಾಜಿ ಕಾರ್ಪೊರೇಟರ್ ಆರ್.ಸೋಮಸುಂದರ್, ಕಾಂಗ್ರೆಸ್ ಮುಖಂಡರಾದ ಎ.ಜಿ.ಪಾರ್ಥಸಾರಥಿ, ರಾಮಯ್ಯ, ಜಿ.ಸುಬ್ರಹ್ಮಣ್ಯ ರವಿ ಮಾಲಾರ್ಪಣೆ ಮಾಡಿದರು.



ಮಾಜಿ ಉಪ ಪ್ರಧಾನಿ ಡಾ.ಜಗಜೀವನ್‌ರಾಮ್ ಜಯಂತಿ ಅಂಗವಾಗಿ ಮೈಸೂರಿನ ರೈಲ್ವೆ ನಿಲ್ದಾಣದ ಬಳಿಯಿರುವ ಜಗಜೀವನ್‌ರಾಮ್ ಪ್ರತಿಮೆಗೆ ಹರಳಯ್ಯ ಚರ್ಮಕರ ಹಾಗೂ ಗ್ರಾಮೋದ್ಯೋಗ ಸಂಘದ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಬಿ.ಪ್ರಸಾದ್ ಮಾಲಾರ್ಪಣೆ ಮಾಡಿದರು.ಮುಖಂಡರಾದ ಪುಟ್ಟರಾಜು, ಪುಟ್ಟಯ್ಯ, ಜಿ.ಲೋಕೇಶ್, ಹಿಮಾನಿಶ್‌ಗೌಡ ಉಪಸ್ಥಿತರಿದ್ದರು.

ಏ.14ರಿಂದ ರಂಗಾಯಣದಲ್ಲಿ ಚಿಣ್ಣರ ಮೇಳ

- ಕೇವಲ ಒಂದೂವರೆ ಗಂಟೆಯಲ್ಲಿ 250 ಅರ್ಜಿ ಖಾಲಿ
- ರಾತ್ರಿಯಿಂದಲೇ ಕಾದು ಅರ್ಜಿ ಖರೀದಿಸಿದ ಪೋಷಕರು



ಚಿಣ್ಣರ ಮೇಳಕ್ಕೆ ಅರ್ಜಿ ಪಡೆಯಲು ಸರತಿ ಸಾಲಿನಲ್ಲಿ ನಿಂತಿರುವ ಪೋಷಕರು.

ಮೈಸೂರು,ಏ.5(ಜಿಎ)–ಮೈಸೂರು ರಂಗಾಯಣದಲ್ಲಿ ಏ.14ರಿಂದ ಮೇ 10ರವರೆಗೆ ನಡೆಯಲಿರುವ ಚಿಣ್ಣರ ಮೇಳಕ್ಕೆ ಅರ್ಜಿಯನ್ನು ಭಾನುವಾರ ವಿತರಿಸಲಾಯಿತು. ಕೇವಲ ಒಂದುವರೆ ಗಂಟೆಯಲ್ಲಿ 250 ಅರ್ಜಿಗಳು ಖಾಲಿಯಾದವು.

ಚಿಣ್ಣರ ಮೇಳ ಪ್ರವೇಶಕ್ಕಾಗಿ ಅರ್ಜಿ ಪಡೆದುಕೊಳ್ಳಲು ಪೋಷಕರು ರಾತ್ರಿಯಿಂದಲೇ ಕಾದು ನಿಂತು ಅರ್ಜಿಯನ್ನು ತಮ್ಮದಾಗಿಸಿಕೊಂಡರು. ಬೆಳಗ್ಗೆ 10 ಗಂಟೆಯಿಂದಲೇ ರಂಗಾಯಣದ ವತಿಯಿಂದ ಅರ್ಜಿ ವಿತರಣೆ ಆರಂಭಿಸಿತ್ತು. 11.30ಕ್ಕೆ 250 ಅರ್ಜಿಗಳು ಖಾಲಿಯಾಯಿತು.

ಪ್ರತಿ ವರ್ಷದ ರಂಗಾಯಣದ ಚಿಣ್ಣರ ಮೇಳದಲ್ಲಿ ಮಕ್ಕಳ ಸೇರಿಸಲು ಪೋಷಕರು ಉತ್ಸುಕರಾಗಿ ನೀಡುವ ಅರ್ಜಿಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದರು. ಆದರೆ, ಈ ವರ್ಷ 250 ಅರ್ಜಿಗೆ ತಕ್ಕಂತೆ ಪೋಷಕರ ಸಂಖ್ಯೆ ಭೇಟಿ ನೀಡಿದ್ದು ವಿಶೇಷವಾಗಿತ್ತು.

ಅರ್ಜಿ ಶುಲ್ಕ 100 ರೂ. ಇದ್ದು, ಮಗುವೊಂದಕ್ಕೆ 4 ಸಾವಿರ ರೂ. ಡಿಡಿ ಜೊತೆಗೆ ಅರ್ಜಿ ಪಡೆದ 100 ರೂ. ರಶೀದಿ ಸಹಿತ ಜನನ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಏ.9ರ ಸಂಜೆ 5 ಗಂಟೆಯೊಳಗೆ ರಂಗಾಯಣ ಕಚೇರಿಗೆ ಸಲ್ಲಿಸಬೇಕಿದೆ. ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ಪ್ರವೇಶ ಶುಲ್ಕ ಹೆಚ್ಚಳವಾಗಿರುವುದರಿಂದ ಅರ್ಜಿ ಪಡೆಯಲು ಪೋಷಕರು ಆಸಕ್ತಿ ತೋರಿಲ್ಲ.

ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

ಮೈಸೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2025ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದೆ. ಲೇಖಕರು/ ಪ್ರಕಾಶಕರು/ ಸಾಹಿತ್ಯಾಸಕ್ತರು 4 ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು. ಈ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆ/ಕೊರಿಯರ್ ಅಥವಾ ಖುದ್ದಾಗಿ ಜೂ.30ರೊಳಗೆ ತಲುಪಿಸುವುದು. ಮಾಹಿತಿಗೆ www.sahithyaacademy.karnataka.gov.in.

ನಿವೃತ್ತ ಇಂಜಿನಿಯರ್ ವಿ.ಸತ್ಯನಾರಾಯಣ ಆಸ್ಟ್ರೇಲಿಯಾದಲ್ಲಿ ನಿಧನ



ಮೈಸೂರು, ಏ.5– ಮೈಸೂರಿನ ಜೆ.ಪಿ ನಗರದ ನಿವಾಸಿ, ನಿವೃತ್ತ ಇಂಜಿನಿಯರ್ ವಿ.ಸತ್ಯನಾರಾಯಣ (90) ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ತೀವ್ರ ಹೃದಯಾಘಾತದಿಂದ ಶನಿವಾರ ಮಧ್ಯಾಹ್ನ ನಿಧನರಾಗಿದ್ದಾರೆ. ಮೃತರು ಪತ್ನಿ, ಪುತ್ರರು, ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಜೆ.ಪಿ.ನಗರ ಬ್ರಾಹ್ಮಣ ಸಂಘದ ಸ್ಥಾಪಕ ಅಧ್ಯಕ್ಷರಾಗಿದ್ದ ವಿ.ಸತ್ಯನಾರಾಯಣ ಅವರು, ಜೆ.ಪಿ.ನಗರದಲ್ಲಿ ಶ್ರೀ ರಾಮಮಂದಿರ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡಿದ್ದರು.

ಮೈಸೂರಿನಲ್ಲಿ ಡಾ.ಬಾಬು ಜಗಜೀವನರಾಮ್ ಅವರ 119ನೇ ಜನ್ಮ ದಿನಾಚರಣೆ

ಹಸಿರು ಕ್ರಾಂತಿಯ ಹರಿಕಾರನಿಗೆ ಗಣ್ಯರ ನಮನ

ಗಂಡು ಮಕ್ಕಳಲ್ಲಿ ಶಿಕ್ಷಣದ ಆಸಕ್ತಿ ಕ್ಷೀಣಿಸುತ್ತಿರುವ ಬಗ್ಗೆ ಶಾಸಕ ಕೆ.ಹರೀಶ್‌ಗೌಡ ಅತೀವ ಬೇಸರ

- ಯಾರೂ ಶಿಕ್ಷಣದಿಂದ ವಿಮುಖರಾಗಬಾರದು
- ಶಿಕ್ಷಣದ ಮೂಲಕ ದೇಶವನ್ನು ಉಜ್ವಲಗೊಳಿಸಬೇಕು
- ದಲಿತ, ಶೋಷಿತ ಸಮುದಾಯದ ಸಮಾನತೆಗೆ ಡಾ.ಬಾಬು ಜಗಜೀವನ ರಾಮ್ ಪಾತ್ರ ಮುಖ್ಯ
- ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಪ್ರತಿಭಟನೆ





ಮೈಸೂರಿನ ಕಲಾಮಂದಿರದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರು ಡಾ.ಬಾಬು ಜಗಜೀವನರಾಮ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಡಾ.ಬಾಬು ಜಗಜೀವನರಾಮ್ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದರು (ಎಡಚಿತ್ರ). ಮೈಸೂರು ರೈಲ್ವೆ ನಿಲ್ದಾಣ ಬಳಿ ಶಾಸಕ ಜಿ.ಟಿ.ದೇವೇಗೌಡ ಅವರು ಡಾ.ಬಾಬು ಜಗಜೀವನರಾಮ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಮೈಸೂರು,ಏ.5(ಬಿಎಲ್‌ಯು)–ಇತ್ತೀಚಿಗೆ ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳಲ್ಲಿ ಉನ್ನತ ಶಿಕ್ಷಣದ ಮೇಲಿನ ಆಸಕ್ತಿ ಕಡಿಮೆಯಾಗುತ್ತಿದೆ ಎಂದು ಶಾಸಕ ಕೆ.ಹರೀಶ್‌ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಡಾ.ಬಾಬು ಜಗಜೀವನರಾಮ್ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಿಕ್ಷಣ ಬದುಕನ್ನು ಉಜ್ವಲ ಗೊಳಿಸಲಿದ್ದು, ಗಂಡು ಮಕ್ಕಳೆ ಆಗಲಿ, ಹೆಣ್ಣು ಮಕ್ಕಳೆ ಆಗಲಿ ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು ಎಂದು ಸಲಹೆ ನೀಡಿದರು.

ಬಡವರು, ಹಿಂದುಳಿದವರು ಸೇರಿದಂತೆ ಪ್ರತಿಯೊಂದು ಸಮುದಾಯದವರು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು, ಉದ್ಯೋಗ ದೊರೆಯಲಿ, ಬಿಡಲಿ ಶಿಕ್ಷಣ ಕಲಿಯಬೇಕು. ಶಿಕ್ಷಣ ಪಡೆದು ಪ್ರತಿಯೊಬ್ಬರು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಹರೀಶ್‌ಗೌಡ ಕಿವಿಮಾತು ಹೇಳಿದರು.

ಕೃಷಿ ಹಾಗೂ ರಕ್ಷಣಾ ಸಚಿವರಾಗಿದ್ದ ಡಾ.ಬಾಬು ಜಗಜೀವನರಾಮ್ ಅವರು ದೇಶಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯ. ಅಂದು ಭಾರತ ಆಮದು ರಾಷ್ಟ್ರವಾಗಿತ್ತು. ಡಾ.ಬಾಬು ಜಗಜೀವನರಾಮ್ ಅವರು ಆಹಾರ ಸ್ವಾವಲಂಬಿ ರಾಷ್ಟ್ರವಾಗಿ ಪರಿವರ್ತಿಸಿದರು. ಈ ಹಿನ್ನೆಲೆಯಲ್ಲಿ ಅವರನ್ನು ಹಸಿರು ಕ್ರಾಂತಿ ಹರಿಕಾರ ಎಂದು ಕರೆಯಲಾಗುತ್ತದೆ ಎಂದು ತಿಳಿಸಿದರು.

ದಲಿತ ಹಾಗೂ ಶೋಷಿತ ಸಮುದಾಯ ಇಂದು ಸಮಾಜದಲ್ಲಿ ಸಮಾನತೆ ಹಾಗೂ ಸ್ವತಂತ್ರವಾಗಿ ಬದುಕಲು ಡಾ.ಬಾಬು ಜಗಜೀವನರಾಮ್ ಅವರ ಪಾತ್ರ ಬಹುಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮುಂದಾಲೋಚನೆಯಿಂದ ಅವರು ರೂಪಿಸಿರುವ ಯೋಜನೆಗಳನ್ನು ಮಾದರಿಯಾಗಿಟ್ಟುಕೊಂಡು ಮುನ್ನಡೆಯಬೇಕು ಎಂದು ಹೇಳಿದರು.

ಡಾ.ಬಾಬು ಜಗಜೀವನರಾಮ್, ಮಹಾತ್ಮ ಗಾಂಧಿ ಸೇರಿದಂತೆ ಇತರೆ ಮಹನೀಯರ ಆದರ್ಶ ಮಾರ್ಗದಲ್ಲಿ ಸಾಗುವ ಮೂಲಕ ಪ್ರಾಮಾಣಿಕ ಹಾಗೂ ಪರಿಶುದ್ಧ ಮನಸ್ಸಿನಿಂದ ಸಾಧನೆ ಮಾಡಬೇಕು ಎಂದು ಹರೀಶ್ ಗೌಡ ಅವರು ಸಲಹೆಯಿತ್ತರು.

ಅಂತರ್ಜಾತಿ ವಿವಾಹವಾದರೆ ಹಳ್ಳಿಗಳಲ್ಲಿ ಕೊಲೆ ನಡೆಯುತ್ತಿತ್ತು. ಸಾಮಾಜಿಕ ಬಹಿಷ್ಕಾರ ಹಾಕಲಾಗುತ್ತಿತ್ತು. ಇದರ ವಿರುದ್ಧ ಹೋರಾಟ ಮಾಡಿದ ಡಾ.ಬಾಬು ಜಗಜೀವನರಾಮ್ ಅವರು, ಮಹಾತ್ಮ ಗಾಂಧಿ ಅವರ ಬೆನ್ನೆಲುಬಾಗಿ ನಿಂತು ದೇಶಕ್ಕೆ ಸ್ಮರಣೀಯ ಕೊಡುಗೆ ನೀಡಿದ್ದು, ಇದನ್ನು ಯಾರೂ ಮರೆಯಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಹಳ್ಳಿಗಳಲ್ಲಿ ಅಂಚೆ ಕಚೇರಿ, ಕೂಲಿ ಕಾರ್ಮಿಕರ ಬದುಕಿನ ಸುಧಾರಣೆಗೆ ಕಾಯ್ದೆಗಳು, ಆಹಾರ ಭದ್ರತೆ ಸೇರಿದಂತೆ ಅವರು ಮಾಡಿದ ಸಮಾಜಮುಖಿ ಕೆಲಸ ಇಂದಿಗೂ ನೆನಪಿನಲ್ಲಿಟ್ಟುಕೊಳ್ಳಲಾಗಿದೆ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಭವಿಷ್ಯದ ಭವ್ಯ ಭಾರತ ನಿರ್ಮಾಣ ಮಾಡಲು ಇಂತಹ ಮಹನೀಯರ ಆದರ್ಶವನ್ನು ಪಾಲಿಸಬೇಕು ಎಂದು ಹೇಳಿದರು.

ಈ ಕಾರ್ಯಕ್ರಮಕ್ಕೂ ಮುನ್ನ ಮೈಸೂರು ರೈಲ್ವೆ ನಿಲ್ದಾಣದ ಬಳಿಯ ಡಾ.ಬಾಬು ಜಗಜೀವನ ರಾಮ್ ಅವರ ಪ್ರತಿಮೆಗೆ ಶಾಸಕ ಜಿ.ಟಿ.ದೇವೇಗೌಡ ಅವರು ಮಾಲಾರ್ಪಣೆ ಮಾಡಿದರು. ತರುವಾಯ ಸಾರೋಟಿನಲ್ಲಿ ಡಾ.ಬಾಬು ಜಗಜೀವನರಾಮ್ ಅವರ ಭಾವಚಿತ್ರವಿರುವ ಮೆರವಣಿಗೆ ರೈಲ್ವೆ ನಿಲ್ದಾಣ ವೃತ್ತದಿಂದ ಆರಂಭಗೊಂಡು ದಾಸಪ್ಪ ವೃತ್ತ, ಜೆಎಲ್ ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು. ಡೊಳ್ಳು ಕುಣಿತ, ತಮಟೆ, ನಗಾರಿ ಸೇರಿದಂತೆ ಇತರೆ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿತು.

ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್‌ಕುಮಾರ್, ಮೈಸೂರು ಮಹಾ ನಗರಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್, ಉಪ ಪೊಲೀಸ್ ಆಯುಕ್ತ ಸುಂದರ್‌ರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಸಹಾಯಕ ನಿರ್ದೇಶಕ ಜನಾರ್ಧನ್, ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಉಪಸ್ಥಿತರಿದ್ದರು. ಇದೇ ವೇಳೆ ರೈಲ್ವೆ ನಿಲ್ದಾಣದ ಬಳಿ ದಲಿತ ಸಮುದಾಯದವರು ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು. ರಕ್ತ ಕೊಟ್ಟೆವು ಒಳ ಮೀಸಲಾತಿ ಬಿಡೆವು, ಸುಪ್ರೀಂಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿ ಜಾರಿಯಾಗಲಿ, ಸಮಾನತೆಯ ವಿರೋಧಿಗಳಿಗೆ ಧಿಕ್ಕಾರ ಎಂಬ ಹಲವು ಘೋಷಣಾ ಫಲಕ ಹಿಡಿದು ಪ್ರತಿಭಟನೆ ನಡೆಸಿದರು.

ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಬಾಬೂಜಿ ಜಯಂತಿ ಆಚರಣೆ

ಬಾಬೂಜಿ ಸ್ವಾಭಿಮಾನದ ಸ್ವಾವಲಂಬನೆಗೆ ಅಡಿಗಲಿಟ್ಟರು: ಪ್ರೊ.ಹನುಮಂತಯ್ಯ



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಡಾ.ಬಾಬು ಜಗಜೀವನ್‌ರಾಮ್ ಜಯಂತಿ.

ಮೈಸೂರು, ಏ.5(ಎಂಕೆ)– ಅಪ್ರತಿಮ ಆಡಳಿತಗಾರರಾಗಿದ್ದ ಬಾಬು ಜಗಜೀವನ್ ರಾಮ್, ವಿವಿಧ ಇಲಾಖೆಗಳ ಮಂತ್ರಿಯಾಗಿ ಸ್ವಾಭಿಮಾನದ ಸ್ವಾವಲಂಬನೆಗೆ ಭಾರತಕ್ಕೆ ಅಡಿಗಲಿಟ್ಟರು ಎಂದು ಮಾಜಿ ಸಂಸದ ಪ್ರೊ.ಎಲ್.ಹನುಮಂತಯ್ಯ ಸ್ಮರಿಸಿದರು.


ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಡಾ.ಬಾಬು ಜಗಜೀವನ್ ರಾಮ್ ಅವರ 119ನೇ ಜಯಂತಿ ಕಾರ್ಯಕ್ರಮ ದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಭಾರತದಲ್ಲಿ ರಾಜಕೀಯ ಹಾಗೂ ಸಾಮಾಜಿಕ ಸಂಘರ್ಷದ ನಡುವೆಯೂ ಕಾರ್ಮಿಕ ಕಲ್ಯಾಣ ಮಂತ್ರಿಯಾಗಿ ಕಾರ್ಮಿಕ ಪರಿಹಾರ ಕಾಯಿದೆ, ಭವಿಷ್ಯ ನಿಧಿ ಕಾಯ್ದೆ, ಸಮಾನ ಕೂಲಿಗೆ ಸಮಾನ ವೇತನ, ಕಾರ್ಮಿಕರಿಗೆ ಆರ್ಥಿಕ ಭದ್ರತೆ ಹೀಗೆ ಹಲವಾರು ಕಾಯ್ದೆಗಳ ಮೂಲಕ ಕಾರ್ಮಿಕರ ಕಾಯಕಲ್ಪಕ್ಕೆ ಬಾಬು ಅವರು ಕಾರಣ ಎಂದು ಹೇಳಿದರು.

ರೈಲ್ವೆ, ಕೃಷಿ, ದೇಶದ ರಕ್ಷಣೆ, ನೀರಾವರಿ ಇಲಾಖೆ, ಸಂಪರ್ಕ ಸೇರಿದಂತೆ ಮಹತ್ವದ ಇಲಾಖೆಗಳ ಮಂತ್ರಿಯಾಗಿ ಸಂಕಷ್ಟದ ಸ್ಥಿತಿಯಲ್ಲಿದ್ದ ಇಲಾಖೆಗಳಿಗೆ ಹೊಸ ಚೇತನ ಮತ್ತು ವೈಜ್ಞಾನಿಕ ದಿಕ್ಸೂಚಿ ಬರೆದ ಅವರು, ವ್ಯಕ್ತಿಗತವಾಗಿ ಸೌಮ್ಯ ಸ್ವಭಾವದವರಾಗಿದ್ದರು. ಕೆಲವು ವಿಚಾರದಲ್ಲಿ ಬಾಬು ಅವರು ತೆಗೆದುಕೊಂಡ ನಿರ್ಧಾರಗಳು ಕ್ರಾಂತಿಕಾರಕ ಬದಲಾವಣೆಗೆ ನಾಂದಿ ಹಾಡಿವೆ ಎಂದರು.

ಸಮಾಜದಲ್ಲಿದ್ದ ಜಾತಿ ಮತ್ತು ಧರ್ಮಗಳ ಕಂದಕಗಳ ನಿರ್ಮೂಲನೆಗಾಗಿ ಕೆಲವು ಐತಿಹಾಸಿಕ ಕಾನೂನು ನಿರ್ಣಯಗಳನ್ನು ಜಾರಿಗೆ ತಂದ ಹೆಗ್ಗಳಿಕೆ ಬಾಬು ಅವರಿಗೆ ಸಲ್ಲುತ್ತದೆ. ರಾಷ್ಟ್ರ–ರಾಷ್ಟ್ರಗಳ ನಡುವಿನ ಯುದ್ಧ ನಿಲ್ಲಿಸಲು ವಿಶ್ವಸಂಸ್ಥೆಯ ಅನಿವಾರ್ಯತೆ ಇರುವ ಹಾಗೆಯೇ ದೇಶದಲ್ಲಿ ಹಸಿವನ್ನು ನೀಗಿಸಲು ಆಹಾರ ಭದ್ರತೆ ಕಾಯ್ದೆ ಅನಿವಾರ್ಯ ಎಂಬ ಸಂದೇಶವನ್ನು ಅಂದೇ ಬಾಬು ಜಗ ಜೀವನ್ ರಾಮ್ ನೀಡಿದ್ದರು ಎಂದು ನೆನೆದರು.

ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಮಾಜಿ ಸಚಿವ ಕೋಟೆ ಶಿವಣ್ಣ, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿಜೆ.ವಿಜಯ್‌ಕುಮಾರ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಚಂದ್ರಮೌಳಿ, ಮುಖಂಡರಾದ ಎಡತಲೆ ಮಂಜುನಾಥ್, ಮಂಜುನಾಥ್, ಲಕ್ಷ್ಮಣ್, ಸುಧಾ ಮಹದೇವಯ್ಯ, ಮರಯ್ಯ, ಶಿವಪ್ರಸಾದ್, ಈಶ್ವರ್ ಚಕ್ಕಡಿ, ಸಂತೋಷ್, ಸುನಂದ್ ಕುಮಾರ್, ಮುರುಡೇಶ್, ರಾಮು, ಮನೋಜ್, ಶಿವಕುಮಾರ್, ಪುಟ್ಟಸ್ವಾಮಿ, ಸಿದ್ದರಾಜು, ಪ್ರಸನ್ನಕುಮಾರ್, ಸುರೇಶ್, ಗುರು, ವಿಜಯ್, ನಾಗೇಶ್, ವಕೀಲರಾದ ಸುರೇಶ್, ಚರಣ್‌ರಾಜ್, ಶಿವಶಂಕರಮೂರ್ತಿ, ನಾಗರಾಜ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.4.2026 ಸೋಮವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಶ್ರೀರಾಮ ಸೇವಾ ಮಂಡಳಿ** : 73ನೇ ವರ್ಷದ ಶ್ರೀರಾಮೋತ್ಸವ, ಶ್ರೀ ಹನುಮಂತೋತ್ಸವ, ಸ್ಥಳ: ಶ್ರೀ ಅವನಿ ಶಂಕರ ಮಠ, 4ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ ವಿದ್ಯಾರಣ್ಯಪುರಂ, ಸಂಜೆ 6 ರಿಂದ
- **ಡಾ.ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣ ಕೇಂದ್ರ, ಮಾನಸ ಗಂಗೋತ್ರಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿಶೇಷ ಘಟಕ, ಮೈಸೂರು** : ಡಾ.ಬಾಬೂ ಜಗಜೀವನರಾಮ್ ಅವರ 119ನೇ ವರ್ಷದ ಜನ್ಮ ದಿನಾಚರಣೆ, ವಿಶೇಷ ಉಪನ್ಯಾಸ ಹಾಗೂ ಬಹುಮಾನ ವಿತರಣೆ, ಉದ್ಘಾಟನೆ: ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಮುಖ್ಯ ಅತಿಥಿ: ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ.ಎಸ್.ಅನಿತಾ, ವಿಶೇಷ ಉಪನ್ಯಾಸ: ಖ್ಯಾತ ಬರಹಗಾರರು ಮತ್ತು ಚಿಂತಕರಾದ ನಾ.ದಿವಾಕರ್, ವಿಷಯ: ಭಾರತ ಸಂವಿಧಾನದ ಪ್ರಸ್ತಾವನೆಯ ಆಶಯಗಳು ಮತ್ತು ಬಾಬೂ ಜಗಜೀವನರಾಮ್, ಅಧ್ಯಕ್ಷತೆ: ಬಾಬೂ ಜಗಜೀವನರಾವ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ. ಸ್ಥಳ: ಬಾಬೂ ಜಗಜೀವನರಾವ್ ಕೇಂದ್ರದ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11 ಗಂಟೆಗೆ.
- **ದಕ್ಷ ಕಾಲೇಜು** : ದಕ್ಷ ದ್ವಿತಿ ವಾರ್ಷಿಕ ಹಬ್ಬ, ರಾಷ್ಟ್ರೀಯ ಸೇವಾ ಯೋಜನೆ ಘಟಕದ ಉದ್ಘಾಟನೆ, ರಕ್ತದಾನ ಶಿಬಿರ, ವ್ಯವಹಾರ ರಸಪ್ರಶ್ನೆ, ಕುಕಿಂಗ್ ವಿತೌಟ್ ಫೈರ್, ನಿಧಿ ಅನ್ವೇಷಣಾ, ಫೋಟೋಗ್ರಫಿ ಹಾಗೂ ವೀಡಿಯೋ ತಯಾರಿಕಾ ಸ್ಪರ್ಧೆ, ಆಟೋ ಎಕ್ಸ್‌ಪೋ ಮೇಳ, ಮುಖ್ಯ ಅತಿಥಿ: ಮೈಸೂರು ವಿವಿಯ ಸ್ವಯಂಸೇವಾ ಯೋಜನೆಯ ಕಾರ್ಯಕ್ರಮ ಸಂಯೋಜಕ ಡಾ.ಎಂ.ಬಿ.ಸುರೇಶ್, ಉಪಸ್ಥಿತಿ: ನಗರಪಾಲಿಕೆ ಸಹಾಯಕ ಆಯುಕ್ತೆ ಶ್ರೀಮತಿ ಪ್ರತಿಭಾ, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಘಟಕದ ವ್ಯವಸ್ಥಾಪಕ ನಿರ್ದೇಶಕ ಗಿರೀಶ್, ಸ್ಥಳ: ಕಲ್ಚರಲ್ ಹಾಲ್, ದಕ್ಷ ಕಾಲೇಜು, ಬೆಳಗ್ಗೆ 9 ರಿಂದ.
- **ಚಂಪಾ ಎಜುಕೇಶನಲ್ ಅಂಡ್ ಚಾರಿಟಬಲ್ ಟ್ರಸ್ಟ್, ಚಂಪಾ ಸ್ಕೂಲ್ ಆಫ್ ಲಾ, ಮೈಸೂರು** : ವಿಶೇಷ ಉಪನ್ಯಾಸ, ಉದ್ಘಾಟನೆ: ಕರ್ನಾಟಕ ಕಾನೂನು ವಿಶ್ವ ವಿದ್ಯಾನಿಲಯದ ಉಪ ಕುಲಪತಿಗಳಾದ ಪ್ರೊ.ಡಾ.ಸಿ ಬಸವರಾಜು, ಮುಖ್ಯ ಅತಿಥಿ: ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ಕೆ.ಕೆ.ಅಮರನಾಥ್, ಸ್ಥಳ: ಚಂಪಾ ಸ್ಕೂಲ್ ಆಫ್ ಲಾ, ಬೆಳಗ್ಗೆ 10.30ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಪಾಸಣಾ ಮತ್ತು ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ರಂಗಜಗಲಿ ಸಾಂಸ್ಕೃತಿಕ ಟ್ರಸ್ಟ್**: ರಂಗ ಸಂಜೆ ಕಾರ್ಯಕ್ರಮ, ಸಂಜೆ 5.30ಕ್ಕೆ ಸಮಾಗಮ ಸಾಂಸ್ಕೃತಿಕ ವೇದಿಕೆ ವತಿಯಿಂದ ಜಾನಪದ ಗೀತಗಾಯನ, ಸಂಜೆ 6ಕ್ಕೆ ಶ್ರೀ ಬಾಲಸುಬ್ರಹ್ಮಣ್ಯ.ಆರ್, ಶಿವಶಂಕರ್. ಡಿ.ಎಸ್ ಮತ್ತು ಸುನಾದ್ ಹೆಗಡೆ ತಂಡದಿಂದ ಹಿಂದೂಸ್ತಾನಿ ಕೊಳಲು ವಾದನ, ಸಂಜೆ 6.30ಕ್ಕೆ ರಾಹುಲ್ ಕುಂಬರಹಳ್ಳಿ ಮತ್ತು ತಂಡದಿಂದ ಜಾನಪದ ಕಥನ ಗೀತೆಗಳು, ಸಂಜೆ 7.30ಕ್ಕೆ ಒಂದು ಹಳ್ಳಿಯ ಕಥೆ ನಾಟಕ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ.
- **ಅರಳಿಕಟ್ಟೆ ಶ್ರೀರಾಮ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ಪರಾಭವನಾಮ ಸಂವತ್ಸರ ಶ್ರೀರಾಮ ನವಮಿ ಪ್ರಯುಕ್ತ ಹನುಮಂತೋತ್ಸವ. ಸರಸ್ವತಿಪುರಂ ಕೃಷ್ಣಧಾಮದ ಶ್ರೀ ವಿಶ್ವೇಶಕೃಷ್ಣ ಭಜನಾ ಮಂಡಳಿಯಿಂದ ಭಜನೆ. ಸಂಜೆ 6.30ಕ್ಕೆ ಮಹಾಮಂಗಳಾರತಿ ರಾತ್ರಿ 8.30ಕ್ಕೆ. ಸ್ಥಳ: ದೇವಸ್ಥಾನದ ಆವರಣ, ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ,

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಹಾಲತಿ ಸೋಮಶೇಖರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಟಿ.ಎನ್.ಅಶ್ವಿನಿ. ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು : ಶಂಕರ್ ಶಾನುಭೋಗ್, 7.45 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಆಂಗ್ಲ ಕಾದಂಬರಿಕಾರರಾದ ಡಾ.ಆರ್.ಕೆ.ನಾರಾಯಣ್ ಅವರೊಂದಿಗೆ ಡಾ.ಯು.ಆರ್. ಅನಂತಮೂರ್ತಿ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಸಂಪತ್ ಕುಮಾರ್–ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ–ಪ್ರಸ್ತುತಿ: ಬಿ.ದಿಗ್ವಿಜಯ್, **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ನಮ್ಮ ಆರೋಗ್ಯ–ವಿಶ್ವ ಆರೋಗ್ಯ ದಿನದ ಸಂದರ್ಭದಲ್ಲಿ ವಿಶ್ವ ಆರೋಗ್ಯ ದಿನದ ಮಹತ್ವ, ಧ್ಯೇಯ ವಾಕ್ಯ ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೈಸೂರು ವಿಭಾಗೀಯ ಸಹನಿರ್ದೇಶಕರ ಕಚೇರಿಯಲ್ಲಿ ಉಪನಿರ್ದೇಶಕರಾಗಿರುವ ಡಾ.ಮಲ್ಲಿಕಾ.ಬಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಗ್ರಾಮ್ ಸಡಕ್ ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ಸಿಂಚನಾ, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಮಾಂಬಳಮ್ ಎಂ.ಕೆ.ಎಸ್.ಶಿವ ಅವರ ನಾಗಸ್ವರ ವಾದನ, 4.00 ಮಹಿಳಾರಂಗ–ನನ್ನ ಹಕ್ಕು ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ –ವಕೀಲರಾದ ಅಂಜಲಿ ರಾಮಣ್ಣ. ಪ್ರಸ್ತುತಿ–ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ : ಈಶ್ವರ್ ಭಟ್.ಎಸ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ, ಮಂಡ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಉದ್ದೇಶ, ಸಾಧನೆಗಳು ಹಾಗೂ ಭವಿಷ್ಯದ ಮಾರ್ಗಸೂಚಿಗಳು ಈ ಕುರಿತು ಕುಲಪತಿ ಡಾ.ಕೆ.ಸಿ.ನಾರಾಯಣ ಸ್ವಾಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಕರ್ನಾಟಕ ಹೈಕೋರ್ಟ್ ನಡೆಸುವ 2024–25ನೇ ಸಾಲಿನ ಕರ್ನಾಟಕ ಸಿವಿಲ್ ನ್ಯಾಯಾಧೀಶರ ಪರೀಕ್ಷೆಯಲ್ಲಿ ಆಯ್ಕೆಯಾದ ಮೈಸೂರು ಜಿಲ್ಲೆ, ಹುಣಸೂರು ತಾಲೂಕಿನ ಸುಹಾಸ್.ಕೆ.ಸಿ ಹಾಗೂ ಮೈಸೂರಿನ ನಿತ್ಯ.ಎನ್.ಗುಜ್ಜರ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಶಾಂತಿರಾವ್–ವೀಣಾವಾದನ, 10.00–ಶ್ರೀ ವಿದ್ಯಾವಿಶಾರದ–ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಸವಿನೆನಪು.

ಮೈಸೂರು ಮಿತ್ರ

ಸೋಮವಾರ 6 ಏಪ್ರಿಲ್ 2026

ಎಸ್‌ಆರ್‌ಹೆಚ್ ಮಣಿಸಿ ಶುಭಾರಂಭ ಮಾಡಿದ ಲಕ್ನೋ



ರಿಷಬ್ ಪಂತ್ ಬ್ಯಾಟಿಂಗ್ ವೈಖರಿ.

ಹೈದರಾಬಾದ್, ಏ.5(ವಿವಿಹೆಚ್)– ಲಖನೌ ಸೂಪರ್‌ಜೈಂಟ್ಸ್ ತಂಡದ ನಾಯಕ ರಿಷಬ್ ಪಂತ್ ಅವರ ಆಕರ್ಷಕ ಬ್ಯಾಟಿಂಗ್ ನೆರವಿನಿಂದ, ಎಸ್‌ಆರ್‌ಎಚ್ ವಿರುದ್ಧದ ಪಂದ್ಯದಲ್ಲಿ ಲಖನೌ ತಂಡವು ರೋಚಕ ಜಯ ಸಾಧಿಸಿದೆ.

ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಪಿಎಲ್ ಸೀಸನ್ 19ರ 10ನೇ ಪಂದ್ಯದಲ್ಲಿ ಹೈದರಾಬಾದ್ ನೀಡಿದ 157 ರನ್‌ಗಳ ಗುರಿ ಬೆನ್ನಟ್ಟಿದ ಲಖನೌ ತಂಡಕ್ಕೆ ಆರಂಭಿಕ ಬ್ಯಾಟರ್ ಏಡನ್ ಮಾರ್ಕರಂ (45 ರನ್) ಆಕರ್ಷಕ ಬ್ಯಾಟಿಂಗ್ ನಡೆಸಿದರು. ಆದರೆ, ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯದಿಂದಾಗಿ ಪಂದ್ಯ ರೋಚಕ ಹಂತ ತಲುಪಿತ್ತು. ಆದರೆ, ಕೊನೆಯವರೆಗೂ ಕ್ರೀಸ್ ಕಚ್ಚಿ ಆಡಿದ ರಿಷಬ್ ಪಂತ್ (ಅಜೇಯ 68) ಅವರ ಬ್ಯಾಟಿಂಗ್ ನೆರವಿನಿಂದ ಲಖನೌ ತಂಡವು 19.4 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 160 ರನ್ ಗಳಿಸಿ ಜಯ ದಾಖಲಿಸಿತು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್ ಮಾಡಿದ ಎಸ್‌ಆರ್‌ಎಚ್ ತಂಡವು ಮೊದಲ 10 ಓವರ್‌ಗಳಲ್ಲಿ ಅಗ್ರಕ್ರಮಾಂಕದ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಆಕರ್ಷಕ ಬ್ಯಾಟಿಂಗ್ ನಡೆಸಿದ ಹೆನ್ರಿಕ್ ಕ್ಲಾಸೆನ್ 41 ಎಸೆತ ಎದುರಿಸಿ 5ಬೌಂಡರಿ, 2 ಸಿಕ್ಸರ್ ಒಳಗೊಂಡಂತೆ 62 ರನ್ ಗಳಿಸಿದರೆ, ನಿತೀಶ್ ಕುಮಾರ್ ರೆಡ್ಡಿ 33ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ 56 ರನ್ ಕಲೆಹಾಕಿದರು. ಈ ಜೋಡಿ 116 ರನ್‌ಗಳ ಜೊತೆಯಾಟ ಆಡುವ ಮೂಲಕ ಸ್ಪರ್ಧಾತ್ಮಕ ಮೊತ್ತ ಕಲೆಹಾಕಲು ನೆರವಾದರು.

ಲಖನೌ ಪರ ಉತ್ತಮ ಬೌಲಿಂಗ್ ದಾಳಿ ನಡೆಸಿದ ಮೊಹಮ್ಮದ್ ಶಮಿ ಅವರು ಕೇವಲ 9 ರನ್ ನೀಡಿ ಪ್ರಮುಖ 2 ವಿಕೆಟ್ ಪಡೆದು ಮಿಂಚಿದರು. ಇವರ ಜೊತೆ ಆವೇಶ್ ಖಾನ್ ಹಾಗೂ ಪ್ರಿನ್ಸ್ ಯಾದವ್ ಕೂಡ 2 ವಿಕೆಟ್ ಪಡೆದು ಮಿಂಚಿದರು. ಅಂತಿಮವಾಗಿ ಎಸ್‌ಆರ್‌ಎಚ್ ತಂಡವು ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 158 ರನ್ ಕಲೆಹಾಕಿತು. ಉತ್ತಮ ಬೌಲಿಂಗ್ ಪ್ರದರ್ಶನ ತೋರುವ ಮೂಲಕ ಲಕ್ನೋ ಗೆಲುವಿಗೆ ಪ್ರಮುಖ ಕಾರಣರಾದ ಮೊಹಮ್ಮದ್ ಶಮಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಚಿನ್ನಸ್ವಾಮಿಯಲ್ಲಿ ಡೇವಿಡ್ ಅಬ್ಬರ; ಸಿಎಸ್‌ಕೆ ತತ್ತರ

●25 ಎಸೆತಗಳಲ್ಲಿ 70 ರನ್ ಚಚ್ಚಿದ ಟಿಮ್ ಡೇವಿಡ್ ●ಸಿಎಸ್‌ಕೆ ವಿರುದ್ಧ 250ರನ್ ಬಾರಿಸಿದ ಆರ್‌ಸಿಬಿ ●ಸಿಎಸ್‌ಕೆಗೆ ಹ್ಯಾಟ್ರಿಕ್ ಸೋಲು ●ಆರ್‌ಸಿಬಿಗೆ 43 ರನ್ ಜಯ





ಆರ್‌ಸಿಬಿ ಆಟಗಾರರ ಸಂಭ್ರಮ.

ಬೆಂಗಳೂರು, ಏ.5(ವಿವಿಹೆಚ್)– ಟಿಮ್ ಡೇವಿಡ್ ದೇವ್‌ದತ್ ಪಡಿಕ್ಕಲ್ ಅವರ ಅರ್ಧ ಶತಕದಾಟದ ಬಲದಿಂದ ಬಲಿಷ್ಠ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 43 ರನ್‌ಗಳಿಂದ ಮಣಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು. ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 19ನೇ ಆವೃತ್ತಿಯ ಐಪಿಎಲ್–2026ರ 11 ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ಕಳೆದು ಕೊಂಡು 250 ರನ್ ಗಳಿಸಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಚೆನ್ನೈ ಸೂಪರ್ ಕಿಂಗ್ಸ್ 19.4 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 207ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಮೊದಲು ಬ್ಯಾಟಿಂಗ್ ಇಳಿದ ಆರ್‌ಸಿಬಿ ಪರ ವಿರಾಟ್ ಕೊಹ್ಲಿ ಹಾಗೂ ಫಿಲ್ ಸಾಲ್ಟ್ ಮೊದಲ ಎರಡು ಓವರ್ ಯಾವುದೇ ಬೌಂಡರಿ ಬಾರಿಸಲಾಗದೇ ಪರದಾಡಿದರಾದರೂ ನಂತರ ಒಳ್ಳೆಯ ರನ್ ಕಲೆಹಾಕಿ ಸಮಾಧಾನಕರ ಆರಂಭ ಕಟ್ಟಿಕೊಟ್ಟರು. ಕೊಹ್ಲಿ 28 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ಫಿಲ್ ಸಾಲ್ಟ್ 46 ರನ್ ಬಾರಿಸಿ ನಿರ್ಗಮಿಸಿದರು.

ಬಳಿಕ ಅಬ್ಬರಿಸಿದ ದೇವದತ್ ಪಡಿಕ್ಕಲ್ 29 ಎಸೆತಗಳಲ್ಲಿ 5 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ 50 ರನ್ ಚಚ್ಚಿದರು. ಪಡಿಕ್ಕಲ್ ವಿಕೆಟ್ ಬಿದ್ದ ಬಳಿಕ ಜೊತೆಯಾದ ನಾಯಕ ರಜತ್ ಪಟಿದಾರ್ ಹಾಗೂ ಟಿಮ್ ಡೇವಿಡ್ ಜೋಡಿ 35 ಎಸೆತಗಳಲ್ಲಿ 99 ರನ್ ಚಚ್ಚಿ ಸಿಕ್ಸರ್‌ಗಳ ಸುರಿಮಳೆ ಸುರಿಸಿದರು.

ರಜತ್ ಪಟಿದಾರ್ 19 ಎಸೆತಗಳಲ್ಲಿ 1 ಬೌಂಡರಿ ಹಾಗೂ 6 ಸಿಕ್ಸರ್ ಸಹಿತ ಅಜೇಯ 48 ರನ್ ಬಾರಿಸಿ ಅಬ್ಬರಿಸಿದರೆ, ಟಿಮ್ ಡೇವಿಡ್ ಮೊದಲ ಆರು ಎಸೆತಗಳಲ್ಲಿ ನಿಧಾನಗತಿಯ ಆಟವನ್ನಾಡಿ ಬಳಿಕ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶನ ನೀಡಿ 25 ಎಸೆತಗಳಲ್ಲಿ 3 ಬೌಂಡರಿ ಹಾಗೂ 8 ಸಿಕ್ಸರ್ ಸಹಿತ ಅಜೇಯ 70 ರನ್ ಬಾರಿಸಿ, ತಂಡದ ಮೊತ್ತ ಇನ್ನೂರೈವತ್ತು ದಾಟಲು ಕಾರಣರಾದರು.

ಆರ್‌ಸಿಬಿ ರೌದ್ರನರ್ತನಕ್ಕೆ ಕಂಗಾಲಾದ ಚೆನ್ನೈ ಸೂಪರ್ ಕಿಂಗ್ಸ್ ಪರ ಅನ್ಶುಲ್ ಕಾಂಬೋಜ್, ಜೇಮಿ ಓವರ್‌ನ್ ಹಾಗೂ ಶಿವಮ್ ದುಬೆ ತಲಾ ಒಂದೊಂದು ವಿಕೆಟ್ ಪಡೆದರು.

ಆರ್‌ಸಿಬಿ ನೀಡಿದ ಬೃಹತ್ ಮೊತ್ತ ಬೆನ್ನತ್ತಿದ ಸಿಎಸ್‌ಕೆಗೆ ಆರಂಭಿಕ ಆಘಾತ ಎದುರಾಯಿತು. ಸಂಜು ಸ್ಯಾಮ್ಸನ್ 9, ನಾಯಕ ಋತುರಾಜ್ ಗಾಯಕ್ವಾಡ್ 7, ಆಯೂಷ್ ಮ್ಹಾತ್ರೆ 1 ರನ್ ಗಳಿಸಿ ಮುಗ್ಗರಿಸಿದರು. ಆ ಮೂಲಕ ಸಿಎಸ್‌ಕೆ 2.5 ಓವರ್‌ಗಳಲ್ಲಿ 30 ರನ್ ಗಳಿಗೆ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಈ ವೇಳೆ ಅಬ್ಬರದ ಬ್ಯಾಟಿಂಗ್ ಆಡಿದ ಸರ್ಫರಾಜ್ ಖಾನ್ 25 ಎಸೆತಗಳಲ್ಲಿ 50 ರನ್ ಕಲೆಹಾಕಿ ಔಟಾದರು. ಬಳಿಕ ಬಂದ ಕಾರ್ತಿಕ್ ಶರ್ಮಾ 6 ರನ್ ಗಳಿಸಿ ಬಂದಷ್ಟೆ ವೇಗವಾಗಿ ಹಿಂತಿರುಗಿದರು.

ಕೆಳಕ್ರಮಾಂಕದಲ್ಲಿ ಅಬ್ಬರಿಸಿದ ಪ್ರಶಾಂತ್ ವೀರ್ 29 ಎಸೆತಗಳಲ್ಲಿ 43 ಹಾಗೂ ಜೇಮಿ ಓವರ್‌ಟನ್ 16 ಎಸೆತಗಳಲ್ಲಿ 37 ರನ್ ಗಳಿಸಿದರು. ಉಳಿದಂತೆ ಶಿವಂ ದುಬೆ 18, ನೂರ್ ಅಹ್ಮದ್ 8, ಮ್ಯಾಟ್ ಹೆನ್ರಿ 2 ಹಾಗೂ ಅನ್ಶುಲ್ ಕಂಬೋಜ್ ಅಜೇಯ 12 ರನ್ ಗಳಿಸಿದರು.

ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ ಪ್ರಮುಖ 3 ವಿಕೆಟ್ ಕಿತ್ತರು. ಜಾಕೋಬ್ ಡಫಿ, ಅಭಿನಂದನ್ ಸಿಂಗ್ ಹಾಗೂ ಕ್ರುನಾಲ್ ಪಾಂಡ್ಯ ತಲಾ 2 ವಿಕೆಟ್, ಸುಯೇಶ್ ಶರ್ಮಾ ಒಂದು ವಿಕೆಟ್ ಕಬಳಿಸಿದರು.

ಭರ್ಜರಿ ಬ್ಯಾಟಿಂಗ್ ಮೂಲಕ ಆರ್‌ಸಿಬಿಗೆ ಗೆಲುವು ತಂದುಕೊಟ್ಟ ಟಿಮ್ ಡೇವಿಡ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಜೆಎಸ್‌ಎಸ್ ಐಪಿಎಲ್ ಫ್ಯಾನ್ ಪಾರ್ಕ್‌ನಲ್ಲಿ ಸಿಎಸ್‌ಕೆ, ಆರ್‌ಸಿಬಿ ಪಂದ್ಯ ವೀಕ್ಷಣೆ

ಅಭಿಮಾನಿಗಳ ಜೈಕಾರ, ವಿಜಯೋತ್ಸವ ಆಚರಣೆ



ಸಿಎಸ್‌ಕೆ ಮತ್ತು ಆರ್‌ಸಿಬಿ ಪಂದ್ಯಾವಳಿ ವೀಕ್ಷಣೆಗಾಗಿ ಕಾದುಕುಳಿತಿರುವ ಅಭಿಮಾನಿಗಳು.

ಮೈಸೂರು, ಏ.5(ವಿವಿಹೆಚ್)– ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿ ಆವರಣದಲ್ಲಿ ರೂಪಿಸಿರುವ ಐಪಿಎಲ್ ಫ್ಯಾನ್ ಪಾರ್ಕ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ನಡುವಣ ರೋಚಕ ಪಂದ್ಯಾವಳಿಯನ್ನು ಮೈಸೂರಿಗರು ವೀಕ್ಷಿಸಿ ಸಂತಸಪಟ್ಟರು.

ಭಾನುವಾರ ಸಂಜೆ ಪಂದ್ಯ ಆರಂಭಕ್ಕೆ ಅರ್ಧ ಗಂಟೆಗೂ ಮುನ್ನಾ ಜಮಾಯಿಸಿದ ಸಾವಿರಾರು ಮಂದಿ ಅಭಿಮಾನಿಗಳು ಆರ್‌ಸಿಬಿಗೆ ಜೈಕಾರಹಾಕಿ ಅಭಿಮಾನ ಮೆರೆದರು.

ಮಕ್ಕಳು, ಮಹಿಳೆಯರು, ವಿಶೇಷ ಚೇತನರು, ಹಿರಿಯರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ತಮ್ಮ ನೆಚ್ಚಿನ ತಂಡಕ್ಕೆ ಬೆಂಬಲ ಸೂಚಿಸಿದರು. ಹೆಚ್ಚಾಗಿ ಮಕ್ಕಳು, ಯುವತಿಯರು ಆರ್‌ಸಿಬಿ ಜೆರ್ಸಿ ಧರಿಸಿ ಮತ್ತಷ್ಟು ಮೆರಗು ನೀಡಿದರು. ಕೆಲವರು ಮುಖಕ್ಕೆ ಬಣ್ಣ ಬಳಿದುಕೊಂಡರೆ, ಮತ್ತೆ ಕೆಲವರು ನೆಚ್ಚಿನ ತಂಡದ ಧ್ವಜಗಳನ್ನು ಹಿಡಿದು ಸಂಭ್ರಮಿಸಿದರು. ಪಂದ್ಯ ಮುಗಿಯುವವರೆಗೂ ಆರ್‌ಸಿಬಿ.. ಆರ್‌ಸಿಬಿ ಎಂದು ತಂಡದ ಪ್ರದರ್ಶನಕ್ಕೆ ಬೆಂಬಲ ಸೂಚಿಸಿದರು.

ಇದಲ್ಲದೇ ಫ್ಯಾನ್ ಪಾರ್ಕ್‌ನಲ್ಲಿ ಸಂಗೀತ, ಆಹಾರ ಮಳಿಗೆ, ವಿವಿಧ ಆಟಗಳೂ ಇದ್ದವು. ನೈಜ ಪಂದ್ಯಗಳನ್ನು ವೀಕ್ಷಿಸಲು ಸಾಧ್ಯವಾಗದಿರುವವರಿಗೆ ಅಂಥಹುದೇ ಅನುಭವವನ್ನು ಈ ಫ್ಯಾನ್ ಪಾರ್ಕ್ ಒದಗಿಸಿತ್ತು. ಹಾಗಯೇ ಅಂಗವಿಕಲರು, ಹಿರಿಯ ನಾಗರಿಕರು ಹಾಗೂ ಗರ್ಭಿಣಿಯರಿಗೆ ಪ್ರತ್ಯೇಕ ಆಸನಗಳ ವ್ಯವಸ್ಥೆ ಮಾಡಲಾಗಿತ್ತು.

ಇದೇ ಶನಿವಾರ (ಏ. 4) ಮತ್ತು ಭಾನುವಾರ (ಏ. 5) ಒಟ್ಟು 4 ಐಪಿಎಲ್ ಪಂದ್ಯ ವೀಕ್ಷಣೆಗೆ ಫ್ಯಾನ್ ಪಾರ್ಕ್ ರೂಪಿಸಿದ್ದು, ದೊಡ್ಡ ಎಲ್‌ಇಡಿ ಪರದೆ ಯಲ್ಲಿ ನೇರಪ್ರಸಾರ ಮಾಡಲಾಯಿತು.

ಪಂದ್ಯ ನೇರ ಪ್ರಸಾರ ವೀಕ್ಷಣೆಗೆ ಜೆಎಸ್‌ಎಸ್ ಆವರಣಕ್ಕೆ ಆಗಮಿಸಿದ ಅಭಿಮಾನಿಗಳಿಗೆ ಕೊಂಚ ನಿರಾಸೆ ಯಾಯಿತು. ಸ್ಥಳಾವಕಾಶದ ಕೊರತೆ ಎಂದೋ, ವಾಹನಗಳ ಪಾರ್ಕಿಂಗ್ ಜಾಗವೆಲ್ಲಾ ತುಂಬಿದೆ ಎಂದು ಹೇಳಿ ಅಭಿಮಾನಿಗಳನ್ನು ಅಂಗಳದೊಳಗಡೆಗೆ ಬಿಡಲು ನಿರಾಕರಿಸಿದ ವಾಚ್‌ಮೆನ್‌ಗಳ ವಿರುದ್ಧ ಕೆಂಡಾಮಂಡಲವಾದ ಅಭಿಮಾನಿಗಳು, ಹಾಕಲಾಗಿದ್ದ ಗೇಟ್ ತಾವೇ ತೆಗೆದು ಒಳನುಗ್ಗಿದರು. ಕೆಲವರು ಕಾಂಪೌಂಡ್ ಮೇಲಿಂದ ಹಾರಿದರು.

ಸೈಬರ್ ವಂಚಕರ ಬಲೆಗೆ ಬಿದ್ದ ಹಿರಿಯ ನಾಗರಿಕ; 7.50 ಲಕ್ಷ ವಂಚನೆ



ಮೈಸೂರು,ಏ.5(ಪಿಎಂ)– ಸೈಬರ್ ವಂಚಕರ ಆನ್‌ಲೈನ್ ಟ್ರೇಡಿಂಗ್ ಎಂಬ ಮೋಸದ ಜಾಲಕ್ಕೆ ಸಿಲುಕಿ ಹಿರಿಯ ನಾಗರಿಕರೊಬ್ಬರು 7,50,000 ರೂ. ಕಳೆದು ಕೊಂಡಿರುವ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿವೃತ್ತ ಉದ್ಯೋಗಿಯೂ ಆದ 80 ವರ್ಷದ ಹಿರಿಯ ನಾಗರಿಕರೊಬ್ಬರು (ಪುರುಷರು) ಸೈಬರ್ ವಂಚಕರ ಬಲೆಗೆ ಬಿದ್ದು ಮೋಸ ಹೋಗಿದ್ದಾರೆ. ಅಪರಿಚಿತ ವಾಟ್ಸಾಪ್ ಗ್ರೂಪ್‌ವೊಂದಕ್ಕೆ ಈ ಹಿರಿಯ ನಾಗರಿಕರ ಮೊಬೈಲ್ ನಂಬರ್ ಸೇರ್ಪಡೆಗೊಳಿಸಿ ಬಳಿಕ ಅವರನ್ನು ನಂಬಿಸಿ ವಂಚಿಸಲಾಗಿದೆ.

ಜ.30ರಂದು ನನ್ನ ಮೊಬೈಲ್ ನಂಬರ್, ವಾಟ್ಸಾಪ್ ಗ್ರೂಪ್‌ವೊಂದಕ್ಕೆ ಸೇರ್ಪಡೆಯಾಯಿತು. ಇದರಲ್ಲಿ ಪ್ರೈಮರಿ ಮಾರ್ಕೆಟಿಂಗ್ ಸ್ಟಾಕ್ಸ್‌ಗಳ ಬಗ್ಗೆ ಮಾಹಿತಿ ನೀಡಲಾಗುತ್ತಿತ್ತು. ಹಾಗಾಗಿ ಈ ಬಗ್ಗೆ ಆಸಕ್ತಿ ಮೂಡಿತು. ಆ ಬಳಿಕ ಮತ್ತೊಬ್ಬರು ಇನ್ನೊಂದು ಗ್ರೂಪ್‌ಗೆ ನನ್ನ ನಂಬರ್ ಸೇರ್ಪಡೆ ಮಾಡಿದರು. ಈ ಗ್ರೂಪ್‌ನಲ್ಲಿ ದೊರೆತ ಸಲಹೆಯಂತೆ ಟ್ರೇಡಿಂಗ್ ಖಾತೆ ತೆರೆದು ಪ್ರಾರಂಭದಲ್ಲಿ 50 ಸಾವಿರ ರೂ. ಹೂಡಿಕೆ ಮಾಡಿ ಸ್ಟಾಕ್ಸ್ ಖರೀದಿ ಮಾಡಿದ್ದೆ ಎಂದು ಸದರಿ ಹಿರಿಯ ನಾಗರಿಕರು ದೂರಿನಲ್ಲಿ ತಿಳಿಸಿದ್ದಾರೆ.

ಇದಕ್ಕೆ ಲಾಭ ಇದೆಯೆಂದು ಟ್ರೇಡಿಂಗ್ ಖಾತೆಯಲ್ಲಿ ತೋರಿಸಿತು. ಇದನ್ನು ನಂಬಿ ವಿವಿಧ ಹಂತಗಳಲ್ಲಿ ಒಟ್ಟು 7,50,000 ರೂ. ಹಣವನ್ನು ಹೂಡಿಕೆ ಮಾಡಿದೆ. ನಂತರ 7,40,492 ರೂ. ಲಾಭ ಬಂದಿದೆ ಎಂದು ಟ್ರೇಡಿಂಗ್ ಖಾತೆಯಲ್ಲಿ ತೋರಿಸಿತು. ನಂತರ ಲಾಭದ ಹಣ ಡ್ರಾ ಮಾಡಲು ಸಾಧ್ಯವಾಗದೇ ಹೋದಾಗ ವಂಚನೆಗೆ ಒಳಗಾಗಿರುವುದು ತಿಳಿಯಿತು ಎಂದು ಅವರು ನೀಡಿದ ದೂರಿನನ್ವಯ ಏ.4ರಂದು ಎಫ್‌ಐಆರ್ ದಾಖಲಾಗಿದೆ.

ನಕ್ಕರೆ ಅದೇ ಸ್ವರ್ಗ

ಸರ್ದಾರ್ಜಿ (ಆಟೋರಿಕ್ಷಾದವನ ಬಳಿ): ಬಸ್ ಸ್ಟ್ಯಾಂಡಿಗೆ ಬರೋಕೆ ಎಷ್ಟು ತಗೋತೀಯಾ?
ಆಟೋರಿಕ್ಷಾದವ: ಇಪ್ಪತ್ತು ರೂಪಾಯಿ.
ಸರ್ದಾರ್ಜಿ: ಎರಡು ರೂಪಾಯಿ ಕೊಡ್ತೀನಿ ಬರ್ತಿಯಾ?
ಆಟೋರಿಕ್ಷಾದವ: 2 ರೂಪಾಯಿಗೆ ಯಾರು ಕರ್ಕೊಂಡ್ ಹೋಗಲ್ಲ
ಸರ್ದಾರ್ಜಿ: ನಾನೇ ಕರ್ಕೊಂಡ್ ಹೋಗ್ತೀನಿ. ನೀನು ಹಿಂದೆ ಕೂತ್ಕೊ!

ಮೈಸೂರು ಮಿತ್ರ

ಸೋಮವಾರ, ಏಪ್ರಿಲ್ 6, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬೇರೆಯವರು ನಿಮ್ಮನ್ನು ಗಾಢವಾಗಿ ಪ್ರೀತಿಸಿದಾಗ ನಿಮ್ಮ ಬಲ ಹೆಚ್ಚುತ್ತದೆ. ನೀವು ಬೇರೆಯವರನ್ನು ಗಾಢವಾಗಿ ಪ್ರೀತಿಸಿದಾಗ ನಿಮ್ಮಲ್ಲಿ ಧೈರ್ಯ ಹೆಚ್ಚುತ್ತದೆ. –ಲಾವೊಟ್ಸು


ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಕಳು ಕಪ್ಪಾದರೆ, ಹಾಲು ಕಪ್ಪೆ

ನಿಮ್ಮ ಪತ್ರಗಳು

ಮಹದೇಶ್ವರರ ಮಹಿಮೆಯನ್ನು ರಂಗದ ಮೇಲೆ ರಂಜಿಸಿದ ನಿರ್ದೇಶಕ ಚಮ್ಮಾಳಿಗೆ

ಮಾನ್ಯರೇ,

ಮೈಸೂರಿನ ರಂಗ ನಿರ್ದೇಶಕ ದಿನೇಶ್ ಚಮ್ಮಾಳಿಗೆ ಅವರು ನಾಲ್ವಡಿ ಸೋಶಿಯಲ್ ಕಲ್ಚರಲ್ ಎಜುಕೇಶನಲ್ ಟ್ರಸ್ಟ್ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದ ಅಡಿಯಲ್ಲಿ ಸುಮಾರು 40ಕ್ಕಿಂತ ಹೆಚ್ಚು ರಂಗಭೂಮಿ ಕಲಾವಿದರನ್ನು ಒಳಗೊಂಡ ತಂಡವನ್ನು ಕಟ್ಟಿಕೊಂಡು ಅನಿಕೇತನ ಎಂಬ ರಂಗಭೂಮಿ ಶಿಬಿರವನ್ನು ಆಯೋಜಿಸಿ ಅಲ್ಲಿನ ಶಿಬಿರಾರ್ಥಿಗಳಿಗೆ ಮೂರು ತಿಂಗಳ ಕಾಲ ನಿರಂತರವಾಗಿ ರಂಗ ಕಲೆಯನ್ನು ಪ್ರಯೋಗಾತ್ಮಕವಾಗಿ ಬೋಧನೆ ಮಾಡಿ ಶಿಬಿರಾರ್ಥಿಗಳಿಂದ ತಮ್ಮ ನಿರ್ದೇಶನದಲ್ಲಿ ಮಲೆ ಮಹದೇಶ್ವರರ ಜೀವನಾಧಾರಿತ ನಾಟಕವನ್ನು ರಂಗದ ಮೇಲೆ ತಂದ ಅತ್ಯುತ್ತಮ ನಾಟಕ ಮಹಾಶರಣ ಮಾದಪ್ಪ.



ಮೈಸೂರು ಪ್ರಾಂತ್ಯದಲ್ಲಿ ಕೋಟ್ಯಂತರ ಭಕ್ತರನ್ನು ಹೊಂದಿರುವ ಮಹದೇಶ್ವರರೂ ತಮ್ಮ ಜೀವಿತಾವಧಿಯಲ್ಲಿ ಈ ಸಮಾಜಕ್ಕೆ ಮತ್ತು ತನ್ನ ನಂಬಿದ ಜನಗಳಿಗೆ ಮಾಡಿದ ಅತ್ಯುತ್ತಮ ಕಾರ್ಯಗಳನ್ನು ಹಾಗೂ ಸಾಮಾಜಿಕ ಅಂಧಕಾರದ ಮೌಢ್ಯತೆಗಳ ವಿರುದ್ಧ ಮಾಡಿದ ಹೋರಾಟದ ಇತಿಹಾಸವನ್ನು ರಂಗದ ಮೇಲೆ ತೋರಿಸಿದ್ದು ನಿಜಕ್ಕೂ ರೋಮಾಂಚನ. ತಾನು ಸಂಚರಿಸಿದ ಜಾಗದಲ್ಲೆಲ್ಲಾ ಸಮಾನತೆ ಎಂಬ ಬೀಜವನ್ನು ಆ ಕಾಲಘಟ್ಟದಲ್ಲೇ ಬಿತ್ತಿ ಮನುಷ್ಯತ್ವದ ಮಾನವೀಯ ಮೌಲ್ಯಗಳಿಗೆ ಬೆಲೆ ಕೊಟ್ಟ ಮಹಾನ್ ಪುರುಷ ಎಂಬ ಮರೆತಿದ್ದ ಐತಿಹಾಸಿಕ ಇತಿಹಾಸವನ್ನು ನಿರ್ದೇಶಕರಾದ ದಿನೇಶ್ ಚಮ್ಮಾಳಿಗೆ ಅವರು ಮಹಾಶರಣ ಮಾದಪ್ಪ ನಾಟಕದಲ್ಲಿ ತೋರಿಸಿರುವುದು ಉತ್ತಮವಾಗಿದೆ. ಈ ನಾಟಕವು ಮೈಸೂರಿನ ರಂಗಾಯಣದ ಕಿರುರಂಗಮಂದಿರದಲ್ಲಿ ಉತ್ತಮ ಪ್ರದರ್ಶನ ಕಂಡು ಜನ ಮೆಚ್ಚುಗೆಯನ್ನು ಗಳಿಸಿರುವುದು ನಿಜಕ್ಕೂ ನಿರ್ದೇಶಕರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಂತಾಗಿದೆ. **–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ.**

ತೃತೀಯ ಭಾಷೆಯಾಗಿ ಕನ್ನಡ ಆರಿಸಿಕೊಂಡವರ ಗತಿಯೇನು?

ಮಾನ್ಯರೆ,

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷೆ ಆಟಕ್ಕುಂಟು ಲೆಕ್ಕಿಲ್ಲವಂತೆ. ಹಿಂದಿ ಸೇರಿ ತೃತೀಯ ಭಾಷೆಗಳಿಗೆ ಅಂಕವೂ ಇಲ್ಲ...ಪಾಸು ಫೇಲೂ ಇಲ್ಲ... ಎಂದಿದ್ದಾರೆ ಶಿಕ್ಷಣ ಸಚಿವ ಮಧು ಬಂಗಾರಪ್ಪ. ಹಿಂದಿಯನ್ನು ಹಿಂದಿಕ್ಕುವ ಭರದಲ್ಲಿ ಕನ್ನಡವನ್ನೂ ಹಿಂದಕ್ಕಟ್ಟಿದಂತಾಗಿದೆಯೇ? ಹೌದು! ಪ್ರಥಮ ಭಾಷೆಯಾಗಿ ಕನ್ನಡವನ್ನು ಆಯ್ಕೆ ಮಾಡಿಕೊಂಡವರು ತೃತೀಯ ಭಾಷೆಯಾಗಿ ಹಿಂದಿಯನ್ನು ಆರಿಸಿಕೊಂಡಿರುತ್ತಾರೆ. ಪ್ರಥಮ ಭಾಷೆಯಾಗಿ ಸಂಸ್ಕೃತ ಭಾಷೆಯನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ತೃತೀಯ ಭಾಷೆಯಾಗಿ ಕನ್ನಡವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ತೃತೀಯ ಭಾಷೆಯಲ್ಲಿ ಕನ್ನಡವೂ ಸೇರಿರುವುದರಿಂದ ಕನ್ನಡ ಭಾಷೆಗೂ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ನೀತಿಯನ್ನು ಶಿಕ್ಷಣ ಸಚಿವರು ಹೇರಿದಂತಾಗಿದೆ! **–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.**

ಬೇಸಿಗೆ ಶಿಬಿರದಲ್ಲಿ ಪ್ರತಿಭೆ ಇರುವ ಮಕ್ಕಳಿಗೆ ಅವಕಾಶ ನೀಡಿ

ಮಾನ್ಯರೆ,

ಈಗ ಮಕ್ಕಳಿಗೆ ಬೇಸಿಗೆ ರಜಾ ಆರಂಭವಾದ ಕೂಡಲೆ ಎಲ್ಲೆಲ್ಲೂ ಬೇಸಿಗೆ ಶಿಬರವನ್ನು ಏರ್ಪಡಿಸಲಾಗುತ್ತಿದೆ. ಇದು ಒಂದು ಸಂಪಾದನೆಯ ಮಾರ್ಗವು ಆಗಿದೆ. ಹಣ ಇರುವವರು ಈ ಶಿಬಿರಕ್ಕೆ ಮಕ್ಕಳನ್ನು ಸೇರಿಸಿ ಸಂಭ್ರಮಿಸುತ್ತಾರೆ. ಆದರೆ ಆರ್ಥಿಕವಾಗಿ ಹಿಂದುಳಿದ ಮಕ್ಕಳಲ್ಲಿ ಪ್ರತಿಭೆಯಿದ್ದರೂ ಇವರು ಶಿಬಿರದಲ್ಲಿ ಸೇರಿಸದೆ ರಜೆಯಲ್ಲಿ ಸಮಯವನ್ನು ವ್ಯರ್ಥ ಮಾಡುತ್ತಾರೆ. ಇವರ ಕಲೆಗೆ ಹಣ ಇಲ್ಲ ಎಂದು ಯಾರು ಪ್ರೋತ್ಸಾಹ ಕೊಡುವುದಿಲ್ಲ. ಆದ್ದರಿಂದ ಇಂತಹ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ನಿಮ್ಮ ಶಿಬಿರದಲ್ಲಿ ಕಲೆ ಹಾಗೂ ಪ್ರತಿಭೆಗಳಿಗೆ ಬೆಲೆ ಕೊಟ್ಟು ಸೇರಿಸಿಕೊಳ್ಳಿ. ಇದರಿಂದ ಇವರಲ್ಲಿರುವ ಪ್ರತಿಭೆಯನ್ನು ನೋಡಿ ಬೇರೆ ಮಕ್ಕಳಿಗೂ ಸ್ಫೂರ್ತಿ ಆಗುತ್ತದೆ. ಈ ಮಕ್ಕಳು ಸಮಾಜದಲ್ಲಿ ಎಲ್ಲರೊಂದಿಗೆ ಬೆರೆತು ತಮ್ಮ ಪ್ರತಿಭೆಯನ್ನು ಹೊರಹಾಕಲು ಅವಕಾಶ ಸಿಕ್ಕಂತಾಗುತ್ತದೆ. ಈ ಬಗ್ಗೆ ಶಿಬಿರ ನಡೆಸುವವರು ಯೋಚಿಸಿದರೆ ಒಳ್ಳೆಯದು. ಮಕ್ಕಳಿಗೂ ಪ್ರೋತ್ಸಾಹ ಕೊಟ್ಟಂತಾಗುತ್ತದೆ. **–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ**

ನೀರಿನ ದರ ಏರಿಕೆ ಅವೈಜ್ಞಾನಿಕ

ಮಾನ್ಯರೇ,

ಬೆಂಗಳೂರು ಜಲಮಂಡಳಿಯ ನೀರಿನ ಅವೈಜ್ಞಾನಿಕ ದರ ಏರಿಕೆ ಖಂಡನೀಯ. ಮಂಡಳಿಯು ನೀರಿನ ದರವನ್ನು ಶೇ.3ರಷ್ಟು ಹೆಚ್ಚಿಸಲು ಮುಂದಾಗಿರುವುದು ಜನಸಾಮಾನ್ಯರ ಗಾಯದ ಮೇಲೆ ಬರೆ ಎಳೆದಂತಾಗಿದೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ ಈ ಏಪ್ರಿಲ್ 1ರ ಉಡುಗೊರೆ ಅರಗಿಸಿಕೊಳ್ಳಲಾಗದ ಕಹಿ ಸತ್ಯ. ಕೇವಲ ದರ ಹೆಚ್ಚಳದ ಮೂಲಕ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸುವುದು ಮಂಡಳಿಯ ಆಡಳಿತಾತ್ಮಕ ವೈಫಲ್ಯವನ್ನು ತೋರಿಸುತ್ತದೆ. ಕಾವೇರಿ 5ನೇ ಹಂತದ ಯೋಜನೆಗೆ ಹಣ ಹೊಂದಿಸಲು ಸಾರ್ವಜನಿಕರ ಜೇಬಿಗೆ ಕೈಹಾಕುವ ಬದಲು, ಶೇ.35ಕ್ಕಿಂತ ಹೆಚ್ಚಿರುವ ಸೋರಿಕೆ ಮತ್ತು ಲೆಕ್ಕವಿಲ್ಲದ ನೀರು ವ್ಯರ್ಥವಾಗುವುದನ್ನು ತಡೆಗಟ್ಟಲಿ. ಬೃಹತ್ ಅಪಾರ್ಟ್‌ಮೆಂಟ್‌ಗಳಲ್ಲಿ ಎಸ್‌ಟಿಪಿ ನೀರು ಮರುಬಳಕೆಯನ್ನು ಕಡ್ಡಾಯಗೊಳಿಸಿ ಹೊರೆ ಕಡಿಮೆ ಮಾಡಿ. ಬಾಕಿ ಇರುವ ವಾಣಿಜ್ಯ ಬಿಲ್‌ಗಳನ್ನು ಕಠಿಣವಾಗಿ ವಸೂಲಿ ಮಾಡಿ. ಆಡಳಿತಾತ್ಮಕ ದುಂದುವೆಚ್ಚಕ್ಕೆ ಸಾರ್ವಜನಿಕರನ್ನು ಬಲಿಪಶು ಮಾಡುವುದು ನಿಲ್ಲಲಿ.

–ಡಾ.ವಿಜಯಕುಮಾರ ಎಚ್.ಕೆ.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಅಲೆಮಾರಿ ಬದುಕು ಇನ್ನೆಷ್ಟು ತಲೆಮಾರು...!


ಭಾರತ ವಿಶ್ವಗುರು ಆಗುವತ್ತ ದಾಪುಗಾಲು ಹಾಕುತ್ತಿದೆ, ಭಾರತ ಪ್ರಕಾಶಿಸುತ್ತಿದೆ, ಮೇರಾ ಭಾರತ್ ಮಹಾನ್, ಭಾರತದಲ್ಲಿ ಬಡತನ ನಿರ್ಮೂಲನೆಯಾಗುತ್ತಿದೆ, ಸಿಲಿಕಾನ್ ಸಿಟಿಗಳು ತಲೆ ಎತ್ತಿವೆ, ಸ್ಮಾರ್ಟ್‌ಸಿಟಿಗಳ ನಿರ್ಮಾಣಕ್ಕೆ ರೂಪುರೇಷೆ ಸಿದ್ಧವಾಗುತ್ತಿವೆ. ಉಗಿಬಂಡಿ ಹೋಗಿ, ವಿದ್ಯುತ್ ರೈಲು ಸಂಚಾರವಾಗುತ್ತಿವೆ, ಮೆಟ್ರೋಪಾಲಿಟನ್ ಸಿಟಿಗಳಲ್ಲಿ ಮೆಟ್ರೋ ರೈಲು ಓಡಾಡುತ್ತಿವೆ, ಬುಲೆಟ್ ಟ್ರೈನ್ ಹಳಿಗೆ ಬರಲು ತವಕಿಸುತ್ತಿವೆ, ಚಂದ್ರಯಾನ ಮಂಗಳಕರವಾಗಿ ನೆರವೇರುತ್ತಿವೆ, ಭಾರತದಲ್ಲಿ ಅತಿಹೆಚ್ಚು ವೈದ್ಯರು ಹಾಗೂ ಇಂಜಿನಿಯರ್ ತಯಾರಾಗುತ್ತಿದ್ದಾರೆ, ಡೆಲ್ಲಿಯಿಂದ ಹಿಡಿದು ಹಳ್ಳಿಹಳ್ಳಿಗೂ ವೈ–ಫೈ, 4ಜಿ–5ಜಿ ಕಾಲಿಕ್ಕಿವೆ, ಆದರೂ ಹೊಟ್ಟೆಪಾಡಿಗೆ ಅಲೆಮಾರಿ ಕುಟುಂಬಗಳ ಬದುಕು ಉತ್ತಮವಾಗಿಲ್ಲ, ಬಡವರು ಇನ್ನೂ ಬಡವರಾಗುತ್ತಿದ್ದಾರೆ, ಶ್ರೀಮಂತರು ಬ್ಯಾಂಕುಗಳಿಗೆ ಕೋಟ್ಯಾಂತರ ರೂಪಾಯಿ ವಂಚಿಸಿ ವಿದೇಶಕ್ಕೆ ಪಲಾಯನ ಮಾಡುತ್ತಿದ್ದಾರೆ, ಬಡವರು ಚಿನ್ನದ ಒಡವೆ ಮಾಡಿಸಿಕೊಳ್ಳುವುದಿರಲಿ ಕಾಸಗಲದ ಚಿನ್ನದ ಮಾಂಗಲ್ಯ ಮಾಡಿಸಿಕೊಳ್ಳುವುದು ಸಹ ದುಸ್ತರವಾಗಿದೆ.

ಇಷ್ಟೆಲ್ಲಾ ಪೀಠಿಕೆ ಏಕೆ ಎನಿಸುತ್ತಿದೆಯೇ? ನಾನು ಕರ್ತವ್ಯ ನಿರ್ವಹಿಸುವ ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗೆ ನಿತ್ಯವೂ ಮೈಸೂರಿನಿಂದ ಪ್ರಯಾಣ ಮಾಡುತ್ತೇನೆ. ಕಳೆದ 15 ದಿನಗಳಿಂದ ವರುಣ ಗ್ರಾಮದ ಕೂಡು ರಸ್ತೆಯಲ್ಲಿ 5–6 ಅಲೆಮಾರಿ ಕುಟುಂಬಗಳು ಬೀಡು ಬಿಟ್ಟಿರುವುದನ್ನು ಕಂಡೆ. ಅವರು ಮೂಲತಃ ಮಧ್ಯಪ್ರದೇಶ ರಾಜ್ಯದವರಾಗಿದ್ದು, ಕುಲುಮೆ ಕೆಲಸ ಅವರ ಕುಲ ಕಸುಬಾಗಿದೆ ಎಂದು ಅವರನ್ನು ಸಂದರ್ಶಿಸಿದಾಗ ತಿಳಿದು ಬಂತು. ಇವರು ಕಬ್ಬಿಣದ ಕುಡುಗೋಲು, ಮಚ್ಚು, ಕೊಡಲಿ ಇನ್ನಿತರ ಕೃಷಿ ಪರಿಕರಗಳನ್ನು ಕುಲುಮೆಯಲ್ಲಿ ಮಾಡಿ ಅಲ್ಲಿಯೇ ಮಾರಾಟ ಮಾಡುವುದನ್ನು ವೃತ್ತಿಯನ್ನಾಗಿಸಿಕೊಂಡವರು. ತಾತ್ಕಾಲಿಕ ಟೆಂಟ್‌ಗಳಲ್ಲಿ ವಾಸ, ಬಯಲಿನಲ್ಲಿಯೇ ಊಟ. ಮಳೆ ಬಂದರೆ ಅವರ ಸ್ಥಿತಿ ದೇವರಿಗೇ ಪ್ರೀತಿ. ನಿತ್ಯ ಕಚೇರಿಗೆ ಹೋಗಿ ಬರುವಾಗ ಎರಡು ಬಾರಿ ಇವರ ಜೀವನ ಕ್ರಮವನ್ನು ಗಮನಿಸುತ್ತಿದ್ದೆ. ಮಹಿಳೆಯರು ಪುರುಷರಿಗಿಂತ ಪರಿಶ್ರಮದ ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂತು. ಅಂದರೆ ಅಡುಗೆಗೆ ಸೌದೆ ಸಂಗ್ರಹ, ನೀರನ್ನು ಸಂಗ್ರಹಿಸುವುದು, ಅಡುಗೆ ಮಾಡುವುದು, ಮಕ್ಕಳ ಲಾಲನೆ ಪಾಲನೆ ಜೊತೆಗೆ ಪುರುಷರ ಜೊತೆ ಕುಲುಮೆಯಲ್ಲಿ ತಿದಿ ಒತ್ತುವುದು, ಅಷ್ಟೇ ಅಲ್ಲ ಕಾದ ಕಬ್ಬಿಣಕ್ಕೆ ಸುತ್ತಿಗೆಯಿಂದ ಎತ್ತಿ ಬಡಿಯುವ ಕೆಲಸ ನೋಡಿ ದಂಗಾಗಿ ಹೋದೆ. ಜೊತೆಗೆ ಶಿಕ್ಷಣ ವಂಚಿತ ಮಕ್ಕಳು ತಮ್ಮ ಕುಲ ಕಸುಬನ್ನು ಹಂತಹಂತವಾಗಿ ತರಬೇತಿ ಪಡೆಯುತ್ತಿರುವುದು ಕಂಡು ಬಂತು. ಅವರನ್ನು ಮಾತನಾಡಿಸಲು ಹೋದಾಗ ಅವರ ಕಷ್ಟಸುಖ ಕೇಳಿ ಎಲ್ಲರಿಗೂ ಒಂದಷ್ಟು ಹಣ್ಣು ಹಾಗೂ ಸಿಹಿ ಹಂಚಿ ಬಂದೆ.

ಇವರ ಜೀವನ ಕ್ರಮ ನನಗೆ ಹಲವಾರು ಚಿಂತನೆಗ ಒರೆಹಚ್ಚಿತು. ಭಾರತ ಡಿಜಿಟಲ್ ದೇಶವಾಗಿದ್ದು, ಆನ್‌ಲೈನ್ ಮಾರ್ಕೆಟಿಂಗ್ ವ್ಯಾಪಕವಾಗಿ ಹರಡಿದ್ದು, ಸೂಜಿಯಿಂದ ಹಿಡಿದು ಮಲಗುವ ಮಂಚದ ವರೆವಿಗೂ, ತೊಟ್ಟಿಲಿನಿಂದ ಹಿಡಿದು ಚಟ್ಟದವರೆವಿಗೂ ಎಲ್ಲವೂ ಆನ್‌ಲೈನ್‌ನಲ್ಲಿ ಲಭ್ಯವಿರುವ ಈ ಕಾಲಘಟ್ಟದಲ್ಲಿ ಕುಡುಗೋಲು, ಮಚ್ಚು ಮಾರಲು ಈ ರೀತಿ ಅಲೆಮಾರಿ ಬದುಕು ಇನ್ನೂ ಭಾರತದಲ್ಲಿ ಜೀವಂತ ಇರುವುದು ಸೋಜಿಗ ಎನಿಸಿತು. ಅವರ ಪರಿಶ್ರಮ ನೋಡಿ ಕನಿಕರ ವ್ಯಕ್ತಪಡಿಸುವವರು ಹಲವರಿದ್ದರೂ, ಅವರೆಲ್ಲರೂ ಅಸಹಾಯಕರೆ. ಇವರಿಗೆ ಶಾಶ್ವತ ಕಾಯಕಲ್ಪ ಕಲ್ಪಿಸಬೇಕಾದ ರಾಜಕಾರಣಿಗಳು, ಹೊಟ್ಟೆಬಾಕ ಅಧಿಕಾರಿಗಳು ಮಾತ್ರ ಗೂಟದ ಕಾರಿನಲ್ಲಿ, ಎ.ಸಿ. ಹಾಕಿಕೊಂಡು, ಕಣ್ಣಿಗೆ ಕೂಲಿಂಗ್ ಗ್ಲಾಸ್ ಹಾಕಿಕೊಂಡು ಇವರ ಕಷ್ಟವನ್ನು ನೋಡಲಾಗದ ಜಾಣ ಕುರುಡರಾಗಿರುವುದು ಮಾತ್ರ ವಿಷಾದನೀಯ ಸಂಗತಿ ಎನ್ನಬಹುದು.

ಒಮ್ಮೆ ಗ್ರಾಮ ಪಂಚಾಯಿತಿ ಸದಸ್ಯರಾದರೆ ಸಾಕು ಅವರ ಕಾರು ಬಾರು ನೋಡಲು ಎರಡು ಕಣ್ಣು ಸಾಲದು. ಒಂದೇ ವರ್ಷಕ್ಕೆ ಕಾರು, ಮೂರೇ ವರ್ಷಕ್ಕೆ ಹೊಸ ಮನೆ, ಐದೇ ವರ್ಷಕ್ಕೆ ಒಂದು ಉದ್ಯಮ ಹೀಗೆ ಕಣ್ಣಿಗೆ ಕೋರೈಸುವ ಜೀವನ ನಡೆಸುತ್ತಾರೆ. ಇನ್ನು ಶಾಸಕರಾದವರ, ಮಂತ್ರಿಗಳಾದವರ ಜೀವನ ಮಟ್ಟ ಹೇಗೆ ವೃದ್ಧಿಯಾಗಬಹುದು ಊಹಿಸಿ. ನಮ್ಮ ದೇಶ ಹಾವಾಡಿಗರ ದೇಶವಲ್ಲ, ಹೂವನ್ನೂ ರಫ್ತು ಮಾಡಿ ಪ್ರಪಂಚಕ್ಕೆ ಕಂಪು ಬೀರುವ ದೇಶ ಎಂದು ಎದೆತಟ್ಟಿ ಹೇಳುವ ಜನರಿಗೆ ಕುಲುಮೆಯಲ್ಲಿ ನಲುಗುತ್ತಿರುವವರ ಬದುಕು ಗೋಚರಿಸದೇ ಇರುವುದು ಆಶ್ಚರ್ಯವೇ ಸರಿ.

ಭಾರತ ದೇಶ ಬಹುಭಾಷಾ ದೇಶವಷ್ಟೇ ಅಲ್ಲ, ಬಹುಸಂಸ್ಕೃತಿ ಉಳ್ಳ ದೇಶ. ಇಲ್ಲಿ ಪ್ರತಿ 50 ಕಿಲೋಮೀಟರ್‌ಗೂ ಭಿನ್ನ ಭಾಷೆ, ಭಿನ್ನ ಆಹಾರ ಪದ್ಧತಿ, ಭಿನ್ನ ಸಂಸ್ಕೃತಿ ಇದೆ. ಕೃಷಿ ಪ್ರಧಾನ ದೇಶವಾದರೂ ಎಲ್ಲಾ ಕ್ಷೇತ್ರಗಳಲ್ಲೂ ಆಧುನಿಕ ಸ್ಪರ್ಶ ಕಂಡುಬರುತ್ತಿದೆ. ನಮ್ಮ ದೇಶಕ್ಕೆ ಜನಸಂಖ್ಯೆ ಎಂಬುದು ಶಕ್ತಿಯೂ ಹೌದು,



"ಇಂದಿಗೂ ಹಾವಾಡಿಗರನ್ನು ಭಾರತದಲ್ಲಿ ಕಾಣಬಹುದು. ಇವರು ಮೂಲತಃ ಅಲೆಮಾರಿಗಳಾಗಿರುತ್ತಾರೆ. ಆಧಾರ್ ಕಾರ್ಡ್ ಲೆಕ್ಕಕ್ಕೆ, ಮತದಾನ ಮಾಡಲು ಇವರಿಗೆ ಸ್ವಂತ ಒಂದು ಊರು ಎಂಬುದಿದ್ದರೂ, ಊರಿನ ಮುಖ ನೋಡುವುದು ವರ್ಷಕ್ಕೋ ಎರಡು ವರ್ಷಕ್ಕೋ ಒಮ್ಮೆ. ಸರ್ಕಾರ ಮನಸ್ಸು ಮಾಡಿದರೆ ಇವರಿಗೆ ಒಂದು ಕಾಯಕಲ್ಪ ಮಾಡಬಹುದಾಗಿದೆ. ಥಾಯ್ಲಾಂಡ್ ಹಾಗೂ ಮಲೇಷಿಯಾ ದೇಶಗಳಲ್ಲಿ ಪ್ರಾಣಿಗಳನ್ನು ಪಳಗಿಸಿ ಪ್ರದರ್ಶಿಸುವವರನ್ನು ಪ್ರವಾಸೋದ್ಯಮದ ಪ್ರಮುಖ ಆಕರ್ಷಣೆಯಾಗಿಸಿದ್ದಾರೆ. ಚಿಂಪಾಂಜಿ, ಹುಲಿ, ಆನೆಗಳನ್ನು ಪಳಗಿಸಿ ಪ್ರವಾಸಿಗರನ್ನು ಸೆಳೆಯುತ್ತಿದ್ದು, ಅವರು ಒಂದು ಶಾಶ್ವತ ನೆಲೆ ಕಂಡುಕೊಳ್ಳುವುದರ ಜೊತೆಗೆ ಒಂದು ಗೌರವಯುತ ಜೀವನ ನಡೆಸುತ್ತಿದ್ದಾರೆ. ವಿದೇಶಿ ಪ್ರವಾಸಕ್ಕೆ ಅಧ್ಯಯನದ ಹೆಸರಿನಲ್ಲಿ ತೆರಳುವ ನಮ್ಮ ಮಂತ್ರಿ ಮಹೋದಯರಿಗೆ, ಉನ್ನತ ಅಧಿಕಾರಿಗಳಿಗೆ ಇವುಗಳು ಕಣ್ಣಿಗೆ ಬೀಳುವುದೇ ಇಲ್ಲ. ದೇಶದ ಹಾವಾಡಿಗರಿಗೆ, ಪ್ರಾಣಿಗಳನ್ನು ಪಳಗಿಸಿ ಪ್ರದರ್ಶಿಸುವವರಿಗೆ ಇದೇ ವ್ಯವಸ್ಥೆ ಮಾಡಬಹುದು ಎಂಬ ಕನಿಷ್ಠ ಚಿಂತನೆಯೂ ಬರುವುದಿಲ್ಲ.

ದೌರ್ಬಲ್ಯವೂ ಹೌದು. ಇಂದಿಗೂ ಕೂಲಿ ಕಾರ್ಮಿಕರನ್ನು ಶೋಷಣೆ ಮಾಡುವ ಘಟನೆಗಳು ನಡೆಯುತ್ತಲೇ ಇವೆ. ಯಾವುದೇ ವೃತ್ತಿಯಾಗಲಿ ಅದಕ್ಕೊಂದು ಘನತೆ, ವೃತ್ತಿ ಗೌರವ ಇರುತ್ತದೆ. ಅಸಂಘಟಿತ ವಲಯದಲ್ಲಿ ಈ ಕಾರ್ಮಿಕರಿಗೆ ಯಾವುದೇ ಭದ್ರತೆ ಇರುವುದಿಲ್ಲ. ಆಶ್ರಯ, ಅನ್ನ, ಆರೋಗ್ಯ ಎಲ್ಲವೂ ಅಸ್ಥಿರ. ಬಡ ದೇಶವನ್ನು ಬಡಾ ದೇಶ ಮಾಡುತ್ತೇವೆ ಎಂದು ರಾಜಕಾರಣಿಗಳು ಭಾರತಕ್ಕೆ ಸ್ವಾತಂತ್ರ್ಯ ಬಂದ ಕಾಲದಿಂದಲೂ ಹೇಳುತ್ತಲೇ ಬಂದಿದ್ದಾರೆ. ಆದರೆ ಬಡವರ ಸ್ಥಿತಿ ಇನ್ನೂ ಹೀನಾಯವಾಗುತ್ತಿದೆ. ಯಾವ ಸರ್ಕಾರ ಬಂದರೂ ಕುಲುಮೆಯಲ್ಲಿ ಬೆವರು ಸುರಿಸಿ ಬೇಯುವ ಜನರ ಬದುಕು ಬವಣೆ ಬದಲಾಗದೆ ಇರುವುದು ದುರದೃಷ್ಟಕರ.

ಸಂವಿಧಾನದಲ್ಲಿನ ಆಶಯಗಳು ಇಂದಿಗೂ ಕನಸಾಗಿಯೇ ಉಳಿದಿರುವುದು ತಲೆತಗ್ಗಿಸುವ ಸಂಗತಿ. ಇಂದಿಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಬಡ ರೋಗಿಗಳಿಗೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಸಿಗದೇ ಇರುವುದು, ಚಿಕಿತ್ಸೆಗಾಗಿ ಲಂಚ ಕೊಡಬೇಕಾಗಿರುವುದು. ಮೃತಪಟ್ಟ ರೋಗಿಗೆ ಆಂಬ್ಯುಲೆನ್ಸ್ ಸಿಗದೇ ಬೈಸಿಕಲ್‌ನಲ್ಲಿ ಮೃತ ದೇಹ ಸಾಗಿಸಿರುವ ವರದಿಗಳನ್ನು ಕಂಡಾಗ ಕರಳು ಕಿವುಚಿದಂತಾಗುತ್ತದೆ. ಬಡ ಕುಟುಂಬಗಳನ್ನು ಮುಖ್ಯವಾಹಿನಿಗೆ ತರಲು ಹಲವಾರು ಯೋಜನೆಗಳನ್ನು ಸರ್ಕಾರಗಳು ಘೋಷಿಸಿದರೂ, ಶಾಸಕಾಂಗ, ಕಾರ್ಯಾಂಗದ ಇಚ್ಚಾಶಕ್ತಿಯ ಕೊರತೆಯಿಂದ, ಬ್ರಹ್ಮಾಂಡ ಭ್ರಷ್ಟಾಚಾರದಿಂದ ಯೋಜನೆಯು ಫಲಾನುಭವಿಗಳಿಗೆ ಸೂಕ್ತ ರೀತಿಯಲ್ಲಿ ತಲುಪದೆ ಬಡವರ ಹೆಸರಲ್ಲಿ ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಿರುವುದು ವಿಡಂಬನೆಯೇ ಸರಿ.

ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸಲು ಕಾನೂನು ಜಾರಿಗೊಳಿಸುವ ಅಧಿಕಾರಿಗಳು, ಅವರಿಗೆ ಸೂಕ್ತ ಪುನರ್ವಸತಿ ಕಲ್ಪಿಸದೆ ತ್ರಿಶಂಕು ಸ್ಥಿತಿಯಲ್ಲಿ ಅವರ ಬದುಕನ್ನು ಇರಿಸುತ್ತಿರುವುದು ಖಂಡನೀಯವಾಗಿದೆ. ಅರಣ್ಯವನ್ನು ಆದಿವಾಸಿಗಳು, ಸೋಲಿಗರು, ಕಾಡು ಕುರುಬರು ದೋಚುವುದಕ್ಕಿಂತ ಮಂತ್ರಿ ಮಹೋದಯರು ಹಾಗೂ ರಕ್ಷಣೆ ಮಾಡಬೇಕಾದ ಅಧಿಕಾರಿಗಳೇ ದೋಚಿರುವುದು ಇಂದು ರಹಸ್ಯವಾಗಿ ಉಳಿದಿಲ್ಲ. ಜಿಂಕೆ ಮಾಂಸ ಮಾರಾಟಕ್ಕಾಗಿ ಒಂದು ಜಿಂಕೆಯನ್ನು ಕೊಂದವನನ್ನು ಹಿಡಿದು ಕಾನೂನಿನ ಕುಣಿಕೆ ಹಾಕಿ ಜೈಲಿಗಟ್ಟುವ ಕಾರ್ಯಾಂಗವು ಜನಪ್ರತಿನಿಧಿಗಳಿಗೆ, ಉನ್ನತ ಅಧಿಕಾರಿಗಳಿಗೇ ತಮ್ಮದೇ ಇಲಾಖೆ ಅತಿಥಿಗೃಹಗಳಲ್ಲಿ ಜಿಂಕೆ ಮಾಂಸ, ಇತರೆ ಪ್ರಾಣಿ–ಪಕ್ಷಿಗಳ ಮಾಂಸದ ಖಾದ್ಯಗಳನ್ನು ತಯಾರಿಸಿ ಕೊಡುತ್ತಿರುವುದು ವಿಪರ್ಯಾಸವಲ್ಲವೇ? ನಮ್ಮ ದೇಶದಲ್ಲಿ ರಕ್ಷಕರೇ ಭಕ್ಷಕರಾಗುತ್ತಿದ್ದಾರೆ. ಸಣ್ಣಮಟ್ಟ ಅಪರಾಧಗಳನ್ನು ದೊಡ್ಡದಾಗಿ ಬಿಂಬಿಸುವ ಅಧಿಕಾರಿಗಳು ದೊಡ್ಡ ಜನರ ದೊಡ್ಡ ಅಪರಾಧಗಳಿಗೆ ಕಾನೂನನ್ನು ಅನ್ವಯಿಸದೇ ಇರುವುದು ಅವರ ಜಾಣ ನಡೆಯನ್ನು ತಿಳಿಸುತ್ತದೆ. ಜಾರ್ಜ್ ಆರ್ವೆಲ್ ಅವರ ಅನಿಮಲ್ ಫಾರ್ಮ್ ಎಂಬ ಕಾದಂಬರಿಯಲ್ಲಿ ಎಲ್ಲಾ ಪ್ರಾಣಿಗಳು ಸಮಾನರು, ಆದರೆ ಕೆಲವು ಪ್ರಾಣಿಗಳು ಇತರೆ ಪ್ರಾಣಿಗಳಿಗಿಂತ ಹೆಚ್ಚು ಸಮಾನರು ಎಂದು ಉಲ್ಲೇಖಿಸಿರುವ ಮಾತು ಇಂತಹ ಘಟನೆಗಳಿಗೆ ಅನ್ವಯಿಸಬಹುದು.

ಅನೇಕ ಮಂತ್ರಿಮಹೋದಯರ ಬಂಗಲೆಗಳಿಗೆ ಬೆಲೆಬಾಳುವ ಕಿಟಕಿ, ಬಾಗಿಲುಗಳು, ಪೀಠೋಪಕರಣಗಳು ಅರಣ್ಯಗಳಿಂದ ಕಳ್ಳಸಾಗಾಣಿಕೆ ಮಾಡಿದ ಮರಗಳಿಂದಲೇ ಆಗಿರುತ್ತವೆ. ಒಂದು ಗಂಧದ ಮರ/ಬೀಟೆಮರ ಕಡಿದ ಕಳ್ಳನಿಗೆ ಜೈಲುವಾಸ, ಆದರೆ ಇಡೀ ಮನೆಗೆ ಕೋಟ್ಯಾಂತರ ರೂಪಾಯಿಯ ಮರ ಕದ್ದವನಿಗೆ ಅರಮನೆ ವಾಸ. ಇದು ನಮ್ಮ ದೇಶದ ಘನಸ್ಥಿತಿ. ಕಾನೂನು ಎಂಬುದು ಕುರುಡು ಕತ್ತೆ ಎಂಬ ಮಾತನ್ನು ಚಾರ್ಲ್ಸ್ ಡಿಕೆನ್ಸ್ ತಮ್ಮ ಓಲಿವರ್ ಟ್ವಿಸ್ಟ್ ಎಂಬ ಕಾದಂಬರಿಯಲ್ಲಿ ಹೇಳಿರುವುದು ಮಾರ್ಮಿಕ ಎನಿಸಿದರೂ ಭಾರತದಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಗೆ ಅನ್ವಯವಾಗುತ್ತದೆ.

ಇಂದಿಗೂ ಅಲೆಮಾರಿ ಹಾವಾಡಿಗರು ಹಾಗೂ ದೊಂಬರಾಟ ಮಾಡುವವರನ್ನು ಭಾರತದಲ್ಲಿ ಕಾಣಬಹುದು. ಇವರು ಮೂಲತಃ ಅಲೆಮಾರಿಗಳಾಗಿರುತ್ತಾರೆ. ಆಧಾರ್ ಕಾರ್ಡ್ ಲೆಕ್ಕಕ್ಕೆ, ಮತದಾನ ಮಾಡಲು ಇವರಿಗೆ ಸ್ವಂತ ಒಂದು ಊರು ಎಂಬುದಿದ್ದರೂ, ಊರಿನ ಮುಖ ನೋಡುವುದು ವರ್ಷಕ್ಕೋ ಎರಡು ವರ್ಷಕ್ಕೋ ಒಮ್ಮೆ. ಸರ್ಕಾರ ಮನಸ್ಸು ಮಾಡಿದರೆ ಇವರಿಗೆ ಒಂದು ಕಾಯಕಲ್ಪ ಮಾಡಬಹುದಾಗಿದೆ. ಥಾಯ್ಲಾಂಡ್ ಹಾಗೂ ಮಲೇಷಿಯಾ ದೇಶಗಳಲ್ಲಿ ಪ್ರಾಣಿಗಳನ್ನು ಪಳಗಿಸಿ ಪ್ರದರ್ಶಿಸುವವರನ್ನು ಪ್ರವಾಸೋದ್ಯಮದ ಪ್ರಮುಖ ಆಕರ್ಷಣೆಯಾಗಿಸಿದ್ದಾರೆ. ಚಿಂಪಾಂಜಿ, ಹುಲಿ, ಆನೆಗಳನ್ನು ಪಳಗಿಸಿ ಪ್ರವಾಸಿಗರನ್ನು ಸೆಳೆಯುತ್ತಿದ್ದು, ಅವರುಗಳು ಒಂದು ಶಾಶ್ವತ ನೆಲೆಯನ್ನು ಕಂಡುಕೊಳ್ಳುವುದರ ಜೊತೆಗೆ ಒಂದು ಗೌರವಯುತವಾದ ಜೀವನ ನಡೆಸುತ್ತಿದ್ದಾರೆ. ವಿದೇಶಿ ಪ್ರವಾಸಕ್ಕೆ ಅಧ್ಯಯನದ ಹೆಸರಿನಲ್ಲಿ ತೆರಳುವ ನಮ್ಮ ಮಂತ್ರಿಮಹೋದಯರಿಗೆ, ಉನ್ನತ ಅಧಿಕಾರಿಗಳಿಗೆ ಇವುಗಳು ಕಣ್ಣಿಗೆ ಬೀಳುವುದೇ ಇಲ್ಲ. ನಮ್ಮ ದೇಶದ ಹಾವಾಡಿಗರಿಗೆ, ಪ್ರಾಣಿಗಳನ್ನು ಪಳಗಿಸಿ ಪ್ರದರ್ಶಿಸುವವರಿಗೆ ಇದೇ ವ್ಯವಸ್ಥೆ ಮಾಡಬಹುದು ಎಂಬ ಕನಿಷ್ಠ ಚಿಂತನೆಯೂ ಬರುವುದಿಲ್ಲ.

ಅನೇಕ ದೇಶಗಳಲ್ಲಿ ಗುಡಿ ಕೈಗಾರಿಕೆಗಳೇ ಪ್ರವಾಸೋದ್ಯಮ ಪ್ರಮುಖ ಆಕರ್ಷಣೆಯಾಗಿವೆ. ಆದರೆ ನಮ್ಮ ದೇಶದ ಅನನ್ಯ ಕೌಶಲ್ಯ ಹೊಂದಿರುವ ಕುಶಲಕರ್ಮಿಗಳು, ಕಲಾವಿದರು ಇನ್ನು ಬಡತನದ ರೇಖೆಯಲ್ಲಿ ಬದುಕುತ್ತಿರುವುದು ಇಡೀ ದೇಶ ನಾಚಿಕೆಪಡುವ ಸಂಗತಿಯಾಗಿದೆ. ಕೆಲವು ಕಡೆ ಪ್ರಾಣಿಗಳಿಗೆ ಕೊಡುವ ಗೌರವವನ್ನು ಕಲಾವಿದರಿಗೆ, ಕುಶಲಕರ್ಮಿಗಳಿಗೆ ಕೊಡದೇ ಇರುವುದನ್ನು ಕಾಣಬಹುದು.

ಅಲೆಮಾರಿಗಳ ಬದುಕನ್ನು ಬರಿಗಣ್ಣಿನಿಂದ ನೋಡದೆ ಒಳಗಣ್ಣಿನಿಂದ ನೋಡುವ ಮನೋಭಾವ ಸಂಬಂಧಪಟ್ಟವರಿಗೆ ಇನ್ನಾದರೂ ಬರಲಿ ಎಂದು ಆಶಿಸುತ್ತಾ, ಭಾರತದ ಪ್ರತಿಯೊಬ್ಬ ಪ್ರಜೆಯು ತನ್ನ ಕುಲಕಸುಬನ್ನು ಗೌರವದಿಂದ ಮಾಡುತ್ತಾ, ಮಕ್ಕಳಿಗೆ ಅಗತ್ಯ ಶಿಕ್ಷಣ ಕೊಡಿಸುವಂತಾಗಲಿ, ತನ್ಮೂಲಕ ತಮ್ಮ ಕಸುಬಿನಿಂದ ವಿದೇಶದಲ್ಲೂ ಮಾರುಕಟ್ಟೆ ಲಭಿಸುವಂತಹ ವ್ಯವಸ್ಥೆಯನ್ನು ಮಾಡಿಕೊಳ್ಳಲಿ ಎಂದು ಬಯಸುತ್ತೇನೆ. ಈಗಾಗಲೆ ಕೆಲವು ಕಲೆಗಳಿಗೆ ವಿದೇಶದಲ್ಲಿ ಬಹುಬೇಡಿಕೆ ಇದ್ದೂ, ಅದೇ ರೀತಿ ಅನೇಕ ಕ್ಷೇತ್ರಗಳಿಗಲ್ಲೂ ಬೇಡಿಕೆ ಸೃಷ್ಟಿಸಿ ನಮ್ಮ ದೇಶದ ಜನ ಗೌರವಯುತವಾದ ಬದುಕನ್ನು ಕಟ್ಟಿ ಕೊಳ್ಳಲಿ ಎಂದು ಆಶಿಸುತ್ತೇನೆ.

ಹೂರಣ: **ಕಸುಬುಗಾರನ ಬದುಕು ಕಳ್ಳನ ಬದುಕಿಗಿಂತ ಉತ್ತಮವಾಗಿರಬೇಕು**

ಹಣ ಬಲಕ್ಕಿಂತ ಜ್ಞಾನ ಬಲವೇ ದೊಡ್ಡದು: ಅಂಕೇಗೌಡ

ವಿವಿಧ ಕ್ಷೇತ್ರದ ಸಾಧಕರಿಗೆ ಹೊಯ್ಸಳ ಪ್ರಶಸ್ತಿ ಪ್ರದಾನ

ಮೈಸೂರು, ಏ.5(ಎಂಕೆ)– ಹೊಯ್ಸಳ ಕನ್ನಡ ಸಂಘ ಹಾಗೂ ಸವಿಗನ್ನಡ ಪತ್ರಿಕಾ ಬಳಗದ ವತಿಯಿಂದ ಭಾನುವಾರ ವಿವಿಧ ಕ್ಷೇತ್ರದ ಸಾಧಕರಿಗೆ 'ಹೊಯ್ಸಳ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕಸಾಪ ಸಾಹಿತ್ಯ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ನಾಗರಾಜ ವಿ.ಬೈರಿ(ಸುಗಮ ಸಂಗೀತ), ಎನ್.ಎಸ್.ರಂಗರಾಜು(ಇತಿಹಾಸ ಮತ್ತು ಪರಂಪರೆ), ಡಾ.ಬಿ.ಗುರುಬಸವರಾಜ (ಆಯುರ್ವೇದ), ಡಾ.ಮಂಜಪ್ಪಶೆಟ್ಟಿ ಮಸಗಲಿ (ಜಾನಪದ). ಡಾ.ವಾಮನ ರಾವ್ ಬೇಕಲ್(ಗಡಿನಾಡ ಕನ್ನಡ ಸೇವೆ), ಡಿ.ತಿಪ್ಪಣ್ಣ(ಹವ್ಯಾಸಿ ರಂಗಭೂಮಿ), ಜಿ.ಎಸ್.ಅಶೋಕ್ ಕುಮಾರ್(ಸಹಕಾರ), ಬಿ.ರಮೇಶ್(ಸಾಹಿತ್ಯ), ಅರಸಿ ಕುಮಾರ್ (ಛಾಯಾಗ್ರಹಣ) ಡಾ.ಮಾಲತಿ ಕುಮಾರ್ (ವೈದ್ಯಕೀಯ), ಡಾ.ಗೀತಾ ನಾವಲ್ (ಅನುವಾದ), ಡಾ.ಅನುಪಮಾ (ಸಂಸ್ಕೃತ) ಪ್ರೊ.ಹೆಚ್.ಎಸ್.ಉಮಾದೇವಿ (ಗ್ರಂಥಾಲಯ), ಜ್ಯೋತಿ ಗುರುಪ್ರಸಾದ್ (ಶಿಕ್ಷಣ) ಹಾಗೂ ವಿದುಷಿ ಪಲ್ಲವಿ ರಾಘವೇಂದ್ರ(ಭರತನಾಟ್ಯ) ಅವರಿಗೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಪ್ರಶಸ್ತಿ ಪ್ರದಾನ ಮಾಡಿದರು.



ಮೈಸೂರು ಕಸಾಪ ಸಭಾಂಗಣದಲ್ಲಿ ಭಾನುವಾರ ವಿವಿಧ ಕ್ಷೇತ್ರದ ಸಾಧಕರಿಗೆ 'ಹೊಯ್ಸಳ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪುಸ್ತಕ ಪ್ರೇಮಿ ಅಂಕೇಗೌಡ ಮಾತನಾಡಿ, ಒಂದು ಕಾಲಕ್ಕೆ ತೋಳ್ಬಲ ಇದ್ದರೆ ಸಾಕು ಬದುಕಬಹುದು ಎಂಬ ಪರಿಸ್ಥಿತಿ ಇತ್ತು. ನಂತರ ಹಣ ಇದ್ದರೆ ಬದುಕಬಹುದು ಎಂದು ಹೇಳಲಾಗುತ್ತಿತ್ತು. ಈಗ ಅದೆಲ್ಲಾ ಮುಗಿದಿದೆ. ಈಗ ಜ್ಞಾನ ಇದ್ದರೆ ಎಲ್ಲಿ ಬೇಕಾದರೂ ಬದುಕಬಹುದು. ಹಣ ಬಲಕ್ಕಿಂತ ಜ್ಞಾನಬಲವೇ ದೊಡ್ಡದಾಗಿದ್ದು, ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳನ್ನು ಚೆನ್ನಾಗಿ ಓದಿಸಿ, ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಕರೆ ನೀಡಿದರು.

ಇವತ್ತು ನಾನು ಪದ್ಮಶ್ರೀ ಪ್ರಶಸ್ತಿ ಹಂತಕ್ಕೆ ಏರಲು ನಾನೊಬ್ಬನೇ ಕಾರಣನಲ್ಲ. ಹಲವಾರು ಸ್ನೇಹಿತರ ಸಹಕಾರ ಇದೆ. 78 ವರ್ಷದ ನಾನು ಕಳೆದ 52 ವರ್ಷಗಳಿಂದಲೂ ಪುಸ್ತಕಗಳ ಸಂಗ್ರಹದಲ್ಲಿ ತೊಡಗಿದ್ದು, ಈಗ ನನ್ನ ಗ್ರಂಥಾಲಯದಲ್ಲಿ 20 ಲಕ್ಷ ಪುಸ್ತಕಗಳಿವೆ. ಮುಂದಿನ ಪೀಳಿಗೆಯ ಮಕ್ಕಳಿಗೆ ಜ್ಞಾನವನ್ನು ದಾಟಿಸಬೇಕು ಎಂಬ ಹಂಬಲದಿಂದ ಯಾರಿಂದಲೂ ಒಂದು ರೂಪಾಯಿ ಪಡೆಯದೇ ಪುಸ್ತಕಗಳನ್ನು ಓದಲು ನೀಡುತ್ತಿದ್ದೇನೆ ಎಂದು ಹೇಳಿದರು.

ಮಕ್ಕಳಿಗೆ ಐಎಎಸ್, ಕೆಎಎಸ್ ಪರೀಕ್ಷೆ ಬರೆಯಲು ಬೇಕಾದ ಎಲ್ಲಾ ಪುಸ್ತಕಗಳು ನನ್ನ ಬಳಿ ಇವೆ. ವಿದ್ಯಾರ್ಥಿಗಳು ಬೆಳಗಿನ ಜಾವ 4ರಿಂದ 7.30ರವರೆಗೆ ಶ್ರದ್ಧೆಯಿಂದ ಓದಿದರೆ ಯಾವುದೇ ಪರೀಕ್ಷೆಯನ್ನಾದರೂ ಪಾಸ್ ಮಾಡಬಹುದು. ಇನ್ನೊಬ್ಬರ ಬಗ್ಗೆ ಕೆಟ್ಟ ಮಾತುಗಳ ಆಡುವುದನ್ನು ಬಿಟ್ಟು, ಒಳ್ಳೆಯತನ ಬೆಳೆಸಿಕೊಂಡರೆ ಸಾಕು ಎಂದು ಹೇಳಿದರು.

ಕೃತಿ ಬಿಡುಗಡೆ: ಇದಕ್ಕೂ ಮುನ್ನ ಮಾಜಿ ರಾಷ್ಟ್ರಪತಿ, ದಿವಂಗತ ಡಾ.ಎಪಿಜೆ ಅಬ್ದುಲ್ ಕಲಾಂ ಅವರಿಗೆ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿದ್ದ ಜಯಪ್ರಕಾಶ್ ಪುತ್ತೂರು ಅವರು ರಚಿಸಿರುವ ಹಾಗೂ ಸಪ್ನ ಬುಕ್ ಹೌಸ್ ಪ್ರಕಟಿಸಿರುವ 'ವ್ಯಕ್ತಿತ್ವ ವಿಕಸನ ವಿಚಾರಧಾರೆ' ಕೃತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹಾಗೂ ಸವಿಗನ್ನಡ ವಿಶೇಷಾಂಕವನ್ನು ಕವಿಯತ್ರಿ ಡಾ.ಲತಾ ರಾಜಶೇಖರ್ ಬಿಡುಗಡೆ ಮಾಡಿದರು.

ಮೇಲುಕೋಟೆ ವಂಗೀಪುರ ನಂಬೀ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆಖ್ಯಾತ ಮಧುಮೇಹ ತಜ್ಞ ಡಾ.ವಿ.ಲಕ್ಷ್ಮಿನಾರಾಯಣ್, ಸಂಸ್ಕೃತಿ ವಿದುಷಿ ಡಾ.ಕೆ.ಲೀಲಾ ಪ್ರಕಾಶ್, ಹಿರಿಯ ಸಮಾಜಸೇವಕ ರಘುರಾಂ ವಾಜಪೇಯಿ, ಹಿರಿಯ ವೀಣಾ ವಿದ್ವಾಂಸ ವಿ.ನಂಜುಂಡಸ್ವಾಮಿ, ರಂಗನಾಥ್ ಮೈಸೂರು, ವಿಜಯಲಕ್ಷ್ಮಿ ರಂಗನಾಥ್, ಮಾನುಷ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಾಬು ಜಗಜೀವನ ರಾಮ್ ಪ್ರತಿಮೆಗೆ ಮಾಲಾರ್ಪಣೆ...



ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿದಾರರ ಸಂಘದ ವತಿಯಿಂದ ಭಾನುವಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜಯಂತಿ ಪ್ರಯುಕ್ತ ಮೈಸೂರಿನ ರೈಲ್ವೆ ನಿಲ್ದಾಣದ ಎದುರು ಇರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ವಿಜಯಶಂಕರ್, ಪ್ರಧಾನ ಕಾರ್ಯದರ್ಶಿಗಳಾದ ಶಿವಣ್ಣ ನಂಜಾಪುರ, ಕುಮಾರ್ ಬಸ್ತಿ ಮಾಜಿ ಅಧ್ಯಕ್ಷರಾದ ಶಿವಣ್ಣ, ಜಿ.ಕೆ.ರಘು ಸೇರಿದಂತೆ ಪದಾಧಿಕಾರಿಗಳು ಹಾಜರಿದ್ದರು.

ಸೇವಾ ಕಾರ್ಯಗಳ ಮೂಲಕ ಸಿ.ನರೇಂದ್ರ ಹುಟ್ಟುಹಬ್ಬ ಆಚರಣೆ



ಮೈಸೂರು,ಏ.5(ಪಿಎಂ)– ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಸಿ.ನರೇಂದ್ರ ಅವರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಅರ್ಥಪೂರ್ಣವಾಗಿ ಆಚರಿಸಿದರು.

ಸುವರ್ಣ ಕರ್ನಾಟಕ ಹಿತರಕ್ಷಣಾ ವೇದಿಕೆ, ಕರುನಾಡ ಲಾರಿ ಚಾಲಕರ ಪರಿಷತ್‌ನ ಸದಸ್ಯರು, ಅಭಿಮಾನಿಗಳು ಕೆ.ಆರ್.ಆಸ್ಪತ್ರೆಯಲ್ಲಿ ಸುಮಾರು 100 ರೋಗಿಗಳಿಗೆ ಸೇಬು, ಮೊಸಂಬಿ, ದಾಳಿಂಬೆ, ಬಾಳೆಹಣ್ಣು ಹಂಚಿದರು.

ಈ ವೇಳೆ ಮಾತನಾಡಿದ ಮಂಜುಳಾ, ಸಿ.ನರೇಂದ್ರರವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದ್ದೇವೆ. ಚಾಮುಂಡೇಶ್ವರಿ ತಾಯಿ ಆಶೀರ್ವಾದ ಅವರ ಮೇಲೆ ಇರಲೆಂದು ಪ್ರಾರ್ಥಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಅವರ ರಾಜಕೀಯ ಜೀವನ ಉಜ್ವಲವಾಗಲಿ ಎಂದು ಶುಭ ಕೋರುವುದಾಗಿ ತಿಳಿಸಿದರು. ಕರುನಾಡ ಲಾರಿ ಚಾಲಕರ ಪರಿಷತ್ ಅಧ್ಯಕ್ಷ ಕಂಬ್ರಹಳ್ಳಿ ಲೋಕೇಶ್, ಲಾರಿ ದೊಡ್ಡಸ್ವಾಮಿ, ನಾಗರಾಜ್, ವಿಷಕಂಠ ನಾಯಜ, ಮಂಜುನಾಥ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ವಕೀಲ ಅರುಣ್‌ಕುಮಾರ್‌ಗೆ ಸನ್ಮಾನ...



ಕಲಬುರಗಿಯ ವೀರಶೈವ ಕಲ್ಯಾಣ ಮಂಟಪದಲ್ಲಿ ಡಾ.ಬಾಬು ಜಗಜೀವನರಾಮ್ ಜಿಲ್ಲಾ ಜಯಂತ್ಯೋತ್ಸವ ಸಮಿತಿ ಕಲಬುರಗಿ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನರಾಮ್ ಅವರ 119ನೇ ಜಯಂತ್ಯೋತ್ಸವ, ಸಮತಾ ದಿವಸ್ ಕಾರ್ಯಕ್ರಮ ಹಾಗೂ ಬಹಿರಂಗ ಸಭೆಯಲ್ಲಿ ಮೈಸೂರಿನ ಹಿರಿಯ ವಕೀಲ ಎಸ್.ಅರುಣ್‌ಕುಮಾರ್ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಮುನಿಸು ಮರೆತು ಒಗ್ಗೂಡಿದ ಸಚಿವದ್ವಯರು: ಮಲ್ಲಿಕಾರ್ಜುನ್ ಮನೆಗೆ ಜಮೀರ್ ಭೇಟಿ; ಒಟ್ಟಿಗೆ ಪ್ರಚಾರ

ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಗೆಲುವು ಖಚಿತವೆಂದ ಜಮೀರ್ ಖಾನ್



ಮಲ್ಲಿಕಾರ್ಜುನ್



ಜಮೀರ್ ಖಾನ್

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಟಿಕೆಟ್ ಹಂಚಿಕೆ ವಿಚಾರದಲ್ಲಿ ಉಂಟಾಗಿದ್ದ ವೈಮನಸ್ಸು ಮರೆತ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಉಪ ಚುನಾವಣಾ ಕಣದಲ್ಲಿ ಒಗ್ಗಟ್ಟು ಪ್ರದರ್ಶಿಸುವುದರೊಂದಿಗೆ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ಭಾನುವಾರ ಮತಯಾಚಿಸಿದರು.

ಕೇರಳದಿಂದ ನೇರವಾಗಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮನೆಗೆ ಆಗಮಿಸಿದ ಜಮೀರ್ ಜಂಟಿ ಸುದ್ದಿಗೋಷ್ಠಿ ನಡೆಸಿ, ವಿಷಗಳಿಗೆಯಲ್ಲಿ ಉಂಟಾಗಿದ್ದ ಮುನಿಸು ಮರೆತಿದ್ದೇವೆ, ಪಕ್ಷದ ಹಿತದೃಷ್ಟಿಯಿಂದ ಒಗ್ಗೂಡಿ ಕೆಲಸ ಮಾಡಲಿದ್ದೇವೆ ಎಂದು ಸಚಿವದ್ವಯರು ಪ್ರಕಟಿಸಿದರು.

ಕೇರಳ ವಿಧಾನಸಭಾ ಚುನಾವಣೆಯ ಸ್ಟಾರ್ ಪ್ರಚಾರಕನನ್ನಾಗಿ ಪಕ್ಷ ನಿಯೋಜಿಸಿ, ಹತ್ತು ಜಿಲ್ಲೆಗಳ ಉಸ್ತುವಾರಿ ಕೂಡ ನೀಡಲಾಗಿತ್ತು. ಮಾರ್ಚ್ 26ರಿಂದ ಕೇರಳ ಚುನಾವಣಾ ಪ್ರಚಾರದಲ್ಲಿ ತೊಡಗಿಕೊಂಡಿದ್ದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸೂಚನೆಯ ಮೇರೆಗೆ ಪಕ್ಷದ ಅಭ್ಯರ್ಥಿ ಸಮರ್ಥ್ ಶಾಮನೂರು ಪರವಾಗಿ ಪ್ರಚಾರಕ್ಕೆ ಬಂದಿದ್ದೇನೆ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ತಿಳಿಸಿದರು.

ಕೆಲ ತಿಂಗಳ ಹಿಂದೆ ದಾವಣಗೆರೆಗೆ ಬಂದಿದ್ದಾಗ ಉಪಚುನಾವಣೆಯ ಟಿಕೆಟ್‌ಗೆ ಮುಸ್ಲಿಂ ಸಮುದಾಯ ಬೇಡಿಕೆ ಇಟ್ಟಿತ್ತು. ಇದನ್ನು ಹೈಕಮಾಂಡ್ ಗಮನಕ್ಕೆ ತರುವುದಾಗಿ ಆಶ್ವಾಸನೆ ನೀಡಿದ್ದೆ. ಇದರಿಂದ ಗೊಂದಲ ಸೃಷ್ಟಿಯಾಗಿದ್ದು ನಿಜ. ಟಿಕೆಟ್ ಕೈತಪ್ಪಿದ್ದರಿಂದ ಕೆಲವರು ಅಸಮಾಧಾನಗೊಂಡಿರುವುದು ಸತ್ಯ. ಮತದಾನಕ್ಕೆ ಇನ್ನೂ ನಾಲ್ಕು ದಿನ ಕಾಲಾವಕಾಶವಿದೆ. ಎಲ್ಲವನ್ನೂ ಸರಿಪಡಿಸುತ್ತೇವೆ. ಜನಪ್ರತಿನಿಧಿಯೊಬ್ಬರು ನಿಧನರಾದಾಗ ಅನುಕಂಪದ ಆಧಾರದ ಮೇರೆಗೆ ಕುಟುಂಬಕ್ಕೆ ಟಿಕೆಟ್ ಕೊಡುವುದು ಪಕ್ಷದ ನೀತಿ. 2028ರ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಾದರೂ ಅವಕಾಶ ನೀಡುವಂತೆ ಸಮುದಾಯ ಮನವಿ ಮಾಡಿದೆ. ನಮ್ಮದು ಕಾಂಗ್ರೆಸ್ ಕುಟುಂಬ. ಬೇಸರಗೊಂಡಿರುವ ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಮನವೊಲಿಸುತ್ತೇವೆ ಎಂದರು.

2023ರ ಚುನಾವಣೆಯಲ್ಲಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಣದಲ್ಲಿ ಎಸ್‌ಡಿಪಿಐ, ಜೆಡಿಎಸ್, ಪಕ್ಷೇತರರು ಸೇರಿ ಮುಸ್ಲಿಂ ಸಮುದಾಯದ 13 ಅಭ್ಯರ್ಥಿಗಳಿದ್ದರು. ಎಲ್ಲರೂ ಸೇರಿ ಪಡೆದ ಮತಗಳು 3,000 ಕೂಡ ಮೀರಿಲ್ಲ. ಸ್ಪರ್ಧೆ ಮಾಡಿದ ಎಲ್ಲರೂ ಮತ ಗಳಿಸುವುದಿಲ್ಲ ಆದರೂ, ಕಣದಲ್ಲಿರುವ ಮುಸ್ಲಿಂ ಅಭ್ಯರ್ಥಿಗಳ ಮನವೊಲಿಸುವ ಪ್ರಯತ್ನ ಮಾಡುವೆ. ಇದು ಕಾಂಗ್ರೆಸ್ ಭದ್ರಕೋಟೆಯಾಗಿದ್ದು, ಸಮರ್ಥ್ ಶಾಮನೂರು ಗೆಲುವು ಖಚಿತ ಎಂದು ಹೇಳಿದರು.

ಜೆಎಸ್‌ಎಸ್ ಬಡಾವಣೆ 2ನೇ ಹಂತದಲ್ಲಿ ಬಸವ ಜಯಂತಿ ಪೋಸ್ಟರ್ ಬಿಡುಗಡೆ



ಬಸವ ಜಯಂತಿ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮೈಸೂರು,ಏ.5(ಪಿಎಂ)– ಜೆಎಸ್‌ಎಸ್ ಬಡಾವಣೆ 2ನೇ ಹಂತದಲ್ಲಿ ಹಮ್ಮಿಕೊಂಡಿದ್ದ ಡಾ.ಶಿವಕುಮಾರ ಸ್ವಾಮೀಜಿಯವರ ಜಯಂತಿ ಕಾರ್ಯಕ್ರಮದಲ್ಲಿ ಮೈಸೂರಿನಲ್ಲಿ ನಡೆಯುವ ಬಸವ ಜಯಂತಿಯ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮೈಸೂರು ಬಸವ ಬಳಗಗಳ ಒಕ್ಕೂಟದ ತಾಲೂಕು ಪ್ರಚಾರ ಸಮಿತಿ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಸವ ಜಯಂತಿಯ ಪೋಸ್ಟರ್ ಬಿಡುಗಡೆಗೊಳಿಸಿದರಲ್ಲದೆ, ಏಪ್ರಿಲ್ 19 ಮತ್ತು 20ರಂದು ಮೈಸೂರಿನ ಕಲಾಮಂದಿರದಲ್ಲಿ ನಡೆಯುವ ಬಸವ ಜಯಂತಿ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

ಈ ವೇಳೆ ಮೈಸೂರು ತಾಲೂಕು ಪ್ರಚಾರ ಸಮಿತಿ ಅಧ್ಯಕ್ಷ ಲೋಹಿತ್ ದೊರೆಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರೊ.ಪಿ.ಎಂ.ಮಹದೇವಸ್ವಾಮಿ, ಉಪಾಧ್ಯಕ್ಷರಾದ ಬಸವರಾಜು, ಪ್ರಭುಸ್ವಾಮಿ, ಸುರೇಶ್, ಮಹೇಶ್, ಬಸವರಾಜು, ಪರಶಿವಮೂರ್ತಿ, ಸಿದ್ದಪ್ಪಸ್ವಾಮಿ, ಪುಟ್ಟಬುದ್ಧಿ, ಕುಮಾರ, ವೆಂಕಟಪ್ಪ, ಕುಂಬಾರ, ವಿಶ್ವ ಮತ್ತಿತರರು ಹಾಜರಿದ್ದರು.

ಜಗಜೀವನ್ ರಾಂ ಆದರ್ಶ, ಚಿಂತನೆ ಮೈಗೂಡಿಸಿಕೊಳ್ಳಿ

ಮಂಡ್ಯ, ಏ.5– ಡಾ.ಬಾಬು ಜಗಜೀವನ್ ರಾಂರವರ ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಮುಂದಿನ ಪೀಳಿಗೆಗೆ ಅವರ ಚಿಂತನೆ, ಆದರ್ಶ, ಮೌಲ್ಯಗಳನ್ನು ತಿಳಿಸುವಂತಹ ಕೆಲಸವಾಗಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ರವರ 119ನೇ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಸಾಮಾಜಿಕ ಸಮಾನತೆ ಮತ್ತು ಅಸ್ಪೃಶ್ಯತೆ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಬಾಬುಜಿ ಅವರು ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡಲು ಹೋರಾಡಿದರು ಹಾಗೂ ದೇವಸ್ಥಾನಗಳಿಗೆ ಪ್ರವೇಶ ಮತ್ತು ಸಾರ್ವಜನಿಕ ಬಾವಿಗಳಿಂದ ನೀರು ಪಡೆಯುವ ಹಕ್ಕಿಗಾಗಿ ಅವರು ಧ್ವನಿ ಎತ್ತಿದ್ದರು ಎಂದು ಹೇಳಿದರು.



ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಜಗಜೀವನ್ ರಾಂ ಪ್ರತಿಮೆಗೆ ಶಾಸಕ ಪಿ.ರವಿಕುಮಾರ್ ಗಣಿಗ ಮಾಲಾರ್ಪಣೆ ಮಾಡಿದರು

ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಮಂಜು ಮಾತನಾಡಿ, ದಲಿತ ಸಮುದಾಯದ ನಾಯಕರಾಗಿ, ಅಸ್ಪೃಶ್ಯತೆಯ ವಿರುದ್ಧ ಹೋರಾಡಿ ಸಾಮಾಜಿಕ ಸಮಾನತೆಗಾಗಿ ಶ್ರಮಿಸಿದರು. ಭಾರತ ಸರ್ಕಾರದ ವಿವಿಧ ಸಚಿವ ಸ್ಥಾನಗಳಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಉದ್ಯಾನವನದಲ್ಲಿರುವ ಅವರ ಪ್ರತಿಮೆಗೆ ಶಾಸಕ ಪಿ.ರವಿಕುಮಾರ್ ಗಣಿಗ ಮಾಲಾರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿ ಡಾ.ಬಾಬು ಜಗಜೀವನ್ ರಾಂ ರವರ ಬೆಳ್ಳಿರಥ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಎಎಸ್ಪಿ ತಿಮ್ಮಯ್ಯ, ಉಪ ವಿಭಾಗಾಧಿಕಾರಿ ಶಿವಮೂರ್ತಿ, ತಹಸಿಲ್ದಾರ್ ವಿಶ್ವನಾಥ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಮುಖಂಡರಾದ ಚಂದ್ರ ಶೇಖರ್, ಕೃಷ್ಣ, ಪಾಪಯ್ಯ, ಅನ್ನದಾನಿ, ಟಿ.ಸಿ.ಗುರಪ್ಪ ಉಪಸ್ಥಿತರಿದ್ದರು.

ಶತಮಾನದ ಶಾಲೆಯ 150ರ ಸಂಭ್ರಮ ವೈಭವವಾಗಿ ಆಚರಿಸಿ



ಸರ್ಕಾರಿ ಶಾಲಾ ವಾರ್ಷಿಕೋತ್ಸವದಲ್ಲಿ ಚಿಣ್ಣರು ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತಪಡಿಸಿದರು.

ಮೇಲುಕೋಟೆ: 150 ವಸಂತಗಳ ಸಂಭ್ರಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಗೆ ಮಕ್ಕಳನ್ನು ಸೇರಿಸಿ ಬಲವರ್ಧನೆ ಮಾಡಿ ಎಂದು ಉಪವಿಭಾಗಾಧಿಕಾರಿ ಕೆ.ಆರ್ ಶ್ರೀನಿವಾಸ್ ತಿಳಿಸಿದ್ದಾರೆ.

ಇಲ್ಲಿನ ಶತಮಾನದ ಸರ್ಕಾರಿ ಬಾಲಕರ ಶಾಲಾ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಖಾಸಗಿಶಾಲೆಗಳ ವ್ಯಾಮೋಹಕ್ಕೊಳಗಾಗಿ ಶಿಕ್ಷಣನೀಡಲು ಮಕ್ಕಳಿಗಾಗಿ ಲಕ್ಷಾಂತರ ರೂ. ಖರ್ಚುಮಾಡುವ ಬದಲು ಸರ್ಕಾರಿ ಶಾಲೆಗಳಿಗೆ ದಾಖಲುಮಾಡಿ ತಂದೆ ತಾಯಿಯ ಕಷ್ಟವನ್ನು ಮಕ್ಕಳು ಅರ್ಥಮಾಡಿಕೊಳ್ಳುವಂತೆ ಮಾಡಬೇಕು ಎಂದರು.

ಸರ್ಕಾರಿ ಶಾಲೆಗಳಲ್ಲಿ ಓದಿದ ಮಕ್ಕಳೇ ಇಂದು ರಾಜ್ಯದ ಆಡಳಿತ ಹಿಡಿದಿದ್ದಾರೆ ಅಧಿಕಾರಿಗಳಾಗಿದ್ದೇವೆ ಸಮಾಜದ ಸೇವೆ ಮಾಡುತ್ತಿದ್ದೇವೆ ಎಲ್ಲದರಲ್ಲೂ ಸರ್ಕಾರಿ ಶಾಲೆ ಮಕ್ಕಳೇ ಮುಂದೆ ಇದ್ದಾರೆ. ಮೇಲುಕೋಟೆಯಂತ ಪ್ರಮುಖ ಸ್ಥಳದಲ್ಲಿ ಯಾವುದೇ ಖಾಸಗಿ ಶಾಲೆಗೂ ಕಡಿಮೆ ಇಲ್ಲದಂತೆ ಉಚಿತವಾಗಿ ನಡೆಸುತ್ತಿರುವುದು ಶ್ಲಾಘನೀಯವಾಗಿದೆ ವಿವಿಧ ಹಳ್ಳಿಗಳಿಂದ ಬರುವ ಮಕ್ಕಳಿಗೆ ಉಚಿತ ವಾಹನ ವ್ಯವಸ್ಥೆ ಉಚಿತ ಪ್ರವಾಸ, ಉಚಿತ ಎಲ್‌ಕೆಜಿ ಯುಕೆಜಿ ತರಗತಿಗಳು ಲೇಖನಸಾಮಗ್ರಿಗಳು ಹೀಗೆ ಸಂಪೂರ್ಣ ಉಚಿತವಾಗಿ ಕೊಡಿಸಲು ಶ್ರಮಿಸುತ್ತಿರುವ ಮುಖ್ಯ ಶಿಕ್ಷಕ ಸಂತಾನ ರಾಮನ್ ಪರಿಶ್ರಮ ಶ್ಲಾಘನೀಯ ಎಂದರು

150 ವರ್ಷಪೂರೈಸಿದ ನೆನಪಿಗಾಗಿ ಈ ವರ್ಷ ಅಭೂತಪೂರ್ವ ಹಾಗೂ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಬೇಕು ಈ ವರ್ಷ ಸರ್ಕಾರಿ ಪ್ರೌಢಶಾಲೆ ಆರಂಭವಾಗಲಿದೆ ಎಂದು ಇಲಾಖಾಧಿಕಾರಿಗಳು ಮಾಹಿತಿ ನೀಡಿದ್ದಾರೆ ಶಾಲಾಭಿವೃದ್ಧಿಗೆ ಎಲ್ಲಾ ರೀತಿಯ ಸಹಕಾರವನ್ನೂ ನೀಡುತ್ತೇನೆ ಎಂದು ಉಪವಿಭಾಗಾಧಿಕಾರಿಗಳು ಭರವಸೆ ನೀಡಿದರು.

ಇದೇ ವೇಳೆ ಸ್ಥಾನಾಚಾರ್ಯ ಸಂಪತ್ಕುಮಾರನ್ ಮಾತನಾಡಿ ಮೇಲುಕೋಟೆಯ ಶತಮಾನದ ಶಾಲೆಯಲ್ಲಿ ಚೆಲುವನಾರಾಯಣ ಸ್ವಾಮಿ ದೇವಾಲಯದ ಸ್ಥಾನೀಕರು ಅರ್ಚಕರು ವ್ಯಾಸಂಗಮಾಡಿದ್ದೇವೆ. ಶತಮಾನದ ಶಾಲೆ ನಮ್ಮೂರಿನ ಹೆಮ್ಮೆಯಾಗಿದ್ದು ನಾನೂ ಸೇರಿದಂತೆ ಎಲ್ಲರೂ ಶಾಲಾಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡುತ್ತೇವೆ ಎಂದರು.

ಪಟ್ಟಲದಮ್ಮ ದೇವಸ್ಥಾನಕ್ಕೆ ಎಚ್‌ಡಿಕೆ ಭೇಟಿ



ಮಾಣಿಕ್ಯನಹಳ್ಳಿ ಗ್ರಾಮಕ್ಕೆ ಆಗಮಿಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಹೆಣ್ಣುಮಕ್ಕಳು ಪೂರ್ಣಕುಂಭದೊಂದಿಗೆ ಸ್ವಾಗತಿಸಿದರು.

ಪಾಂಡವಪುರ,ಏ.5–ತಾಲೂಕಿನ ಮಾಣಿಕ್ಯನಹಳ್ಳಿ ಗ್ರಾಮದ ಹೊರವಲಯದಲ್ಲಿ ಇರುವ ಶ್ರೀಪಟ್ಟಲದಮ್ಮ ದೇವಸ್ಥಾನಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭೇಟಿಕೊಟ್ಟು ದೇವಿಗೆ ಪೂಜೆ ಸಲ್ಲಿಸಿದರು.

ಪಟ್ಟಲದಮ್ಮ ದೇವಿ ಪೂಜೆ ಹಾಗೂ ಪರ ಕಾರ್ಯಕ್ರಮಕ್ಕೆ ಗ್ರಾಮಕ್ಕೆ ಆಗಮಿಸಿದ ಕುಮಾರಸ್ವಾಮಿಯವರನ್ನು ಮಹಿಳೆಯರು ಬೆಲ್ಲದ ಆರತಿ ಬೆಳಗಿ, ಪೂರ್ಣಕುಂಭ ಹೊತ್ತು, ದಾರಿಯುದ್ದಕ್ಕೂ ಹೂಮಳೆ ಸುರಿಸಿ ಸ್ವಾಗತಿಸಿದರು. ಶ್ರೀಪಟ್ಟಲದಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಕುಮಾರಸ್ವಾಮಿ ಅವರು ಆಗಮಿಸುತ್ತಿದ್ದಂತೆಯೇ ಮಹಿಳೆಯರು, ಹೆಣ್ಣು ಮಕ್ಕಳು, ಸಾರ್ವಜನಿಕರು ಸೆಲ್ಫಿ ತೆಗೆದುಕೊಳ್ಳಲು ಮುಗಿಬಿದ್ದರು. ಬಳಿಕ ದೇವರ ಪರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅವರು ಸಾಮೂಹಿಕವಾಗಿ ಭೋಜನಕೂಟದಲ್ಲಿ ಭಾಗವಹಿಸಿ ದೇವರ ಪ್ರಸಾದ ಸ್ವೀಕರಿಸಿದರು.

ಚೀರ್ಲಗಾಟಿ ಕರೀಗೌಡರ ಮಗ ಪುಟ್ಟರಾಜು ಮತ್ತು ಎಂ.ಎಸ್.ಮರಿಸ್ವಾಮೀಗೌಡ ಕುಟುಂಬದ ವತಿಯಿಂದ ಕೇಂದ್ರ ಸಚಿವ ಕುಮಾರಸ್ವಾಮಿ, ಮಾಜಿ ಸಚಿವ ಪುಟ್ಟರಾಜು ಅವರನ್ನು ಅಭಿನಂದಿಸಲಾಯಿತು.

ಕುಮಾರಸ್ವಾಮಿ ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳು ಜನರ ಮನಸ್ಸಿಗೆ ನೆಮ್ಮದಿ, ಶಾಂತಿ ನೀಡುತ್ತಿವೆ, ನಾವು ಭಕ್ತಿಯಿಂದ ದೇವರ ಪೂಜೆ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ದೇವರ ಕೃಪೆಗೆ ಪಾತ್ರರಾಗಬೇಕು. ಪುಟ್ಟರಾಜು ಮತ್ತು ಮರಿಸ್ವಾಮೀಗೌಡ ಕುಟುಂಬದವರು ಸಂಭ್ರಮದಿಂದ ಶ್ರೀಪಟ್ಟಲದಮ್ಮ ಪೂಜೆ ನೆರವೇರಿಸಿ ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಂಡಿದ್ದಾರೆ. ಇವರಿಗೆ ಭಗವಂತ ಒಳ್ಳೆಯದು ಮಾಡಲಿ ಎಂದು ಶುಭ ಹಾರೈಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಸಿ.ಅಶೋಕ್, ಎಚ್.ಮಂಜುನಾಥ್, ರವಿ, ಸಿ.ಶಿವಕುಮಾರ್, ಬಿ.ಆರ್.ರಾಮಚಂದ್ರು, ಡಾಲುರವಿ, ಅನುಪಮ ಹಾಜರಿದ್ದರು.

ಶೋಷಿತರ ಸಮಸ್ಯೆಗಳನ್ನು ತಾಲೂಕಿನಲ್ಲೇ ಬಗೆಹರಿಸಲು ಕ್ರಮ

ಮದ್ದೂರು, ಏ.5– ಶೋಷಣೆಗೆ ಒಳಗಾಗುವ ಎಸ್ಸಿ, ಎಸ್ಟಿ ಜನಾಂಗದವರ ಸಮಸ್ಯೆಗಳನ್ನು ತಾಲೂಕು ಹಂತದಲ್ಲೇ ಬಗೆಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಎಲ್. ಮೂರ್ತಿ ತಿಳಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೋಷಣೆಗೆ ಒಳಗಾಗುವ ಎಸ್ಸಿ, ಎಸ್ಟಿ ಜನಾಂಗದವರು ಆಯೋಗಕ್ಕೆ ಬಂದು ನಿರ್ಭೀತಿಯಿಂದ ಪ್ರಕರಣ ದಾಖಲಿಸಬಹುದು. ಅನುಸೂಚಿತ ಜಾತಿಗಳು ಮತ್ತು ಬುಡಕಟ್ಟುಗಳ ಆಯೋಗ ಸದಾ ನಿಮ್ಮೊಂದಿಗೆ ಇರುತ್ತದೆ. ನಾನು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ತಾಲೂಕಿನಿಂದ ಈಗಾಗಲೇ 48 ಅರ್ಜಿಗಳು ಆಯೋಗಕ್ಕೆ ಸಲ್ಲಿಕೆ ಯಾಗಿತ್ತು. ಅದರಲ್ಲಿ ನ್ಯಾಯಾಲಯದ ಮುಖಾಂತರ 12 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಜನರು ಆಯೋಗಕ್ಕೆ ಅಲೆದಾಡಬಾರದು ಎಂಬ ಉದ್ದೇಶದಿಂದ ಕೆಲ ಅರ್ಜಿಗಳನ್ನು ತಾಲೂಕು ಮಟ್ಟದಲ್ಲೆ ವಿಲೇವಾರಿ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಕೆಲ ದಿನಗಳ ಹಿಂದೆ ಕೆ.ಶೆಟ್ಟಿಹಳ್ಳಿ ಗ್ರಾಮದಲ್ಲಿ ನಡೆದಿದ್ದ ಗಲಭೆ ಕುರಿತು ಪ್ರಸ್ತಾಪಿಸಿ ಗಲಭೆ ನಡೆಯಬಾರದಿತ್ತು ತಾಲೂಕು ಆಡಳಿತ ಮಧ್ಯೆ ಪ್ರವೇಶಿಸಿ ಸಮಸ್ಯೆಯನ್ನು ಬಗೆಹರಿಸಿದೆ. ಇನ್ನು ಮುಂದೆ ಇಂತಹ ಘಟನೆಗಳು ನಡೆಯದಂತೆ ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಅಧಿಕಾರಿಗಳ ಜತೆಗೆ ಗ್ರಾಮಕ್ಕೆ ಭೇಟಿ ನೀಡಲಾಗುವುದು ಎಂದರು.



ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ.ಎಲ್. ಮೂರ್ತಿ ಅಧಿಕಾರಿಗಳ ಸಭೆ ನಡೆಸಿದರು.

ಮುಖ್ಯವಾಗಿ ಎಲ್ಲಾ ಇಲಾಖೆಗಳಲ್ಲಿ ಎಸ್‌ಸಿಪಿ/ಟಿಎಸ್‌ಪಿ ಹಣ ಸರಿಯಾಗಿ ಅರ್ಹರಿಗೆ ತಲುಪಬೇಕು. ಎಸ್‌ಸಿ, ಎಸ್‌ಟಿ ಸಮುದಾಯಗಳ ನಾಗರಿಕ ಹಕ್ಕುಗಳು, ಶಿಕ್ಷಣ ಹಾಗೂ ಅವರನ್ನು ಸಾಮಾಜಿಕವಾಗಿ ಸದೃಢ ಮಾಡಲು ಅಧಿಕಾರಿಗಳು ಕ್ರಮವಹಿಸಬೇಕು. ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಶೀಘ್ರವಾಗಿ ಪರಿಹಾರ ಒದಗಿಸುವುದು ಅಧಿಕಾರಿಗಳ ಕರ್ತವ್ಯ ಇದರಲ್ಲಿ ಯಾವುದೇ ಲೋಪ ದೋಷಗಳು ಕಂಡು ಬಂದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಆಯೋಗವು ನಿರ್ದಾಕ್ಷಿಣ್ಯವಾಗಿ ಶಿಸ್ತು ಕ್ರಮ ಕೈಗೊಳ್ಳಲಿದೆ ಎಂದು ಆಯೋಗದ ಅಧ್ಯಕ್ಷ ಡಾ. ಎಲ್. ಮೂರ್ತಿ ಎಚ್ಚರಿಕೆ ನೀಡಿದರು.

ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ, ತಾಪಂ ಇಓ ರಾಮಲಿಂಗಯ್ಯ, ನಗರಸಭಾ ಪೌರಾಯುಕ್ತೆ ರಾಧಿಕಾ, ಸಮಾಜ ಕಲ್ಯಾಣಾಧಿಕಾರಿ ನಾಗರಾಜ್, ಸಿಪಿಐ ನವೀನ್, ಜಿಲ್ಲಾ ಗ್ಯಾರಂಟಿ ಯೋಜನೆ ಉಪಾಧ್ಯಕ್ಷ ಎಸ್.ಹೆಚ್.ರಾಜೇಂದ್ರ, ಕೆಡಿಪಿ ಸದಸ್ಯ ಅರುವನಹಳ್ಳಿ ಸಿದ್ದರಾಜು, ಮುಖಂಡರಾದ ಚಿದಂಬರ ಮೂರ್ತಿ, ಶಿವಲಿಂಗಯ್ಯ, ಮಹದೇವಯ್ಯ ಮೂರ್ತಿ, ಕೆ.ಶ್ರೀನಿವಾಸ್, ಸ್ವಾಮಿ, ಆಲೂರು ಕುಮಾರ್, ಭಾನು ಪ್ರಕಾಶ್ ಮತ್ತಿತರರು ಇದ್ದರು.

ದಿವ್ಯರಾಮಚಂದ್ರಶೆಟ್ಟಿ ಜೆಡಿಎಸ್ ಮಹಿಳಾ ಅಧ್ಯಕ್ಷೆ

ಭಾರತೀನಗರ.ಏ.5–ಮದ್ದೂರು ತಾಲೂಕಿನ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷರಾಗಿ ಮರು ನೇಮಕಗೊಂಡ ಬನ್ನಹಳ್ಳಿ ಗ್ರಾಮದ ದಿವ್ಯರಾಮಚಂದ್ರಶೆಟ್ಟಿ ಯವರಿಗೆ ಆದೇಶ ಪತ್ರವನ್ನು ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್ ನೀಡಿ ಅಭಿನಂದಿಸಿದರು.

ಸಂಘಟನೆ ಹಾದಿಯಲ್ಲಿ ನಾನು ಸಹ ಜೆಡಿಎಸ್ ಪಕ್ಷಕ್ಕೆ ನಿಷ್ಠೆಯಿಂದ ಕೆಲಸ ನಿರ್ವಹಿಸಲು ಮುಂದಾಗುತ್ತೇನೆ ಎಂದು ದಿವ್ಯರಾಮಚಂದ್ರಶೆಟ್ಟಿ ಭರವಸೆ ನೀಡಿದರು.

ಮುಖ್ಯಮಂತ್ರಿ ಪದಕ ವಿಜೇತ ಕುಮಾರ್‌ಗೆ ಅಭಿನಂದನೆ



ಮುಖ್ಯಮಂತ್ರಿ ಪದಕ ಪುರಸ್ಕೃತ ಇನ್ಸ್‌ಪೆಕ್ಟರ್ ಬಿ.ಜಿ. ಕುಮಾರ್ ಅವರನ್ನು ಒಕ್ಕಲಿಗರ ಸಂಘದ ವತಿಯಿಂದ ಅಭಿನಂದಿಸಲಾಯಿತು.

ಶ್ರೀರಂಗಪಟ್ಟಣ: ಮುಖ್ಯ ಮಂತ್ರಿ ಪದಕ ಪಡೆದ ಟೌನ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್ ಅವರನ್ನು, ಒಕ್ಕಲಿಗರ ಸಂಘದ ವತಿಯಿಂದ ಅಭಿನಂಧಿಸಲಾಯಿತು.

ಉತ್ತಮ ಕೆಲಸಗಳನ್ನು ನಿರ್ವಹಿಸಿ ಪೊಲೀಸ್ ಇಲಾಖೆಗೆ ಒಳ್ಳೆಯ ಹೆಸರು ಬರುವಂತೆ ನೋಡಿಕೊಂಡ ಕುಮಾರ್ ಇನ್ನಷ್ಟು ಉತ್ತಮ ಕೆಲಸ ಮಾಡಲು ಇಂತಹ ವಿಶೇಷ ಪ್ರಶಸ್ತಿಗಳು ಪ್ರೋತ್ಸಾಹವಾಗುತ್ತದೆ ನಮ್ಮ ಒಕ್ಕಲಿಗರ ಸಂಘವು ಇವರನ್ನು ಅಭಿನಂಧಿಸುತ್ತದೆ ಎಂದು ಸಂಘದ ಅಧ್ಯಕ್ಷ ಇಂದ್ರಕುಮಾರ್ ತಿಳಿಸಿದರು.

ಸಂಘದ ಗೌರವಾಧ್ಯಕ್ಷ ಚಂದ್ರಶೇಖರ್ ಕಾರ್ಯಾಧ್ಯಕ್ಷ ಟಿ.ಲಕ್ಷ್ಮಿನಾರಾಯಣ್, ಪ್ರದಾನ ಕಾರ್ಯದರ್ಶಿ ಹರೀಶ್, ವೆಂಕಟೇಶ್ ಬಿ.ಸಿ.ಸತೀಶ್ ಕುಮಾರ್, ಸಾಗರ್, ಜೂಮ್ ಚಂದ್ರು, ಎಚ್‌ಎಮ್‌ಟಿ ದೇವರಾಜ್, ಸೊಸೈಟಿ ಸಿದ್ದೇಗೌಡರು, ಮಹೇಶ್ ಲೋಕೇಶ್ ಮತ್ತು ಇನ್ನು ಹಲವಾರು ಗಣ್ಯರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಅಬ್ಬಾ... ಸುರಕ್ಷಿತವಾಗಿ ಸಿಕ್ಕ ಶರಣ್ಯ

ನಾಲ್ಕು ದಿನಗಳಿಂದ ಆಹಾರವಿಲ್ಲದೆ ನಿತ್ರಾಣರಾಗಿದ್ದ ಶರಣ್ಯ ಅವರನ್ನು ಸದ್ಯ ವಿರಾಜಪೇಟೆಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಗಿದೆ.

ಧೈರ್ಯ ತುಂಬಿದ ಶಾಸಕರು: ಟೆಕ್ಕಿ ಶರಣ್ಯ ಪತ್ತೆಯಾದ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಶಾಸಕ ಎ.ಎಸ್.ಪೊನ್ನಣ್ಣ, ಶರಣ್ಯ ಅವರಿಗೆ ಧೈರ್ಯ ಹೇಳಿದರು. ಇದೇ ವೇಳೆ ದಟ್ಟ ಅರಣ್ಯದೊಳಗೆ ಸಿಲುಕಿದ್ದ ಶರಣ್ಯ ಅವರನ್ನು ಪತ್ತೆ ಮಾಡಿ ಸುರಕ್ಷಿತವಾಗಿ ಕರೆ ತಂದ ಸ್ಥಳೀಯ ಕುಡಿಯ ಬುಡಕಟ್ಟು ಸಮುದಾಯದ ಯುವಕರು, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ, ನಕ್ಸಲ್ ನಿಗ್ರಹ ದಳದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಧನ್ಯವಾದ ತಿಳಿಸಿದರು.

ಶರಣ್ಯ ಅವರ ಸಹೋದರ ಶ್ಯಾಮ್ ಮತ್ತು ಚಿಕ್ಕಪ್ಪ ಕೂಡ ರಕ್ಷಣಾ ತಂಡಗಳು ಹಾಗೂ ರಾಜ್ಯ ಸರಕಾರಕ್ಕೆ ಧನ್ಯವಾದ ಸಲ್ಲಿಸಿದರು. ಘಟನಾ ಸ್ಥಳದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದು ಮಣಿ, ಅರಣ್ಯ ಇಲಾಖೆ ಡಿಸಿಎಫ್ ಅಭಿಷೇಕ್, ಕುಡಿಯ ಸಮುದಾಯದ ಪ್ರಮುಖರಾದ ಕುಡಿಯರ ಮುತ್ತಪ್ಪ, ಅರಣ್ಯ ಇಲಾಖೆ ಅಧಿಕಾರಿಗಳಿದ್ದರು.

ವಿರಾಜಪೇಟೆ ವರದಿ: ಸಂಜೆ ಪತ್ತೆಯಾದ ಟೆಕ್ಕಿ ಶರಣ್ಯರನ್ನು ರಾತ್ರಿ 9 ಗಂಟೆ ಹೊತ್ತಿನಲ್ಲಿ ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ಕರೆತಂದು ದಾಖಲಿಸಲಾಯಿತು. ಕೂಡಲೇ ಆರೈಕೆ ಆರಂಭಿಸಿದ ವೈದ್ಯ ಗಿರಿಧರ್, ಸುಮಾರು 30 ನಿಮಿಷಗಳ ಕಾಲ ಅಗತ್ಯ ವೈದ್ಯಕೀಯ ತಪಾಸಣೆ ನಡೆಸಿ, ಚಿಕಿತ್ಸೆ ನೀಡಿದರು. ಬಳಿಕ ಚೇತರಿಸಿಕೊಂಡ ಶರಣ್ಯ ಅವರನ್ನು ತಂದೆ ಗೋಪಿ ಮತ್ತು ಸಹೋದರ ಶ್ಯಾಮ್ ರಾತ್ರಿ 9.30ರ ಹೊತ್ತಿಗೆ ಕೇರಳಕ್ಕೆ ಕರೆದುಕೊಂಡು ಹೊದರೆಂದು ಆಸ್ಪತ್ರೆಯ ಸರ್ಜನ್ ಡಾ.ವೀರೇಂದ್ರ ಶಿಂಪಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಹರಕೆಗೆ ಹರಸಿದ ದೈವ: ಕಳೆದ 4 ದಿನಗಳಿಂದ ತಡಿಯಂಡಮೋಳ್ ಬೆಟ್ಟದ ಅರಣ್ಯದೊಳಗೆ ನಾಪತ್ತೆಯಾಗಿದ್ದ ಶರಣ್ಯ ಅವರ ಪತ್ತೆಗೆ ಶೋಧನಾ ತಂಡವು ಸ್ಥಳೀಯ ಕುಡಿಯ ಸಮುದಾಯದ ಯುವಕರ ರಕ್ಷಣಾ ತಂಡಕ್ಕೆ ಮನವಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ಸುರಕ್ಷಿತವಾಗಿ ಮರಳಬೇಕು ಎಂದು ಸ್ಥಳೀಯ ಕುಡಿಯ ಸಮು ದಾಯದ ಪ್ರಮುಖರು ತಮ್ಮ ಆರಾಧ್ಯ ದೈವಗಳ ಮೊರೆ ಹೋಗಿದ್ದರು. ಕಾಕತಾಳೀಯ ಎಂಬಂತೆ ಕುಡಿಯ ಸಮುದಾಯದ ಯುವಕರ ತಂಡಕ್ಕೆ ಶರಣ್ಯ ಸುರಕ್ಷಿತವಾಗಿ ಸಿಕ್ಕಿದ್ದಾರೆ. ಆ ಮೂಲಕ ಸಮುದಾಯದ ಪ್ರಾರ್ಥನೆಗೆ ಆರಾಧ್ಯ ದೈವಗಳು ಹರಸಿವೆ.

ಕಳೆದ ಬುಧವಾರ(ಏ.1) ಬಿ.ನಂದಾ ಎಂಬವರ ಹೋಂಸ್ಟೇಗೆ ಬಂದಿದ್ದ ಶರಣ್ಯರಿಗೆ ಮರುದಿನ ಬೆಳಗ್ಗೆ ಬೆಟ್ಟದ ಮೇಲಿನ ಗೇಟ್‌ವರೆಗೆ ದ್ವಿಚಕ್ರ ವಾಹನದಲ್ಲಿ ಡ್ರಾಪ್ ಕೊಟ್ಟಿದ್ದರೆನ್ನಲಾಗಿದೆ. ಶರಣ್ಯ ಏಕಾಂಗಿಯಾಗಿ ಚಾರಣಕ್ಕೆ ಆಗಮಿಸಿದ್ದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಬಾಗಲಕೋಟೆ ಮೂಲದ ನಾಲ್ವರು ಚಾರಣಿಗರೊಂದಿಗೆ ಶರಣ್ಯ ಅವರನ್ನು ತಡಿಯಂಡಮೋಳ್ ಬೆಟ್ಟಕ್ಕೆ ತೆರಳಲು ಅನುಮತಿ ನೀಡಿದ್ದರು. ಶರಣ್ಯ ಅಲ್ಲಿನ ನಾಯಿಯೊಂದಿಗೆ ಆಟವಾಡುತ್ತಾ ಬೆಟ್ಟ ಹತ್ತುತ್ತಿದ್ದರಿಂದ ಉಳಿದವರು ಮುಂದೆ ಹೋದರೆಂದು ಹೇಳಲಾಗಿತ್ತು. ಅಂದು ಸಂಜೆ ಚಾರಣಕ್ಕೆ ತೆರಳಿದ್ದ ನಾಲ್ವರು ಮಾತ್ರ ಹಿಂತಿರುಗಿ, ಶರಣ್ಯ ನಾಪತ್ತೆಯಾಗಿದ್ದರು. ಕೂಡಲೇ ಅರಣ್ಯ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದರು.

500 ಎಕರೆಯಲ್ಲಿ ಶೋಧ: ಚಾರಣದಿಂದ ವಾಪಸ್ಸಾದ ನಾಲ್ವರ ಬಳಿ ಶರಣ್ಯ ಬಗ್ಗೆ ವಿಚಾರಿಸಿದಾಗ ಯಾವುದೇ ಸುಳಿವು ಪತ್ತೆಯಾಗಲಿಲ್ಲ. ಹಾಗಾಗಿ ಅವರನ್ನು ವಿಚಾರಣೆಗೆ ಒಳಪಡಿಸಿ, ಮುಚ್ಚಳಿಕೆ ಬರೆಸಿಕೊಳ್ಳಲಾಗಿತ್ತು. ಬಳಿಕ ಕೇರಳ ಮೂಲದ ಶರಣ್ಯ ಪತ್ತೆಗಾಗಿ ಶೋಧ ಕಾರ್ಯ ಆರಂಭಿಸಲಾಯಿತು. ಸತತ 4ನೇ ದಿನವೂ ಥರ್ಮಲ್ ಹಾಗೂ ಸಾಮಾನ್ಯ ಡ್ರೋನ್ ಮೂಲಕ ಕಾರ್ಯಾಚರಣೆ ನಡೆಸಲಾಗಿತ್ತು. ಅರಣ್ಯ ಇಲಾಖೆ, ಪೊಲೀಸ್, ನಕ್ಸಲ್ ನಿಗ್ರಹ ದಳದ 2 ತಂಡ ಮತ್ತು ಸ್ಥಳೀಯ ಬುಡಕಟ್ಟು ಜನಾಂಗದ 15 ಮಂದಿ ಯುವಕರ ತಂಡ ಅಂದಾಜು 500 ಎಕರೆ ಪ್ರದೇಶದಲ್ಲಿ ಶೋಧ ನಡೆಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಯುವತಿ ಕಾಣೆಯಾಗಿ ರುವ ಬಗ್ಗೆ ಆತಂಕ ವ್ಯಕ್ತಪಡಿಸಿ, ಪತ್ತೆ ಕಾರ್ಯಾಚರಣೆಗೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸುವಂತೆ ಸೂಚನೆ ನೀಡಿದ್ದರು.

ಇದು 4ನೇ ಘಟನೆ: ತಡಿಯಂಡಮೋಳ್ ಬೆಟ್ಟದ ಚಾರಣ ಹಾದಿ ಕಷ್ಟಕರವಾಗಿಲ್ಲವಾದರೂ ಕೆಲವು ಮಂದಿ ದಾರಿ ತಪ್ಪಿ ಕಾಡಿನಲ್ಲಿ ತೊಂದರೆಗೆ ಸಿಲುಕಿದ ಘಟನೆಗಳು ಈ ಹಿಂದೆಯೂ ನಡೆದಿವೆ. ಬೆಂಗಳೂರು ಮೂಲದ ದಂಪತಿ ಚಾರಣಕ್ಕೆ ತೆರಳಿ ಹೀಗೆಯೇ ಕಾಡಿನಲ್ಲಿ ಸಿಲುಕಿದ್ದರು. ವಿಷಯ ತಿಳಿದ ಸ್ಥಳೀಯ ಗ್ರಾಮಸ್ಥರು ಹುಡುಕಾಟ ನಡೆಸಿ, ಮರುದಿನ ಅವರನ್ನು ರಕ್ಷಿಸಿದ್ದರು. ಬೆಂಗಳೂರು ಮೂಲದ ಯುವಕನೊಬ್ಬ ಇದೇ ಬೆಟ್ಟಕ್ಕೆ ಚಾರಣಕ್ಕೆ ತೆರಳಿ ದಾರಿ ತಪ್ಪಿದ್ದಾಗಲೂ ಗ್ರಾಮಸ್ಥರೇ ಸುರಕ್ಷಿತವಾಗಿ ಕರೆ ತಂದಿದ್ದರು. ಕೆಲವು ದಿನಗಳ ಹಿಂದೆ ಚಾರಣಕ್ಕೆ ತೆರಳಿದ್ದ ವ್ಯಕ್ತಿಯೊಬ್ಬರು ಬೆಟ್ಟದಲ್ಲಿಯೇ ಹೃದಯಾಘಾತದಿಂದ ಸಾವನ್ನಪ್ಪಿದರು. ಆ ವೇಳೆಯೂ ಗ್ರಾಮಸ್ಥರು ಮತ್ತು ನಾಪೋಕ್ಲು ಪೊಲೀಸರು ಬೆಟ್ಟದ ತಪ್ಪಲಿನಿಂದ ವ್ಯಕ್ತಿಯ ಮೃತದೇಹವನ್ನು ಹೊತ್ತು ತಂದಿದ್ದರು. ಇದೀಗ ತಡಿಯಂಡಮೋಳ್ ಬೆಟ್ಟದಲ್ಲಿ ದಾರಿ ತಪ್ಪಿದ್ದ ಶರಣ್ಯ ಪ್ರಕರಣ ನಾಲ್ಕನೆಯದಾಗಿದ್ದು, ಸದ್ಯ ನಾಪತ್ತೆಯಾಗಿ ನಾಲ್ಕನೇ ದಿನಕ್ಕೆ ಸುರಕ್ಷಿತವಾಗಿ ಪತ್ತೆಯಾಗಿದ್ದಾರೆ.

ಜೀವ ಉಳಿಸಿಕೊಂಡಿದ್ದೆ

3 ದಿನಗಳಿಂದ ಕಾಡಿನಲ್ಲಿ ದೊರೆಯುತ್ತಿದ್ದ ಕೊಲ್ಲಿ ನೀರನ್ನು ಮಾತ್ರ ಸೇವಿಸಿ ಜೀವ ಉಳಿಸಿಕೊಂಡಿದ್ದೇನೆ. ಪ್ರತಿ ದಿನ 3 ಲೀಟರ್‌ನಷ್ಟು ನೀರು ಕುಡಿಯುತ್ತಿದ್ದೆ. ಬೆಳಗಾಗುತ್ತಿದ್ದಂತೆ ಎತ್ತರದ ಪ್ರದೇಶದ ಕಡೆಗೆ ನಡೆಯುತ್ತಿದ್ದೆ. ಆ ಮೂಲಕ ತಾನು ಬಂದ ದಾರಿ ಹುಡುಕುವ ಪ್ರಯತ್ನ ನಡೆಸಿದ್ದೆ. ಒಂದು ದಿನ ಮಳೆಯೂ ಬಂದಿತ್ತು. ಅದರ ಮರುದಿನ ದಟ್ಟ ಮೋಡ ಮತ್ತು ಮಂಜು ಮುಸುಕಿದ್ದರಿಂದ ಏನೂ ಕಾಣುತ್ತಿರಲಿಲ್ಲ. ಒಂದು ದಿನ ದೂರದಲ್ಲಿ ಮರಿ ಆನೆಗಳು ಕಂಡವು. ಆದರೆ ಅವುಗಳಿಂದ ಯಾವುದೇ ತೊಂದರೆ ಆಗಲಿಲ್ಲ ಎಂದು ಹೇಳಿದರು. ಕಳೆದ 4 ದಿನಗಳಿಂದ ನನ್ನನ್ನು ಹುಡುಕುವ ಪ್ರಯತ್ನ ನಡೆಸುತ್ತಿರಬಹುದು ಎಂದು ಅಂದಾಜಿಸಿದ್ದೆ. ಆದರೆ ಯಾವುದೇ ರಕ್ಷಣಾ ತಂಡಗಳು ನನ್ನ ಸುತ್ತಮುತ್ತಲಿನ ಪ್ರದೇಶದಲ್ಲಿ ಕಾಣಿಸದ ಕಾರಣ ಭಯ ಹೆಚ್ಚಾಗಿತ್ತು. ಇಂದು ಸಂಜೆ ವೇಳೆಗೆ ದೂರದಲ್ಲಿ ಯಾರೋ ಬರುತ್ತಿರುವ ಸದ್ದು ಕೇಳಿ ಹೋದ ಜೀವ ಬಂದಂತಾಯಿತು. ಅವರು ನನ್ನನ್ನು ಹುಡುಕಿಕೊಂಡು ಬಂದಿರುವ ಸ್ಥಳೀಯರು ಎಂಬುದು ಖಚಿತವಾಯಿತು ಎಂದು ನಿಟ್ಟುಸಿರುಬಿಟ್ಟರು.

ಬಸ್‌ನಲ್ಲಿ 17.50 ಲಕ್ಷ ಹಣ ಪತ್ತೆ

ಕೇರಳದಲ್ಲಿ ವಿಧಾನ ಸಭಾ ಚುನಾವಣೆಯ ಚಟುವಟಿಕೆಗಳು ಆರಂಭವಾಗುತ್ತಿರುವುದರಿಂದ, ಈ ಹಣವನ್ನು ಮತದಾರರಿಗೆ ಹಂಚಲು ಅಥವಾ ಚುನಾವಣಾ ಅಕ್ರಮಗಳಿಗೆ ಬಳಸಲು ಸಾಗಿಸಲಾಗುತ್ತಿತ್ತೇ ಎಂಬ ಬಲವಾದ ಸಂಶಯ ವ್ಯಕ್ತವಾಗಿದೆ. ಕರ್ನಾಟಕದಿಂದ ಇಷ್ಟೊಂದು ದೊಡ್ಡ ಮೊತ್ತದ ಹಣ ಕೇರಳಕ್ಕೆ ರವಾನೆಯಾಗಿರುವುದು ಅಧಿಕಾರಿಗಳನ್ನು ಚಿಂತೆಗೀಡು ಮಾಡಿದೆ.

ಐಟಿ ತನಿಖೆಗೆ: ಅಬಕಾರಿ ಇನ್ಸ್‌ಪೆಕ್ಟರ್ ಅನಿಲ್ ಕುಮಾರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ, ವಶಪಡಿಸಿಕೊಂಡ ಹಣಕ್ಕೆ ಯಾವುದೇ ದಾಖಲೆಗಳು ಇಲ್ಲದ ಕಾರಣ ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ ನಾರಾಯಣ ಸ್ವಾಮಿಯನ್ನು ಐಟಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದು, ಹಣದ ಮೂಲ ಪತ್ತೆ ಹಚ್ಚಲು ಮುಂದಾಗಿದ್ದಾರೆ. ಹವಾಲಾ ಜಾಲದ ಮೂಲಕ ಈ ವ್ಯವಹಾರ ನಡೆದಿದೆಯೇ ಎಂಬ ಆಯಾಮದಲ್ಲೂ ತನಿಖೆ ನಡೆಸುತ್ತಿದ್ದಾರೆ.

ಹೆಚ್ಚಿದ ನಿಗಾ: ಕೇರಳದ ಗಡಿ ಭಾಗಗಳಲ್ಲಿ ಮತ್ತು ಚೆಕ್‌ಪೋಸ್ಟ್‌ಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗಿದೆ. ಅಂತರರಾಜ್ಯ ಬಸ್‌ಗಳು ಮತ್ತು ಖಾಸಗಿ ವಾಹನಗಳ ಮೇಲೆ ಅಬಕಾರಿ ಮತ್ತು ಪೊಲೀಸ್ ಇಲಾಖೆ ಕಣ್ಣಿಟ್ಟಿದೆ. ಈ ಘಟನೆಯು ರಾಜಕೀಯ ವಲಯದಲ್ಲೂ ಚರ್ಚೆಗೆ ಕಾರಣವಾಗಿದ್ದು, ಕರ್ನಾಟಕದಿಂದ ಕೇರಳಕ್ಕೆ ಹಣ ವರ್ಗಾವಣೆಯಾಗುತ್ತಿರುವ ಬಗ್ಗೆ ಕೇರಳದ ವಿರೋಧ ಪಕ್ಷಗಳು ಸರ್ಕಾರದ ಗಮನ ಸೆಳೆಯುತ್ತಿವೆ.

ಪಕ್ಕಾ ಅಹಿಂದ ವಿರೋಧಿ

ಹೇಗಾದರೂ ಗೆಲ್ಲಲೇ ಬೇಕೆಂದು ಇಡೀ ಸರ್ಕಾರ ಆಡಳಿತ ಬಿಟ್ಟು ದಾವಣಗೆರೆಯಲ್ಲಿ ಮೊಕ್ಕಂ ಹೂಡಿದೆ. ವಿಧಾನಸೌಧ ಸಂಪೂರ್ಣ ಖಾಲಿ ಆಗಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಸಚಿವರ ಜೊತೆಗೆ ಎಐಸಿಸಿ ರಾಜ್ಯ ಉಸ್ತುವಾರಿಯೂ ತಳವೂರಿದ್ದಾರೆ. ತಮ್ಮದು ಒಂದು ಶತಮಾನಕ್ಕೂ ಹೆಚ್ಚು ಇತಿಹಾಸವುಳ್ಳ ಪಕ್ಷ ಎನ್ನುವ ಇವರಿಗೆ ಜನತೆ ಬಗ್ಗೆ ಯಾವ ರೀತಿಯ ಬದ್ಧತೆ ಇದೆಯೋ ಗೊತ್ತಿಲ್ಲ ಎಂದು ಟೀಕಿಸಿದರು.


ಗ್ಯಾರಂಟಿ ಹೊರತು ಬೇರೇನೂ ಇಲ್ಲ: ಮುಖ್ಯಮಂತ್ರಿಗಳು ಉಪ ಚುನಾವಣೆಕಣದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳನ್ನು ನಿಂದಿಸುವುದನ್ನು ಬಿಟ್ಟು ಬೇರೇನೂ ಮಾಡುತ್ತಿಲ್ಲ. ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಇರುವ ಏಕೈಕ ಬಂಡವಾಳ ಎಂದರೆ ಬೇಕಾಬಿಟ್ಟಿಯಾಗಿ ನೀಡುತ್ತಿರುವ ಐದು ಗ್ಯಾರಂಟಿಗಳು ಮಾತ್ರ. ಚುನಾವಣೆ ಬಂದಾಗ ಗೃಹಲಕ್ಷ್ಮೀ ಹಣವನ್ನು ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡುತ್ತಿದ್ದಾರೆ. ಉಳಿದಂತೆ ಸರ್ಕಾರದ ಸಾಧನೆ ಶೂನ್ಯ. ಮೂರು ವರ್ಷಗಳಲ್ಲಿ ಇವರು ಮಾಡಿದ ಸಾಧನೆ ಏನೇನು ಇಲ್ಲ. ಭ್ರಷ್ಟಾಚಾರದ ಹಗರಣಗಳು ಹೆಜ್ಜೆ ಹೆಜ್ಜೆಗೂ ಗೋಚರವಾಗುತ್ತಿವೆ ಎಂದು ಆರೋಪಿಸಿದರು.

ಸ್ಟೋರೇಜ್‌ನಲ್ಲಿ ವರದಿಗಳು: ಕುಮಾರಸ್ವಾಮಿ ಅವರನ್ನು ನಾವು ಮುಖ್ಯಮಂತ್ರಿ ಮಾಡಿದ್ದೆವು. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಸಮೀಕ್ಷೆ ನಡೆಸಲು ನೇಮಿಸಲಾಗಿದ್ದ ಕಾಂತರಾಜು ಆಯೋಗದ ವರದಿಯನ್ನು ಸ್ವೀಕರಿಸದೆ ಅದನ್ನು ತಡೆಹಿಡಿದರು ಎಂದು ಸಿದ್ದರಾಮಯ್ಯನವರು ಪದೇ ಪದೆ ದೂರುತ್ತಾರೆ. ಹಾಗಾದರೆ ಕಾಂತರಾಜು ವರದಿ ಈಗ ನಿಮ್ಮ ಬಳಿಯೇ ಇದೆ. ಆಮೇಲೆ ಜಯ ಪ್ರಕಾಶ ಹೆಗಡೆ ಅವರ ವರದಿಯನ್ನೂ ಸ್ವೀಕರಿಸಿದ್ದೀರಿ. ಈ ಎರಡು ವರದಿಗಳನ್ನು ಇನ್ನೂ ಯಾಕೆ ಸ್ಟೋರೇಜ್‌ನಲ್ಲಿ ಇಟ್ಟುಕೊಂಡಿದ್ದೀರಿ. ಅವಕಾಶ ವಂಚಿತ ಸಮುದಾಯಗಳಿಗೆ ಯಾಕೆ ಅನುಕೂಲ ಮಾಡಿಕೊಡುತ್ತಿಲ್ಲ. ಒಳ ಮೀಸಲಾತಿ ವಿಚಾರ ದೊಡ್ಡ ವಿಚಾರವಾಗಿ ಪರಿಣಮಿಸಿದ್ದರೂ ನೀವೇಕೆ ಮೌನವಹಿಸಿದ್ದೀರಿ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು.

ಆತ್ಮವಂಚನೆ ಹೇಳಿಕೆಗಳು: ರಾಜ್ಯವು ಸಮೃದ್ಧವಾಗಿದೆ, ಇಡೀ ದೇಶದಲ್ಲಿ ತಲಾದಾಯ ಮಾನದಂಡದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ ಎಂದು ನೀವು ಹೇಳುತ್ತಿದ್ದೀರಿ. ಜನ ನೆಮ್ಮದಿಯಾಗಿ ಇದ್ದರೆ ಉಚಿತ ಕೊಡುಗೆಗಳ ಅಗತ್ಯವೇನು? ಯಾಕೆ ಇಂತಹ ಆತ್ಮವಂಚಕ ಹೇಳಿಕೆಗಳನ್ನು ಕೊಡುತ್ತೀರಿ? ಎಷ್ಟು ವರ್ಷ ಇಂತಹ ಉಚಿತ ಕೊಡುಗೆಗಳನ್ನು ಕೊಡಲು ಸಾಧ್ಯ?. ಪರಾವಲಂಬಿಗಳನ್ನಾಗಿ ಮಾಡುವುದಕ್ಕಿಂತ ಶಾಶ್ವತವಾಗಿ ಆರ್ಥಿಕ ಶಕ್ತಿ ತುಂಬುವುದು ಅತ್ಯಗತ್ಯ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ, ಮುರುಗೇಶ್ ನಿರಾಣಿ, ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ್, ಶಾಸಕ ಬಿ.ಪಿ.ಹರೀಶ್, ವಿಧಾನ ಪರಿಷತ್ ಸದಸ್ಯ ಬೋಜೇಗೌಡ, ದಾವಣಗೆರೆ ಉಪ ಚುನಾವಣೆ ಮೈತ್ರ ಅಭ್ಯರ್ಥಿ ಶ್ರೀನಿವಾಸ ದಾಸ ಕರಿಯಪ್ಪ ಮತ್ತಿತರರಿದ್ದರು.

ವೋಲ್ವೊ ಬಸ್ ಗುಜರಿಗೆ



ನಗರಕ್ಕೆ ಕೆಎಸ್‌ಆರ್‌ಟಿಸಿ 33 ವೋಲ್ವೊ ಬಸ್‌ಗಳನ್ನು ಖರೀದಿ ಮಾಡಿತ್ತು ಸಾಮಾನ್ಯ ಬಸ್‌ಗಳ ಬೆಲೆ ಸುಮಾರು 40 ರಿಂದ 50 ಲಕ್ಷ ಇದ್ದರೆ, ವೋಲ್ವೊ ಬಸ್ ಬೆಲೆ ಸುಮಾರು 90 ಲಕ್ಷದಿಂದ 1.20 ಕೋಟಿ ಇತ್ತು. ಒಂದು ಲೀಟರ್‌ಗೆ ಕೇವಲ 2 ರಿಂದ 2.5 ಕಿಲೋ ಮೀಟರ್‌ವರೆಗೆ ಮೈಲೇಜ್ ನೀಡುತ್ತಿತ್ತು. ಆದರೂ ಜನರಿಗೆ ಐಷಾರಾಮಿ ಪ್ರಯಾಣದ ಸೇವೆ ನೀಡಬೇಕೆಂದು ದುಬಾರಿಯಾದರೂ ವೋಲ್ವೊ ಬಸ್‌ಗಳನ್ನು ಖರೀದಿ ಮಾಡಿದ್ದ ಕೆಎಸ್‌ಆರ್‌ಟಿಸಿ ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಿತ್ತು.

ಸಾಮಾನ್ಯ ಬಸ್‌ಗಳಿಗಿಂತ ವೋಲ್ವೊ ಬಸ್ ಪ್ರಯಾಣಿಕರಿಗೆ ಐಷರಾಮಿಯಾಗಿ ವಿಶಿಷ್ಟ ಅನುಭವ ನೀಡುತ್ತಿತ್ತು. ಈ ಬಸ್ ಪ್ರಯಾಣ ದುಬಾರಿಯಾಗಿದ್ದರೂ ಬಹಳಷ್ಟು ಜನ ಪ್ರಯಾಣ ಮಾಡುತ್ತಿದ್ದರು. ಸುರಕ್ಷತಾ ಬೆಲ್ಟ್, ಸುಲಭವಾದ ತುರ್ತು ನಿರ್ಗಮನ ವ್ಯವಸ್ಥೆ, ಜಾರಿಕೆ ನಿರೋಧಕ(Anti-Skid) ವ್ಯವಸ್ಥೆ ಸೇರಿದಂತೆ ಇತರೆ ಸೌಲಭ್ಯವಿತ್ತು. ವೋಲ್ವೊ ಬಸ್‌ಗಳು ಕೆಂಪು ಬಣ್ಣದಲ್ಲಿದ್ದ ಕಾರಣ ಇದನ್ನು 'ಕೆಂಪು ಸುಂದರಿ' ಎಂಬ ಹೆಸರಿನಿಂದಲೇ ಕರೆಯಲಾಗುತ್ತಿತ್ತು.

ಮೈಸೂರಿನ ಹೆಬ್ಬಾಳಿನ ಇನ್ಫೋಸಿಸ್, ವಿಪ್ರೋ ಸೇರಿದಂತೆ ಇತರೆ ಐಟಿ ಕಂಪನಿಗಳಿರುವ ಮಾರ್ಗಗಳಲ್ಲಿ ವೋಲ್ವೊ ಬಸ್‌ಗಳು ಹೆಚ್ಚಾಗಿ ಸಂಚರಿಸುತ್ತಿದ್ದವು. ಬಹುತೇಕ ಐಟಿ ಉದ್ಯೋಗಿಗಳು ಟಿಕೆಟ್ ದುಬಾರಿಯಾದರೂ ವೋಲ್ವೊ ಬಸ್‌ಗಳಲ್ಲೆ ಸಂಚರಿಸುತ್ತಿದ್ದರು.

ಹೆಬ್ಬಾಳು ಮಾತ್ರವಲ್ಲದೆ ಮೈಸೂರಿನ ವಿಜಯನಗರ, ಜೆ.ಪಿ.ನಗರ, ಚಾಮುಂಡಿ ಬೆಟ್ಟ, ದಟ್ಟಗಳ್ಳಿ, ಕುವೆಂಪುನಗರ ಸೇರಿದಂತೆ ಇತರೆ ಬಡಾವಣೆಗಳಲ್ಲೂ ಕೂಡ ವೋಲ್ವೊ ಬಸ್‌ಗಳು ಸಂಚರಿಸುತ್ತಿದ್ದವು. ಹವಾ ನಿಯಂತ್ರಿತ ಆರಾಮದಾಯಕ ಪ್ರಯಾಣದ ಅನುಭವ ನೀಡುತ್ತಿದ್ದ ವೋಲ್ವೊ ಬಸ್‌ಗಳಲ್ಲಿ ಜನರು ಹೆಚ್ಚಾಗಿ ಪ್ರಯಾಣ ಮಾಡುತ್ತಿದ್ದರು. ಆದರೆ ಇನ್ನು ಮುಂದೆ ವೋಲ್ವೊ ಬಸ್ ನೆನಪು ಮಾತ್ರ ಮೈಸೂರು ನಗರದಲ್ಲಿ ಸಂಚರಿಸುತ್ತಿದ್ದ ಕೆಎಸ್‌ಆರ್‌ಟಿಸಿಯ ಎಲ್ಲಾ ವೋಲ್ವೊ ಬಸ್‌ಗಳನ್ನು ಗುಜರಿಗೆ ಹಾಕಿರುವ ಹಿನ್ನೆಲೆಯಲ್ಲಿ ವೋಲ್ವೊ ಬಸ್‌ಗಳು ಕಣ್ಮರೆಯಾಗಿವೆ. ವೋಲ್ವೊ ಬಸ್‌ಗಳು ಇಂದು ದೂರವಾಗಿರಬಹುದು. ಆದರೆ ವೋಲ್ವೊ ಬಸ್‌ಗಳಲ್ಲಿನ ಆರಾಮದಾಯಕ ಪಯಾಣದ ಅನುಭವ ಮಾತ್ರ ಜನರ ಮನಸ್ಸಿನಲ್ಲಿ ಹಸಿರಾಗಿದೆ.

ತಲೆಮಾರುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಭೀತಿ

ಉದ್ವಿಗ್ನ ಪರಿಸ್ಥಿತಿಯನ್ನು ಶಮನಗೊಳಿಸಬೇಕಿದೆ. ಎಲ್ಲದಕ್ಕೂ ಶಾಂತಿಯೇ ಅತ್ಯುತ್ತಮ ಔಷಧ ಎಂದು ತಿಳಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್ ಇರಾನ್‌ನ ಬುಶೆಹ್ರ್ ಪರಮಾಣು ವಿದ್ಯುತ್ ಸ್ಥಾವರವನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ ಒಬ್ಬ ವ್ಯಕ್ತಿ ಸಾವನ್ನಪ್ಪಿ, ಸ್ಥಾವರಕ್ಕೆ ಸಂಬಂಧಿಸಿದ ಕಟ್ಟಡಗಳಿಗೆ ಹಾನಿಯಾಗಿರುವ ಬಗ್ಗೆ ವರದಿಯಾಗಿದೆ. ಈ ದಾಳಿಯ ಬೆನ್ನಲ್ಲೇ ಇರಾನ್ ಕೂಡ ಅಮೆರಿಕ ಮತ್ತು ಇಸ್ರೇಲ್‌ಗೆ ಎಚ್ಚರಿಕೆ ನೀಡಿದೆ. ಇದು ಇತ್ತೀಚಿನ ವರ್ಷಗಳಲ್ಲಿ ನಾಲ್ಕನೇ ಘಟನೆಯಾಗಿದ್ದು, ಈ ಬಗ್ಗೆ ಐಎಇಎ ಮಹಾನಿರ್ದೇಶಕ ರಾಫೆಲ್ ಮರಿಯಾನೋ ಗ್ರಾಸ್ಸಿ ಕೂಡ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ ಪಶ್ಚಿಮ ಏಷ್ಯಾದಲ್ಲಿ ಭೀಕರ ದಾಳಿ–ಪ್ರತಿದಾಳಿ ಮುಂದುವರೆದಿವೆ.

ಮಿಲಿಟರಿ ಅಧಿಕಾರಿಗಳ ಹತ್ಯೆ: ಟೆಹರಾನ್ ನಡೆಸಿದ ಬೃಹತ್ ವೈಮಾನಿಕ ದಾಳಿಯಲ್ಲಿ ಗಮನಾರ್ಹ ಸಂಖ್ಯೆಯ ಇರಾನ್ ಮಿಲಿಟರಿ ಅಧಿಕಾರಿಗಳನ್ನು ಹತ್ಯೆ ಮಾಡಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಈ ಕುರಿತು ತಮ್ಮ 'ಟ್ರೂತ್' ವೇದಿಕೆಯಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ಇರಾನ್‌ನ ಅನೇಕ ಮಿಲಿಟರಿ ನಾಯಕರು, ಕಳಪೆ ಮತ್ತು ಅವಿವೇಕದಿಂದ ತಂಡವನ್ನು ಮುನ್ನಡೆಸುತ್ತಿದ್ದರು. ಟೆಹರಾನ್‌ನಲ್ಲಿ ಬೃಹತ್ ಕಾರ್ಯಾಚರಣೆಯೊಂದಿಗೆ ಇತರರ ಜೊತೆಗೆ ಅವರನ್ನು ಅಂತ್ಯಗೊಳಿಲಾಗಿದೆ ಎಂದು ಕಾರ್ಯಾಚರಣೆಯ ನಂತರದ ಪರಿಣಾಮಗಳನ್ನು ತೋರಿಸುವ ವೀಡಿಯೊವನ್ನು ಸಹ ಹಂಚಿಕೊಂಡಿದ್ದಾರೆ. ದೃಶ್ಯಾವಳಿಗಳು ಕತ್ತಲೆಯಾಗಿ ಕಂಡುಬರುತ್ತವೆಯಾದರೂ ವಿಮಾನದ ಶಬ್ದಗಳು ಮತ್ತು ದೊಡ್ಡ ಸ್ಫೋಟಗಳು ಸ್ಪಷ್ಟವಾಗಿ ಕೇಳಿಸುತ್ತವೆ. ಆದರೆ ದಾಳಿಯ ನಿರ್ದಿಷ್ಟ ಗುರಿಗಳು ಅಥವಾ ತಾಂತ್ರಿಕ ವಿವರಗಳ ಬಗ್ಗೆ ಹೆಚ್ಚಿನ ವಿವರಣೆ ನೀಡಿಲ್ಲ.

ಪೈಲಟ್‌ಗಳ ರಕ್ಷಣೆ: ಇರಾನ್ ನೆಲದಲ್ಲಿ ಎಫ್–15ಇ ಯುದ್ಧ ವಿಮಾನ ಪತನಗೊಂಡಾಗ, ನಾಪತ್ತೆಯಾಗಿದ್ದ ಪೈಲಟ್ ಅನ್ನು ಅಮೆರಿಕ ಕೊನೆಗೂ ರಕ್ಷಣೆ ಮಾಡಿದೆ. ಶತ್ರುರಾಷ್ಟ್ರ ಇರಾನ್‌ನಲ್ಲಿ ಬಿದ್ದ ತನ್ನ ಪೈಲಟ್ ಅನ್ನು ರಕ್ಷಣೆ ಮಾಡಲು ಅಮೆರಿಕ ಸೇನೆ ಹರಸಾಹಸ ಪಟ್ಟಿತ್ತು. ತನ್ನ ಹಲವು ಅತ್ಯಾಧುನಿಕ ಯುದ್ಧ ವಿಮಾನಗಳನ್ನು ಇರಾನ್ ಮೇಲೆ ಹಾರಿಸಿ ಪೈಲಟ್‌ಗಾಗಿ ತೀವ್ರ ಶೋಧ ನಡೆಸಿತ್ತು. ಶತ್ರು ಪ್ರದೇಶದೊಳಗೆ ನುಗ್ಗಿ, ಭಾರೀ ಗುಂಡಿನ ಚಕಮಕಿ ನಡುವೆಯೂ ಧೈರ್ಯಶಾಲಿ ಕಾರ್ಯಾಚರಣೆ ನಡೆಸಿತ್ತು. ಇದೀಗ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ರಕ್ಷಣಾ ಕಾರ್ಯಾಚರಣೆಯ ಯಶಸ್ಸನ್ನು ಘೋಷಿಸಿದ್ದು, ಪೈಲಟ್ ಈಗ ಸುರಕ್ಷಿತ ಎಂದು ತಿಳಿಸಿದ್ದಾರೆ.

ಶುಕ್ರವಾರ ಇರಾನಿನ ಭದ್ರತಾ ಪಡೆಗಳು ಯುಎಸ್‌ನ ಎಫ್–15 ಇ ಸ್ಟ್ರೈಕ್ ಈಗಲ್ ವಿಮಾನವನ್ನು ಹೊಡೆದುರುಳಿಸಿದವು. ಇಬ್ಬರೂ ಪೈಲಟ್‌ಗಳು ಸುರಕ್ಷಿತವಾಗಿ ಜಿಗಿದಿದ್ದರು. ಅದೇ ದಿನ ಒಬ್ಬ ಪೈಲಟ್‌ನನ್ನು ಯುಎಸ್ ಪಡೆಗಳು ರಕ್ಷಿಸಿದವು. ಇನ್ನೊಬ್ಬರ ಪತ್ತೆಗಾಗಿ ಶೋಧ ಕಾರ್ಯಾಚರಣೆ ಮುಂದುವರೆಸಿದ್ದ ಅಮೆರಿಕದ ಸೈನಿಕರು, ಇರಾನ್ ಒಳಗೆ ಪ್ರವೇಶಿಸಿ ಪೈಲಟ್‌ನನ್ನು ವಾಪಸ್ ಕರೆತಂದಿದ್ದಾರೆ. ರಕ್ಷಣಾ ಕಾರ್ಯಾಚರಣೆಯ ಸಮಯದಲ್ಲಿ ಇರಾನಿನ ಪಡೆಗಳೊಂದಿಗೆ ಭಾರೀ ಗುಂಡಿನ ಚಕಮಕಿ ನಡೆದಿದೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ಹೇಳಿರುವುದಾಗಿ ಕತಾರ್ ಮಾಧ್ಯಮ ಸಂಸ್ಥೆ ಅಲ್ ಜಜೀರಾ ವರದಿ ಮಾಡಿದೆ.

ಐವರು ಸಾವು: ಪತನಗೊಂಡ ಫೈಟರ್ ಜೆಟ್ ಪೈಲಟ್ ರಕ್ಷಿಸಲು ಅಮೆರಿಕ ನಡೆಸಿದ ಕಾರ್ಯಾಚರಣೆ ಸಮಯದಲ್ಲಿ ಐವರು ಸಾವನ್ನಪ್ಪಿದ್ದು, ಸಾರಿಗೆ ವಿಮಾನವೂ ನಾಶವಾಗಿದೆ ಎಂದು ಇರಾನ್ ಮಾಧ್ಯಮ ವರದಿ ಮಾಡಿದೆ. ಇಸ್ಫಹಾನ್‌ನ ದಕ್ಷಿಣದಲ್ಲಿ ಪತನಗೊಂಡ ವಿಮಾನಗಳಲ್ಲಿ ಸಿ–130 ಮಿಲಿಟರಿ ಸಾರಿಗೆ ವಿಮಾನ ಮತ್ತು ಎರಡು ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್‌ಗಳು ಸೇರಿವೆ. ಇರಾನಿನ ಸೇನೆಯು ಇಸ್ರೇಲಿ ಡ್ರೋನ್ ಅನ್ನು ಸಹ ಹೊಡೆದುರುಳಿಸಲಾಗಿದೆ ಎನ್ನಲಾಗಿದೆ. ಇರಾನ್‌ನಲ್ಲಿ ತಾತ್ಕಾಲಿಕ ಮುಂಚೂಣಿ ಕಾರ್ಯಾಚರಣೆ ನೆಲೆಯ ಸ್ಥಳದಲ್ಲಿ ಪತನಗೊಂಡ ಸಿ–130 ವಿಮಾನದ ಸುಟ್ಟ ಅವಶೇಷಗಳ ಫೋಟೊಗಳು ವೈರಲ್ ಆಗಿವೆ. ಆದರೆ ಕಾರ್ಯಾಚರಣೆ ವೇಳೆ ಯಾವುದೇ ಜೀವಹಾನಿಯಾಗಿಲ್ಲ ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ತಿಳಿಸಿದ್ದಾರಾದರೂ ಅಮೆರಿಕ ಸೈನಿಕರು ಪೈಲಟ್ ರಕ್ಷಣೆ ಬಳಿಕ ಹಿಮ್ಮೆಟ್ಟುವಾಗ ತಮ್ಮದೇ ವಿಮಾನಗಳನ್ನು ಸ್ಫೋಟಿಸಿದ್ದಾರೆ ಎಂದು ವರದಿಯಾಗಿದೆ.

ಮೈಸೂರು ಮಿತ್ರ ಸೋಮವಾರ 6 ಏಪ್ರಿಲ್ 2026

ಶರಣ್ಯ ಆರೋಗ್ಯವಾಗಿದ್ದಾರೆ



ಬೆಂಗಳೂರು: ಕೊಡಗು ಜಿಲ್ಲೆಯ ತಡಿಯಾಂಡಮೋಳ್ ಶಿಖರಕ್ಕೆ ಕೇರಳದಿಂದ ಚಾರಣಕ್ಕಾಗಿ ಬಂದು ಏ.2, ನಾಪತ್ತೆಯಾಗಿದ್ದ ಜಿ.ಎಸ್. ಶರಣ್ಯ(36) ಪತ್ತೆಯಾಗಿದ್ದು, ಅವರು ಆರೋಗ್ಯವಾಗಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿಂದು ತುರ್ತು ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, 9 ತಂಡಗಳು ಹಗಲಿರುಳು ಕಾರ್ಯಾಚರಣೆ ನಡೆಸಿ ಯುವತಿಯನ್ನು ಕರೆತಂದಿದ್ದಾರೆ. ಅವರನ್ನು ಸುರಕ್ಷಿತವಾಗಿ ಕೇರಳದ ಅವರ ಮನೆಗೆ ತಲುಪಿಸುವಂತೆ ಸೂಚಿಸಿದ್ದೇನೆ. ಅವರೊಂದಿಗೆ ಮಾತನಾಡಿದಾಗ ಆರೋಗ್ಯವಾಗಿರುವುದಾಗಿ ಹೇಳಿದರೆಂದು ತಿಳಿಸಿದರು.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಯುವತಿ ನಾಪತ್ತೆ ಆಗಿರುವ ಬಗ್ಗೆ ಆತಂಕ ವ್ಯಕ್ತಪಡಿಸಿ, ಕಾರ್ಯಾಚರಣೆಗೆ ಹೆಚ್ಚಿನ ಸಿಬ್ಬಂದಿ ನಿಯೋಜಿಸುವಂತೆ ತಿಳಿಸಿದ್ದರು. 3 ದಿನವಾದರೂ ಏಕಾಂಗಿಯಾಗಿ ಕಾಡಿನಲ್ಲಿ ಓಡಾಡಿರುವ ಶರಣ್ಯ ಅವರು ನಿಜಕ್ಕೂ ಬಹಳ ಧೈರ್ಯವಂತೆ ಹಾಗೂ ಸಾಹಸಿ. ಕಾಡಿನಲ್ಲಿ ಮೊಬೈಲ್ ಸಂಪರ್ಕ ಸಿಗುವುದಿಲ್ಲ. ಹೀಗಾಗಿ ಅವರು ಇದ್ದ ನಿಶ್ಚಿತ ಸ್ಥಳದ ಮಾಹಿತಿ ತಿಳಿದಿರಲಿಲ್ಲ. ಹೀಗಾಗಿ ಶೋಧಕಾರ್ಯ ವಿಳಂಬವಾಗಿದೆ ಎಂದು ವಿವರಿಸಿದರು.

ಯಾರೇ ಯಾವುದೇ ರಾಜ್ಯದಿಂದ ಚಾರಣಕ್ಕೆ ಬಂದು ನಾಪತ್ತೆಯಾದರೂ ಅವರನ್ನು ಹುಡುಕುವ ಜವಾಬ್ದಾರಿ ನಮ್ಮ ಸರ್ಕಾರದ ಮೇಲಿರುತ್ತದೆ. ನಾವು ನಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ್ದೇವೆ. ಶರಣ್ಯ ಪತ್ತೆ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರಿಗೂ ಅಭಿನಂದನೆಗಳು ಎಂದು ತಿಳಿಸಿದರು.

ಪತಿಯೊಂದಿಗೆ ಇರಾನ್‌ಗೆ ತೆರಳಲಾಗದೆ ಪರಿತಪಿಸುತ್ತಿರುವ ಕೊಡಗಿನ ಮಹಿಳೆ



ಮಡಿಕೇರಿ, ಏ.5–ತವರು ಜಿಲ್ಲೆಗೆ ಪತಿಯೊಂದಿಗೆ ಇರಾನ್‌ನಿಂದ ಮೂಲತಃ ಕೊಡಗಿನ ಮಹಿಳೆ ಯುದ್ಧ ಪರಿಸ್ಥಿತಿಯಿಂದಾಗಿ ಇರಾನ್‌ಗೆ ಮರಳಲಾಗದೆ ಮೂರ್ನಾಡು ಸಮೀಪದ ಕಾಂತೂರಿನಲ್ಲಿ ಉಳಿಯುವಂತಾಗಿದೆ.

ಕೊಡಗಿನ ನವೀನ್ 40 ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಕೆಲಸ ಮಾಡುತಿದ್ದಾಗ ಇರಾನ್ ಪ್ರಜೆ ನಾದರ್ ಪರಿಚಯವಾಗಿ ಅವರನ್ನು ವಿವಾಹವಾಗಿದ್ದರು. ವಿವಾಹದ ನಂತರ ದಂಪತಿ ಇರಾನ್‌ನ ಬೋಜ್‌ನೂರ್ ಪ್ರದೇಶದಲ್ಲಿ ನೆಲೆಸಿದ್ದು, ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಇರಾನ್‌ನಲ್ಲಿ ದಾಳಿಂಬೆ, ದ್ರಾಕ್ಷಿ, ಸೇಬು, ಬ್ಲೂಬೆರಿ, ಬಾದಾಮಿ, ಖರ್ಜೂರ, ಪಿಸ್ತಾ ಸೇರಿದಂತೆ ಹಲವು ವಿದೇಶಿ ಹಣ್ಣುಗಳ ಫಾರ್ಮ್‌ಗಳನ್ನು ಹೊಂದಿದ್ದು, ಜೊತೆಗೆ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದಾರೆ.

ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಕೊಡಗಿಗೆ ಬರುವ ಈ ದಂಪತಿ, ಸಾಮಾನ್ಯವಾಗಿ ಮಾರ್ಚ್‌ನಲ್ಲಿ ಇರಾನ್‌ಗೆ ತೆರಳುತ್ತಿದ್ದರು. ಈ ಬಾರಿ ಡಿಸೆಂಬರ್‌ನಲ್ಲಿ ಕೊಡಗಿಗೆ ಬಂದಿದ್ದ ಇವರು ಮಾ.16ರಂದು ಬೆಂಗಳೂರಿನಿಂದ ಶಾರ್ಜಾ ಮೂಲಕ ಇರಾನ್‌ನ ಬೋಜ್‌ನೂರ್‌ಗೆ ತೆರಳಲು ಟಿಕೆಟ್ ಬುಕ್ ಮಾಡಿದ್ದರು. ಆದರೆ ಅಮೆರಿಕಾ–ಇರಾನ್ ಯುದ್ಧದ ಪರಿಣಾಮವಾಗಿ ವಿಮಾನ ರದ್ದುಪಡಿಸಲಾಯಿತು. ನಂತರ ಏ.15ರಂದು ಮತ್ತೊಮ್ಮೆ ಪ್ರಯಾಣ ಬುಕ್ ಮಾಡಿದ್ದರೂ ಆ ವಿಮಾನವೂ ರದ್ದಾಗಿದೆ.

ಇರಾನ್‌ಗೆ ತೆರಳಲು ಮತ್ತಷ್ಟು ವಿಳಂಬವಾದರೆ ಮೇ ತಿಂಗಳಲ್ಲಿ ಇವರ ಪಾಸ್‌ಪೋರ್ಟ್ ಅವಧಿ ಮುಗಿಯುವ ಆತಂಕವೂ ಎದುರಾಗಿದೆ. ಯುದ್ಧ ಪರಿಸ್ಥಿತಿಯಿಂದ ಇರಾನ್‌ನಲ್ಲಿ ಇಂಟರ್‌ನೆಟ್ ಸೇವೆಗಳು ಬಹುತೇಕ ಸ್ಥಗಿತಗೊಂಡಿರುವುದರಿಂದ ಅಲ್ಲಿ ಇರುವ ತಮ್ಮ ಮಕ್ಕಳನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ ಎಂದು ನವೀನ್ ಹಾಗೂ ನಾದರ್ ದಂಪತಿ ಆತಂಕ ವ್ಯಕ್ತಪಡಿಸಿದ್ದಾರೆ. ಈ ಅನಿರೀಕ್ಷಿತ ಪರಿಸ್ಥಿತಿಯಿಂದ ತಮ್ಮ ವ್ಯವಹಾರ, ಕುಟುಂಬ ಹಾಗೂ ಪ್ರಯಾಣ ಯೋಜನೆಗಳು ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿವೆ ಎಂದು ದಂಪತಿ ತಮ್ಮ ಅಳಲನ್ನು ವ್ಯಕ್ತಪಡಿಸಿಕೊಂಡರು.

ನಾಪೋಕ್ಲು ಪೊನ್ನು ಮುತ್ತಪ್ಪ ದೇವರ ವಾರ್ಷಿಕ ಉತ್ಸವ ಸಂಪನ್ನ



ಶ್ರೀ ಪೊನ್ನು ಮುತ್ತಪ್ಪ ದೇವಾಲಯದಲ್ಲಿ ಮುತ್ತಪ್ಪ ಹಾಗೂ ತಿರುವಪ್ಪ ತೆರೆ ಜರುಗಿದವು.

ನಾಪೋಕ್ಲು, ಏ.5– ಕೊಡಗಿನ ಪ್ರಪ್ರಥಮ ಪೊನ್ನು ಮುತ್ತಪ್ಪ ದೇವಸ್ಥಾನ ಹಾಗೂ 2ನೇ ಪರಶಿನಿ ಎಂದು ಪ್ರಖ್ಯಾತವಾಗಿರುವ ನಾಪೋಕ್ಲುವಿನ ಶ್ರೀ ಪೊನ್ನು ಮುತ್ತಪ್ಪ ದೇವರ ವಾರ್ಷಿಕ ಉತ್ಸವ ಭಾನುವಾರ ಸಾಂಪ್ರದಾಯಿಕವಾಗಿ ಸಂಪನ್ನಗೊಂಡಿತು.

ಶನಿವಾರ ಮಧ್ಯಾಹ್ನ ಪೈಂಗುತ್ತಿ ಹಾಗೂ ಸಂಜೆ ಶ್ರೀ ಮುತ್ತಪ್ಪ ದೇವರ ಕಳಸ ನಡೆಯಿತು. ಪವಿತ್ರ ಕಾವೇರಿ ನದಿಯಲ್ಲಿ ಸ್ನಾನದ ನಂತರ ಪ್ರಖ್ಯಾತ ಕೇರಳ ಚಂಡೆಗಳೊಂದಿಗೆ ನಾಪೋಕ್ಲು ಪೇಟೆಯ ಮುಖ್ಯ ಬೀದಿಯಲ್ಲಿ ಸನ್ನಿಧಾನಕ್ಕೆ ಮೆರವಣಿಗೆ ಮೂಲಕ ಆಗಮನವಾಯಿತು. ಈ ಸಂದರ್ಭ ಸಿಡಿಮದ್ದು ಪ್ರದರ್ಶನ, ಕೇರಳದ ನೃತ್ಯ, ಮತ್ತಿತರ ಮನರಂಜನಾ ಕಾರ್ಯಕ್ರಮಗಳು ನಡೆದು ಜನಮನ ಆಕರ್ಷಿಸಿದವು, ರಾತ್ರಿ ವೆಳ್ಳಾಟಂ ಬಳಿಕ ಕುಟ್ಟಿಚಾತ ಮತ್ತು ಗುಳಿಗ ದೇವರ ವೆಳ್ಳಾಟಂ ನಡೆದವು.

ಉತ್ಸವದ ಅಂಗವಾಗಿ ಶುಕ್ರವಾರ ಬೆಳಿಗ್ಗೆ ಗಣಪತಿ ಹೋಮ ಮತ್ತು ಶುದ್ಧ ಕಳಸ ಪೂಜೆಯನ್ನು ಕೇರಳ ನೀಲೇಶ್ವರದ ಮುರಳಿ ಕೃಷ್ಣ ತಂತ್ರಿ ಅವರಿಂದ ನಡೆಸಲಾಯಿತು. ರಾತ್ರಿ ಗುರು ಪೂಜೆ ಹಾಗೂ ಶ್ರೀದೇವಿ ಪೂಜೆ ನಡೆಯಿತು. ಭಾನುವಾರ ಪ್ರಾತಃಕಾಲ ಗುಳಿಗ ಕೋಲ, ಬಳಿಕ ಕುಟ್ಟಿಚಾತ ಕೋಲ ಹಾಗೂ ತಿರುವಪ್ಪನ್ ಮತ್ತು ಮುತ್ತಪ್ಪ ತೆರೆ ಜರುಗಿದವು. ಉತ್ಸವದ ಅಂಗವಾಗಿ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಭಕ್ತಾದಿಗಳು ತಮ್ಮ ಇಷ್ಟಾರ್ಥ ಸಿದ್ದಿಗೆ ವಿವಿಧ ಹರಕೆ ಕಾಣಿಕೆ ಒಪ್ಪಿಸಿ ಪ್ರಸಾದ ಪಡೆದುಕೊಂಡು ಧನ್ಯತಾಭಾವ ಹೊಂದಿದರು.

ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಎ.ಕೆ ಚಂದ್ರನ್, ಉಪಾಧ್ಯಕ್ಷ ಎಂ.ಕೆ ತಂಗ, ಕಾರ್ಯದರ್ಶಿ ಪಿ.ಕೆ. ಅನಿಲ್ ಉಪ ಕಾರ್ಯದರ್ಶಿ ಸುಕುಮಾರ್ ಟಿ.ಕೆ, ಖಜಾಂಚಿ ಮಹೇಶ್ ಮೆನೋನ್, ದೇವಾಲಯದ ಪೂಜಾರಿ ಹರಿದಾಸ್ ಮತ್ತು ಆಡಳಿತ ಮಂಡಳಿ ಸದಸ್ಯರು ಊರ ಹಾಗೂ ಪರ ಊರಿನ ಭಕ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಕ್ರೀಡೆ ಅಭಿವೃದ್ಧಿಗಾಗಿ ಶಾಶ್ವತ ಕ್ರೀಡಾ ತರಬೇತಿ ಕೇಂದ್ರ, ಸ್ಟೇಡಿಯಂ ಅತ್ಯಗತ್ಯ



ನಾಪೋಕ್ಲು: ಕ್ರೀಡೆಗಳ ಅಭಿವೃದ್ಧಿಗಾಗಿ ಶಾಶ್ವತ ಕ್ರೀಡಾ ತರಬೇತಿ ಕೇಂದ್ರ ಹಾಗೂ ಸ್ಟೇಡಿಯಂ ಅತ್ಯಗತ್ಯವಾಗಿದೆ. ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದರು.

ಇಲ್ಲಿನ ಚೆರಿಯ ಪರಂಬುವಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ಭಾನುವಾರ ಆರಂಭಗೊಂಡ ಕೊಡವ ಕೌಟುಂಬಿಕ ಚೇನಂಡ ಕಪ್ ಹಾಕಿ 26ನೇ ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತ ನಾಡಿದ ಅವರು, ಕೊಡಗು ಜಿಲ್ಲೆ 18 ಒಲಂಪಿಯನ್‌ಗಳನ್ನು ನೀಡಿದೆ. ಕ್ರೀಡಾ ಕ್ಷೇತ್ರದ ಅಭಿವೃದ್ಧಿಗಾಗಿ 40 ಕೋಟಿ ರೂ. ಯೋಜನೆಗಳನ್ನು ರೂಪಿಸಿದ್ದು, ಅಭಿವೃದ್ಧಿಗೆ ಎಲ್ಲರ ಸಹಕಾರ ಮುಖ್ಯ ಸಮುದಾಯದ ಸಹ ಭಾಗಿತ್ವದಿಂದ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ ಮಾತನಾಡಿ, ಕ್ರೀಡಾ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿರುವುದರಿಂದ ಕ್ರೀಡಾಪಟುಗಳಾದ ಎಸ್‌ಪಿ.ಸುನಿಲ್ ಹಾಗೂ ನಿಖಿಲ್ ಅವರಿಗೆ ಉತ್ತಮ ನೌಕರಿ ಲಭಿಸಿದೆ. ಕ್ರೀಡಾಪಟುಗಳು ಉದ್ಯೋಗಾವಕಾಶಗಳನ್ನು ಗಿಟ್ಟಿಸಿಕೊಳ್ಳುವಲ್ಲಿ ಕ್ರೀಡಾಕೂಟಗಳು ಸಹಕಾರಿ ಎಂದರು. ಮಡಿಕೇರಿಯ ಮ್ಯಾನ್ ಕಾಂಪೌಂಡ್‌ನಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣಕ್ಕೆ 2.5 ಕೋಟಿ ಅನುದಾನ ದೊರೆತಿದೆ. ಇಲ್ಲಿನ ದೇವರಾಜ್ ಅರಸ್ ಭವನದ ಬಳಿ ಎರಡು ಕೋಟಿ ರೂ. ವೆಚ್ಚದಲ್ಲಿ ನೂತನ ಕ್ರೀಡಾಶೆಲ್ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಎಂದರು.

ವಿರಾಜಪೇಟೆ ತಾಲೂಕಿಗೆ ಇನ್ನೊಂದು ಕ್ರೀಡಾ ಶಾಲೆಯನ್ನು ಮಂಜೂರು ಮಾಡಲಾಗಿದೆ. ಸರ್ಕಾರ ಕ್ರೀಡೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದು ಕ್ರೀಡಾಪಟುಗಳಿಗೆ ಉತ್ತೇಜನ ನೀಡುತ್ತಿದೆ 2028ರ ಒಲಂಪಿಕ್ಸ್‌ಗೆ ಕ್ರೀಡಾಪಟುಗಳನ್ನು ತಯಾರು ಮಾಡಲು 60 ಮಂದಿಯನ್ನು ಗುರುತಿಸಿದ್ದು ಪ್ರತಿ ಕ್ರೀಡಾಪಟುವಿನ ಖಾತೆಗೆ 80 ಸಾವಿರ ರೂ. ಗೌರವ ಧನ ನೀಡಲಾಗುತ್ತಿದೆ ಎಂದರು.

ಶಾಸಕ ಮಂಥರ್ ಗೌಡ ಮಾತನಾಡಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಜವಾಬ್ದಾರಿ ಹೊತ್ತು ಹಾಕಿ ಕ್ರೀಡೆಯನ್ನು ಮತ್ತಷ್ಟು ಯಶಸ್ಸಿನತ್ತ ಕೊಂಡೊಯ್ಯಲಿ ಎಂದರು. ಹಾಕಿ ಕ್ರೀಡೆಯು ಮಾನಸಿಕವಾಗಿ ದೈಹಿಕವಾಗಿ ಸದೃಢರಾಗಲು ಸಹಕಾರಿ ಉತ್ತಮ ತಂಡ ಚಾರಿತ್ರಿಕ ಹಾಕಿ ಕೌಟುಂಬಿಕ ಪಂದ್ಯಾವಳಿಯ ವಿಜೇತ ತಂಡವಾಗಲಿ ಎಂದರು.

ಕೊಡವ ಕೌಟುಂಬಿಕ ಚೇನಂಡ ಕಪ್ ಹಾಕಿ 26ನೇ ಆವೃತ್ತಿಯ ಪಂದ್ಯಾವಳಿಗೆ ಕೊಡಗು ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕುಟ್ಟಪ್ಪ ಬೋಪಣ್ಣ ಚಾಲನೆ ನೀಡಿದರು. ವೇದಿಕೆಯಲ್ಲಿ ಕರ್ನಲ್ ವಿನಯ್, ಒಲಂಪಿಯನ್ ಚೆಪ್ಪುಡಿರ ಪುನಚ್ಚ , ಬ್ರಿಗೇಡ್ ಚೇನಂಡ ಚೀಯಣ್ಣ, ಬಲ್ಲಚಂಡ ಬೋಪಣ್ಣ ಚೇನಂಡ ಹಾಕಿ ಸಮಿತಿ ಅಧ್ಯಕ್ಷ ಪಿ ಕರಂಬಯ್ಯ, ಚೇನಂಡ ಕುಟುಂಬದ ಪಟ್ಟೆದಾರ ಬಿ ಪೊನ್ನಪ್ಪ ಇನ್ನಿತರ ಉಪಸ್ಥಿತರಿದ್ದರು. ವೀಕ್ಷಕ ವಿವರಣೆಯನ್ನು ಮಾಲೇಟಿರ ಶ್ರೀನಿವಾಸ್, ಅಜ್ಜೆಟ್ಟಿರ ವಿಕ್ರಂ ಮುತ್ತಪ್ಪ, ಚೋಕಿರ ಅನಿತಾ ದೇವಯ್ಯ ನಿರ್ವಹಿಸಿದರು .

ಟೂರ್ನಿಯಲ್ಲಿ ಭಾಗವಹಿಸಲು 383 ತಂಡಗಳು ನೋಂದಣಿಯಾಗಿದ್ದು ಮೂರು ಮೈದಾನಗಳಲ್ಲಿ ಆರಂಭಿಕ ಪಂದ್ಯಗಳು ಜರುಗಿದವು. ಪ್ರದರ್ಶನ ಪಂದ್ಯ ಯುಎಇ ಮತ್ತು ತಾಮನೆ ತಂಡಗಳ ನಡುವೆ ನಡೆಯಿತು ಯುಎಇ 4 ಗೋಲುಗಳನ್ನು ಹಾಗೂ ತಾಮನೆ ಒಂದು ಗೋಲು ಗಳಿಸಿ ಯುಎಇ ವಿಜೇತವಾಯಿತು.

ಚೆಂದಂಡ ಕಪ್ –2026 ಅಂಗವಾಗಿ ಪಟ್ಟಣದಲ್ಲಿ ಆಕರ್ಷಕ ಮೆರವಣಿಗೆ ನಡೆದವು. ನಾಪೋಕ್ಲು ಪಟ್ಟಣದ ಪೊನ್ನಾಡು ಸೂಪರ್ ಮಾರ್ಕೆಟ್ ಬಳಿಯಿಂದ ಕ್ರೀಡಾಂಗಣದವರೆಗೆ ಆಕರ್ಷಕ ಮೆರವಣಿಗೆ ನಡೆಯಿತು. ವಿವಿಧ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಅಧಿಕ ಸಂಖ್ಯೆಯ ಕ್ರೀಡಾಭಿಮಾನಿಗಳು ಕೊಡವ ಧಿರಿಸು ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು ವಾದ್ಯ ಮೇಳದೊಂದಿಗೆ ಮೆರವಣಿಗೆ ಆಕರ್ಷಕವಾಗಿತ್ತು. ಕ್ರೀಡಾಂಗಣದ ಮುಖದ್ವಾರದ ಸಮೀಪ ಹಾಕಿ ಕ್ರೀಡಾಕೂಟದ ಜನಕ ಪಾಂಡಂಡ ಕುಟ್ಟಣಿ ಅವರ ಪುತ್ಥಳಿಯನ್ನು ಅನಾವರಣಗೊಳಿಸಿ ಪುಷ್ಪ ನಮನ ಸಲ್ಲಿಸಲಾಯಿತು

ಮೊಗರಗಲ್ಲಿಗೆ 50 ಲಕ್ಷ ಅನುದಾನದಲ್ಲಿ ಮೂಲ ಸೌಕರ್ಯ

ವಿರಾಜಪೇಟೆ, ಏ.5– ಪುರಸಭೆ ವ್ಯಾಪ್ತಿ ಕೊಳಕೇರಿ ಪ್ರದೇಶವಾದ ಮೊಗರಗಲ್ಲಿಗೆ ಅಂದಾಜು ಮೊತ್ತ 50 ಲಕ್ಷ ಅನುದಾನದಲ್ಲಿ ನೂತನ ಕಾಂಕ್ರೀಟ್ ರಸ್ತೆ, ಚರಂಡಿ ಹಾಗೂ ಮೂಲ ಸೌಕರ್ಯಗಳ ಕಾಮಗಾರಿಗಳಿಗೆ ಶಾಸಕ ಎ.ಎಸ್.ಪೊನ್ನಣ್ಣ ಭೂಮಿ ಪೂಜೆ ನೆರವೇರಿಸಿದರು.

ಸರಕಾರದಿಂದ ನಡೆಯುವ ಕಾಮಗಾರಿಗಳನ್ನು ಗುತ್ತಿಗೆದಾರರು ಸಮಯಕ್ಕೆ ಸರಿಯಾಗಿ ಸಾರ್ವಜನಿಕರರಿಗೆ ಅನುಕೂಲವಾಗುವಂತೆ ಕಾಮಗಾರಿ ಮುಗಿಸಿಕೊಡಬೇಕು, ಹಾಗೂ ಕಾಮಗಾರಿ ನಡೆಸುವಾಗ ಗುಣಮಟ್ಟ ಕಾಪಾಡಿಕೊಳ್ಳುವಂತೆ ಸ್ಥಳಿಯ ನಿವಾಸಿಗಳು ಎಚ್ಚರ ವಹಿಸಬೇಕು ಎಂದು ಹೇಳಿದರು.

ಪಟ್ಟಣದ ನೆಹರು ನಗರದಲ್ಲಿ ರೂ,25 ಲಕ್ಷ ಶಾಸಕರ ವಿಶೇಷ ಅನುದಾನದಲ್ಲಿ ಎರಡು ಕಡೆ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟಿಸಿದರು ಬಳಿಕ ಕೆ, ಬೋಯಿಕೇರಿಯಲ್ಲಿ 10 ಲಕ್ಷ ರೂ. ಶಾಸಕರ ವಿಶೇಷ ಅನುದಾನದಲ್ಲಿ ನಿರ್ಮಿಸಿದ ಬಸ್ ತಂಗುದಾಣವನ್ನು ರಿಬ್ಬನ್ ಕತ್ತರಿಸಿ ಉದ್ಘಾಟಿಸಿ ಮಾತನಾಡಿ ಇಲ್ಲಿನ ನಿವಾಸಿಗಳ ಬೇಡಿಕೆಯ ಮೇರೆ ಸಾರ್ವಜನಿಕರ ಉಪಯೋಗಕ್ಕಾಗಿ ಸುಸ್ಸಜಿತ ಬಸ್ ತಂಗುದಾಣವನ್ನು ನಿರ್ಮಿಸಲಾಗಿದ್ದು ಸಾರ್ವಜನಿಕರು ಸ್ವಚ್ಚತೆ ಕಾಪಾಡಿಕೊಂಡು ತಂಗುದಾಣವನ್ನು ಸದುಪಯೋಗ ಪಡಿಸಿಕೊಳ್ಳುವಂತಾಗಬೇಕು ಎಂದರು.

ಪುರಸಭೆ ಸ್ಥಳೀಯ ವಾರ್ಡ್ ಸದಸ್ಯೆ ಮಾಜಿ ಅಧ್ಯಕ್ಷೆ ಎಂ.ದೇಚಮ್ಮ ಕಾಳಪ್ಪ ಮಾತನಾಡಿ ಕೆಲವೇ ವರ್ಷಗಳಿಂದ ವಿರಾಜಪೇಟೆಗೆ ಅನುದಾನಗಳಿಲ್ಲದೆ ರಸ್ತೆಗಳು ದುಸ್ಥಿತಿಯಲ್ಲಿದ್ದು ಈಗ ಶಾಸಕ ಎ.ಎಸ್. ಪೊನ್ನಣ್ಣ ಅವರ ಶ್ರಮದಿಂದ ಪಟ್ಟಣ ಹಾಗೂ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷ ಎಸ್.ಹೆಚ್.ಮತೀನ್, ಬ್ಲಾಕ್ ಮಹಿಳಾ ಘಟಕದ ಅಧ್ಯಕ್ಷರಾದ ನಯನಾ ಜಗತ್, ಬ್ಲಾಕ್ ಅಲ್ಪ ಸಂಖ್ಯಾತ ಘಟಕದ ಕೊಳುಮಂಡ ರಫೀಕ್, ವಕೀಲರಾದ ನರೇಂದ್ರ ಕಾಮತ್, ಮೊಗರಗಲ್ಲಿ ಮಸೀಧಿ ಅಧ್ಯಕ್ಷ ನಿಸಾರ್, ಏಜಾಜ್ ಅಹ್ಮದ್, ಮುನಾವರ್, ಜಾಫರ್, ಗ್ಯಾರಂಟಿ ಅನುಷ್ಠಾನ ಸಮಿತಿಯ ಕಾವೇರಮ್ಮ, ಪುರಸಭೆ ಮುಖ್ಯಾಧಿಕಾರಿ ಪಿ.ಕೆ. ನಾಚಪ್ಪ, ಮಾಜಿ ಸದಸ್ಯರಾದ ಮಹ್ಮದ್ ರಾಫಿ, ಸುನಿತಾ ಜೂನಾ, ದಿನೇಶ್, ಯುವ ಕಾಂಗ್ರೆಸ್‌ನ ಶಭೀರ್, ಪ್ರಮುಖರಾದ ಚಿಲ್ಲವಂಡ ಕಾವೇರಪ್ಪ, ಜಗತ್, ಕೊಳಕೇರಿ ಅಭಿವೃದ್ಧಿ ಮಂಡಳಿಯ ಅಭಿಯಂತರರು ಭಾಗವಹಿಸಿದ್ದರು.



ಮೊಗರಗಲ್ಲಿಗೆ ಕಾಂಕ್ರೀಟ್ ರಸ್ತೆ, ಚರಂಡಿ ಹಾಗೂ ಮೂಲ ಸೌಕರ್ಯಗಳ ಕಾಮಗಾರಿಗಳಿಗೆ ಶಾಸಕ ಎ.ಎಸ್.ಪೊನ್ನಣ್ಣ ಭೂಮಿ ಪೂಜೆ ನೆರವೇರಿಸಿದರು.

ಅಪರಿಚಿತ ವಾಹನ ಡಿಕ್ಕಿ; ಬೈಕ್ ಸವಾರ ಸಾವು



ಕೊಳ್ಳೇಗಾಲ. ಏ.5– ತಾಲ್ಲೂಕಿನ ಸತ್ತೇಗಾಲ ಹೊಸ ಸೇತುವೆ ಬಳಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ತೀವ್ರ ಗಾಯಗೊಂಡಿದ್ದ ಬೈಕ್ ಸವಾರ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿರುವ ಘಟನೆ ನಡೆದಿದೆ.

ಸತ್ತೇಗಾಲ ಗ್ರಾಮದ ಅಗ್ರಹಾರ ಬೀದಿಯ ನಿವಾಸಿ ದೀಪಕ್ ಗೌಡ (33) ಮೃತ ಬೈಕ್ ಸವಾರ.

ಮಾ.24 ರಂದು ಮಳ್ಳವಳ್ಳಿಯಿಂದ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ಬರುವಾಗ ಸತ್ತೇಗಾಲ ಹ್ಯಾಂಡ್ ಪೋಸ್ಟ್ ಸೇತುವೆಯ ಬಳಿ ಯಾವುದೋ ವಾಹನ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ತೀವ್ರವಾಗಿ ಗಾಯಗೊಂಡಿದ್ದ, ಗಾಯಾಳುವನ್ನು ತಕ್ಷಣ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆಆರ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು ಭಾನುವಾರ ಬೆಳಗ್ಗೆ ಚಿಕಿತ್ಸೆ ಫಲಕಾರಿಯಾಗದೆ ಸಾವಿಗೀಡಾದ ಹಿನ್ನೆಲೆ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ.

ನನ್ನ ಅವಧಿಯಲ್ಲಿಯೇ ಕೊಳ್ಳೇಗಾಲದಲ್ಲಿ ಬಾಬು ಜಗಜೀವನರಾಂ ಭವನ ನಿರ್ಮಾಣ



ಡಾ.ಬಾಬು ಜಗಜೀವನರಾಮ್ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ಉದ್ಘಾಟಿಸಿದರು.

ಕೊಳ್ಳೇಗಾಲ, ಏ.5– ನನ್ನ ಅವಧಿ ಯಲ್ಲಿಯೇ ಕೊಳ್ಳೇಗಾಲ ಪಟ್ಟಣದಲ್ಲಿ ಬಾಬು ಜಗಜೀವನರಾಂ ಸಮುದಾಯ ಭವನ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವೆ, ಇದಕ್ಕಿರುವ ತೊಡಕು ನಿವಾರಿಸುವೆ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಭರವಸೆ ನೀಡಿದರು.

ತಾಲೂಕು ಪಂಚಾಯ್ತಿ ಸಭಾಂಗಣದಲ್ಲಿ ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ವತಿಯಿಂದ ಆಯೋಜಿಸಲಾಗಿದ್ದ ಡಾ.ಬಾಬು ಜಗಜೀವನರಾಮ್ ಅವರ 119 ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿ, ಬಾಬು ಜಗಜೀವನರಾಂ ಅವರು ದೇಶಕ್ಕೆ ನೀಡಿದ ಕೊಡುಗೆ ಅಪಾರ, ಅವರ ಜಯಂತಿ ಆಚರಿಸಿದರೆ ಸಾಲದು ಅವರ ತತ್ವಾದರ್ಶಗಳನ್ನು ಯುವಪೀಳಿಗೆ ಕಿಂಚಿತ್ತಾದರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಗಣ್ಯರ ಕೊಡುಗೆಗಳನ್ನು ಮೆಲುಕು ಹಾಕುವಂತಾಗಬೇಕು, ಜಗಜೀವನರಾಂ ಭವನ ನಿರ್ಮಾಣ ಆಗಬೇಕು ಎಂಬ ಬೇಡಿಕೆ ಹಲವು ವರುಷಗಳಿಂದಲೂ ಇದ್ದು ಇದಕ್ಕಿರುವ ತೊಡಕುಗಳನ್ನು ನಿವಾರಿಸಿ ನನ್ನ ಅವಧಿಯಲ್ಲಿಯೇ ಭವನ ನಿರ್ಮಾಣ ಮಾಡುವೆ ಎಂದು ಭರವಸೆ ನೀಡಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೊಂಗನೂರು ಚಂದ್ರು ಮಾತನಾಡಿ, ಜಗಜೀವನ್ ರಾಮ್ ಹಾಗೂ ಅಂಬೇಡ್ಕರ್ ಅವರು ದೇಶದ ಎರಡು ಕಣ್ಣುಗಳಿದ್ದಂತೆ. ಬಾಬು ಜಗಜೀವನರಾಂ ಅವರು ಮಹಾತ್ಮ ಗಾಂಧಿಯವರ ಒಡನಾಡಿಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದವರು. ಅವರು ಉಪಪ್ರಧಾನಿಯಾಗಿ ಹಸಿರು ಕ್ರಾಂತಿ ತರುವ ಮೂಲಕ ಸ್ವಾಭಿಮಾನ ಬದುಕು ನಡೆಸಿದವರು. ಈಹಿನ್ನೆಲೆ ಅವರು ಹಸಿರು ಕ್ರಾಂತಿ ಹರಿಕಾರ ಎಂತಲೆ ಖ್ಯಾತರಾದರು ಎಂದರು.

ಈ ವೇಳೆ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದಿಸಲಾಯಿತು. ಈಸಂದರ್ಭದಲ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ರಾಜೇಂದ್ರ, ತಹಶಿಲ್ದಾರ್ ಬಸವರಾಜು, ತಾ.ಪಂ ಇಒ ಗುರುಶಾಂತಪ್ಪ ಬೆಳ್ಳುಂಡಗಿ, ಬಿಇಒ ಮಂಜುಳಾ, ನಗರಸಭೆ ಪೌರಾಯುಕ್ತೆ ರುದ್ರಮ್ಮ ಶರಣಯ್ಯ, ಸಮಾಜ ಕಲ್ಯಾಣಾಧಿಕಾರಿ ಕೇಶವಮೂರ್ತಿ, ತಾಲ್ಲೂಕು ಜಗಜೀವನ್ ರಾಮ್ ಸಂಘಗಳ ಒಕ್ಕೂಟದ ಅಧ್ಯಕ್ಷ ಬಿ.ಬಾಲರಾಜು, ನಾರಾಯಣ್, ಹೊಂಗನೂರು ಚೇತನ್ ಇನ್ನಿತರಿದ್ದರು.

ಡಾ. ಬಾಬೂಜಿ ಅವರ ಚಿಂತನೆಗಳು ದೇಶದ ಜನರ ಪರವಾಗಿದ್ದವು

ಜಿಲ್ಲಾಡಳಿತದಿಂದ ಡಾ.ಬಾಬೂಜಿ ಅವರ ಜಯಂತಿ ಆಚರಣೆ

ಚಾಮರಾಜನಗರ, ಏ.5– ಡಾ. ಬಾಬೂ ಜಗಜೀವನ್ ರಾಮ್ ಅವರ ಚಿಂತನೆಗಳು ದೇಶದ ಜನರ ಪರವಾಗಿದ್ದು, ಜನರಿಗೆ ಸಮಾನತೆಯನ್ನು ದೊರಕಿಸಿಕೊಡುವುದೇ ಅವರ ಚಿಂತನೆಗಳ ಮೂಲ ಉದ್ದೇಶವಾಗಿತ್ತು ಎಂದು ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಹಸಿರು ಕ್ರಾಂತಿಯ ಹರಿಕಾರ, ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನರಾಮ್‌ರವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಹಳ ಸುದೀರ್ಘ ಅವಧಿಯಲ್ಲಿ ರಾಷ್ಟ್ರದ ಸೇವೆಯಲ್ಲಿದ್ದ ಡಾ. ಬಾಬೂಜೀ ಅವರು ಜೀವನದುದ್ದಕ್ಕೂ ಸಾಮಾಜಿಕ ಅಭಿವೃದ್ಧಿ ಹಾಗೂ ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು. 1908ರಲ್ಲಿ ಬಿಹಾರ ರಾಜ್ಯದ ಸಾಮಾನ್ಯ ಬಡಕುಟುಂಬದಲ್ಲಿ ಜನಿಸಿದ ಜಗಜೀವನ್‌ರಾಮ್ ಅವರು ಚಿಕ್ಕವಯಸ್ಸಿನಲ್ಲಿಯೇ ದೇಶದ ಸ್ಥಿತಿಗತಿ, ಸಮಾಜದ ಏರು–ಪೇರುಗಳನ್ನು ಅವಲೋಕಿಸುತ್ತಿದ್ದರು. ಸ್ವಾತಂತ್ರ್ಯ ನಂತರ ದೇಶದ ಜನರನ್ನು ಒಗ್ಗೂಡಿಸಿ ಸಾಮಾಜಿಕ ಸುಧಾರಣೆಗೆ ನಾಂದಿ ಹಾಡಿದರು. ಅವರ ಆದರ್ಶಗಳು, ಮಾರ್ಗದರ್ಶನಗಳನ್ನು ನಾವು ಅನುಸರಿಸಬೇಕು. ಅವರನ್ನು ಸ್ಮರಿಸಬೇಕು ಎಂದರು.

ಬ್ರಿಟಿಷರ ಆಡಳಿತದಲ್ಲಿ ದೇಶದ ಜನಜೀವನ, ಕಾರ್ಮಿಕರ ಸ್ಥಿತಿ ಶೋಚನೀಯವಾಗಿತ್ತು. ಇದನ್ನು ಮನಗಂಡಿದ್ದ ಬಾಬೂಜೀ ಕಾರ್ಮಿಕರ ಕಲ್ಯಾಣಕ್ಕಾಗಿ ಸಮಾನವೇತನ ಕಾಯ್ದೆ ಜಾರಿಗೊಳಿಸಿದರು. 45ರಿಂದ 50 ವರ್ಷಗಳ ಕಾಲ ರಾಜಕಾರಣಿಯಾಗಿದ್ದ ಬಾಬೂಜೀ ಕೃಷಿ, ರಕ್ಷಣೆ, ರೈಲ್ವೆ, ಕಾರ್ಮಿಕ, ಆಹಾರ ಸೇರಿದಂತೆ ವಿವಿಧ ಖಾತೆಗಳ ಮಂತ್ರಿಗಳಾಗಿ ದೇಶವನ್ನು ಮುನ್ನೆಡೆಸಿದರು. ದೇಶದಲ್ಲಿ ಬರಗಾಲ ಎದುರಾದ ಸಂದರ್ಭದಲ್ಲಿ ಕೃಷಿ ಸಚಿವರಾಗಿದ್ದ ಬಾಬೂಜಿ ಹಸಿರುಕ್ರಾಂತಿಯ ಮೂಲಕ ಮಾದರಿ ಬೆಳೆ ಬೆಳೆದು ದೇಶ ಆಹಾರ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸಲು ನೆರವಾದರು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ವೆಂಕಟೇಶ್ ತಿಳಿಸಿದರು.

ಮುಖ್ಯ ಭಾಷಣ ಮಾಡಿದ ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯ ಡಾ. ಬಾಬು ಜಗಜೀವನರಾಮ್ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕರಾದ ಹೆಚ್.ಆರ್. ಭೀಮಾಶಂಕರ್ ವಿದ್ಯಾರ್ಥಿಜೀವನದಲ್ಲಿ ಅಪಾರ ಪ್ರತಿಭಾವಂತರಾಗಿದ್ದ ಬಾಬೂಜೀ ಯವರು ಬಡವರು, ದಲಿತರು, ಶೋಷಿತರು, ತುಳಿತಕ್ಕೊಳಗಾದವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಭಾರತೀಯ ಇತಿಹಾಸದ ಪ್ರಮುಖವಾದ ದಿನವಾದ ಇಂದು ಬಾಬೂಜೀಯವರ ಜನ್ಮದಿನವನ್ನು ದೇಶಾದ್ಯಂತ ಆಚರಿಸಲಾಗುತ್ತಿದೆ. ಬಾಬೂಜಿ ಕೇವಲ ರಾಜಕಾರಣಿಯಲ್ಲ, ಅವರು ನವಭಾರತದ ನಿರ್ಮಾತೃ ಆಗಿದ್ದಾರೆ ಎಂದರು.

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಮುನಿರಾಜು, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ವೆಂಕಟೇಶ್, ನಗರಸಭೆ ಪೌರಾಯುಕ್ತರಾದ ಪರಶುರಾಮ್ ಛಲವಾದಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಹಾಗೂ ಇತರೆ ಗಣ್ಯರು ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಿಂದ ಭುವನೇಶ್ವರಿ ವೃತ್ತದ ಪೇಟೆ ಪ್ರೈಮರಿ ಶಾಲೆವರೆಗೆ ಜಾನಪದ ಕಲಾತಂಡಗಳೊಂದಿಗೆ ಬೆಳ್ಳಿರಥದಲ್ಲಿ ಅಲಂಕೃತಗೊಂಡ ಡಾ. ಬಾಬು ಜಗಜೀವನ್ ರಾಮ್ ರವರ ಭಾವಚಿತ್ರದ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಗಣ್ಯರು ಪಾಲ್ಗೊಂಡಿದ್ದರು.



ಚಾಮರಾಜನಗರದ ಸರ್ಕಾರಿ ಪೇಟೆ ಪ್ರೈಮರಿ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಡಾ. ಬಾಬು ಜಗಜೀವನರಾಮ್‌ರವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಿದರು.

ಕೇಂದ್ರದ 16ನೇ ಹಣಕಾಸು ಯೋಜನೆಯ ಅನುದಾನದಡಿ ಕಾಮಗಾರಿ, ಸ್ಥಳ ಪರಿಶೀಲನೆ




ಗುಂಡ್ಲುಪೇಟೆ ಏ.5–ಇಲ್ಲಿನ ಪುರಸಭೆ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದ 16ನೇ ಹಣಕಾಸು ಯೋಜನೆಯ ಅನುದಾನದ ಕಾಮಗಾರಿ ಕೈಗೆತ್ತಿಕೊಳ್ಳಲು ಖುದ್ದಾಗಿ ಪುರಸಭೆ ಮುಖ್ಯ ಅಧಿಕಾರಿ ಎಸ್. ಸರವಣ ಮತ್ತು ತಂಡ ಸ್ಥಳ ಪರಿಶೀಲನೆ ನಡೆಸಿತು.

ಸ್ಥಳ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸರವಣ, 16ನೇ ಹಣಕಾಸು ಯೋಜನೆಯಡಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ 54 ಲಕ್ಷ ಬಿಡುಗಡೆಯಾಗಿದ್ದು, ಇದನ್ನು ವಿನಾಕಾರಣ ಅವಶ್ಯಕತೆ ಇಲ್ಲದ ಜಾಗದಲ್ಲಿ ಕಾಮಗಾರಿ ಮಾಡದೆ ಮಳೆ ಬಂದರೆ ಚರಂಡಿ ಇಲ್ಲದೆ ನೀರು ಸರಾಗವಾಗಿ ಹರಿಯಲು ತೊಂದರೆ ಉಂಟಾಗಿರುವ ಪ್ರದೇಶದಲ್ಲಿ ಕಾಮಗಾರಿಯನ್ನು ಕೈಗೊಳ್ಳುವಂತೆ ಶಾಸಕ ಗಣೇಶ್ ಪ್ರಸಾದ್ ಅವರು ಸೂಚಿಸಿದ್ದಾರೆ. ಅದರಂತೆ ಬಹುದಿನಗಳಿಂದ ವೀರನಪುರ ಕಾಲೋನಿಯಲ್ಲಿ ಚರಂಡಿ ವ್ಯವಸ್ಥೆಯಿಲ್ಲದೆ ಅಲ್ಲಿನ ಸಾರ್ವಜನಿಕರು ಮಳೆ ಬಂದರೆ ಮಳೆ ನೀರು ಹೋಗಲು ಜಾಗವಿಲ್ಲದೆ ತೊಂದರೆಗೆ ಒಳಗಾಗಿದ್ದು ಇದನ್ನು ಮನಗಂಡು ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದರು.

ಕಿರಿಯ ಅಭಿಯಂತರರಾದ ಮಂಜುನಾಥ್ ಅವರೊಂದಿಗೆ ವೀರನಪುರ ಕಾಲೋನಿಗೆ ಭೇಟಿ ನೀಡಿ ಚರಂಡಿ ಉದ್ದದ ಅಳತೆಯನ್ನು ಓಡೋಮೀಟರ್‌ನಿಂದ ತೆಗೆದುಕೊಳ್ಳುವುದನ್ನು ಖುದ್ದಾಗಿ ಪರಿಶೀಲನೆ ಮಾಡಲಾಗಿದೆ ಎಂದರು. ವಾರ್ಡ್ ನಂಬರ್ 23 ರಲ್ಲಿ ಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಎರಡು ತಿಂಗಳ ಒಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಕಿರಿಯ ಅಭಿಯಂತರ ಮಂಜುನಾಥ್, ಹಿರಿಯ ಆರೋಗ್ಯ ನಿರೀಕ್ಷಕ ಪರಮೇಶ್ ಹಾಜರಿದ್ದರು.

ಸಂಭ್ರಮದಿಂದ ಜರುಗಿದ ಶ್ರೀರಾಮ ಪಟ್ಟಾಭಿಷೇಕ



ಯಳಂದೂರು, ಏ.5– ತಾಲೂಕಿನ ದೇವಾಂಗ ಬೀದಿಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವವು ಭಾನುವಾರ ಸಂಭ್ರಮ ಸಡಗರಗಳಿಂದ ನೆರವೇರಿತು.

ಪಟ್ಟಣದ ದೇವಾಂಗ ಬೀದಿಯಲ್ಲಿರುವ ಶ್ರೀರಾಮಮಂದಿರ ಜಿಲ್ಲೆಯ ಪುರಾತನ ರಾಮಮಂದಿರಗಳಲ್ಲಿ ಒಂದಾಗಿದೆ ನೂರಾರು ವರ್ಷಗಳಿಂದಲೂ ಇಲ್ಲಿ ರಾಮೋತ್ಸವ ಆಚರಿಸುವ ವಾಡಿಕೆ ಇದೆ. ರಾಮ ನವಮಿಯ ದಿನ ಶ್ರೀರಾಮ ದೇವರ ಪಟವನ್ನಿಟ್ಟು ವಿಶೇಷ ಪೂಜೆ ಮಾಡಿ ಪಟ್ಟಾಭಿಷೇಕ ಮಹೋತ್ಸವ ಹಮ್ಮಿಕೊಳ್ಳುವ ಸಂಪ್ರದಾಯ ಅನಾದಿ ಕಾಲದಿಂದಲೂ ರೂಢಿಯಲ್ಲಿದೆ.

ಈ ದೇಗುಲಕ್ಕೆ ಬೆಂಗಳೂರು, ತಮಿಳುನಾಡು ಸೇರಿದಂತೆ ಹಲವು ಕಡೆಗಳಲ್ಲೂ ಭಕ್ತರಿದ್ದು ಪಟ್ಟಾಭಿಷೇಕದ ಸಮಯದಲ್ಲಿ ಎಲ್ಲರೂ ಬಂದು ಪೂಜೆ ಸಲ್ಲಿಸುತ್ತಾರೆ. ಅದರಂತೆ ಭಾನುವಾರ ನಡೆದ ಪಟ್ಟಾಭಿಷೇಕ ಕಾರ್ಯಕ್ರಮಕ್ಕೆ ದೇಗುಲದಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ದೇಗುಲವನ್ನು ಹಾಗೂ ದೇವಾಂಗ ಬೀದಿಯನ್ನು ತಳಿರು, ತೋರಣ, ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು ಬೆಳಿಗ್ಗೆಯಿಂದಲೇ ವಿಶೇಷ ಪೂಜೆ ಹೋಮ ಹವನಗಳನ್ನು ನೆರವೇರಿಸಲಾಯಿತು.

ವಿಶೇಷ ಬಗೆಯ ಹಣ್ಣು, ದವಸ, ಧಾನ್ಯಗಳನ್ನಿಟ್ಟು ಪೂಜಿಸಲಾಯಿತು. ಮಧ್ಯಾಹ್ನ ಮಹಾಮಂಗಳಾರತಿ ಮಾಡುವ ಮೂಲಕ ಪೂಜಾ ಕಾರ್ಯಕ್ರಮಗಳನ್ನು ಸಂಪನ್ನಗೊಳಿಸಲಾಯಿತು. ನಂತರ ನೆರೆದಿದ್ದ ಭಕ್ತರಿಗೆ ಪ್ರಸಾದ ವಿನಿಯೋಗ ಹಾಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ನೂರಾರು ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಭಕ್ತಿ ಮೆರೆದರು. ರಾಮಮಂದಿರದ ಆಡಳಿತ ಮಂಡಳಿಯ ವತಿಯಿಂದ ಅಚ್ಚುಕಟ್ಟಾಗಿ ಎಲ್ಲಾ ಧಾರ್ಮಿಕ ವಿಧಿಗಳನ್ನು ಸಂಪನ್ನಗೊಳಿಸಲಾಯಿತು.

ವಿವಿಧೆಡೆ ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ ರಾಂ ಜಯಂತಿ

ದೇಶದ ಅಭಿವೃದ್ಧಿಗೆ ಬಾಬೂಜಿ ಕೊಡುಗೆ ಅಪಾರ

ಶಾಸಕ ದರ್ಶನ್ ಧ್ರುವನಾರಾಯಣ್


ಕಾರ್ಯಕ್ರಮವನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ನಂಜನಗೂಡು, ಏ.5– ಹಸಿರು ಕ್ರಾಂತಿ ಮೂಲಕ ಭಾರತವನ್ನು ಆಹಾರ ಭದ್ರತೆಯಲ್ಲಿ ಸ್ವಾವಲಂಬಿ ದೇಶವನ್ನಾಗಿ ರೂಪಿಸಿದ ಕೀರ್ತಿ ಡಾ.ಬಾಬು ಜಗಜೀವನ ರಾಂ ಅವರಿಗೆ ಸಲ್ಲುತ್ತದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಗರದ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದ ಆವರಣದಲ್ಲಿ ಏರ್ಪಡಿಸಿದ್ದ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶೋಷಿತ ವರ್ಗದಿಂದ ಬಂದ ಡಾ.ಬಾಬು ಜಗಜೀವನ್ ರಾಂ ಅವರು ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಪ್ರಬಲ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿ ದೇಶದ ಅಭಿವೃದ್ಧಿಗೆ ಮಹತ್ವಾದ ಕೊಡುಗೆ ನೀಡಿದ್ದಾರೆ. ಅಲ್ಲದೇ ಪಾಕಿಸ್ತಾನದ ಉಪಟಳವನ್ನು ತಡೆಯುವ ನಿಟ್ಟಿನಲ್ಲಿ ಅವರು ರಕ್ಷಣಾ ಸಚಿವರಾಗಿ 1971ರಲ್ಲಿ ನಡೆದ ಇಂಡೋ–ಪಾಕ್ ಯುದ್ಧದ ಸಂದರ್ಭ ಬಾಂಗ್ಲಾದೇಶ ಎಂಬ ಹೊಸ ರಾಷ್ಟ್ರದ ಉದಯಕ್ಕೆ ಕಾರಣರಾಗಿದ್ದಾರೆ. ಜೊತೆಗೆ ಅಸ್ಪೃಶ್ಯತೆ ವಿರುದ್ಧ ಹೋರಾಡಿ ಸಾಮಾಜಿಕ ಸಮಾನತೆಗಾಗಿ ಶ್ರಮಿಸುವ ಮೂಲಕ ಸಮಾಜಕ್ಕೆ ಅತ್ಯಂತ ಹೆಚ್ಚಿನ ಕೊಡುಗೆ ನೀಡಿದ್ದಾರೆ. ಪ್ರಸ್ತುತ ನಮ್ಮ ಮುಂದೆ ಹಲವು ಸವಾಲುಗಳಿದ್ದು, ನಾವೆಲ್ಲರೂ ಬಾಬು ಜಗಜೀವನ ರಾಂ ಅವರ ತತ್ವಾದರ್ಶ, ಚಿಂತನೆಗಳನ್ನು ಅಳವಡಿಸಿಕೊಂಡು ಒಗ್ಗೂಡಿ ಅಣ್ಣ–ತಮ್ಮಂದಿರಂತೆ ಬಾಳ್ವೆ ಮಾಡುವ ಮೂಲಕ ಸಂವಿಧಾನದ ರಕ್ಷಣೆಗೆ ಮುಂದಾಗಬೇಕಿದೆ ಎಂದರು.

ನಂಜನಗೂಡಿನ ಡಾ.ಬಾಬು ಜಗಜೀವನ ರಾಂ ಸಮುದಾಯ ಭವನಕ್ಕಾಗಿ ಸರ್ಕಾರ ಒಂದು ಕೋಟಿ ಅನುದಾನ ನಿಯೋಜಿಸಿದ್ದು, ಈಗಾಗಲೇ 25 ಲಕ್ಷ ರೂ. ಬಿಡುಗಡೆಗೊಂಡಿದೆ. ಭವನ ಪೂರ್ಣಗೊಳಿಸಲು ಮುಖ್ಯಮಂತ್ರಿಗಳ ಮನವೊಲಿಸಿ ಸಂಪೂರ್ಣ ಅನುದಾನ ತರಲಾಗುವುದು ಎಂದರು.

ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ತಹಸೀಲ್ದಾರ್ ಸ್ಮಿತಾರಾಮು, ಮುಖ್ಯ ಭಾಷಣಕಾರ ಕೆ.ಆರ್.ರಾಜಯ್ಯ ಮಾತನಾಡಿದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ನಗರದ ಜೂನಿಯರ್ ಕಾಲೇಜು ಮೈದಾನದಿಂದ ವಿವಿಧ ಜಾನಪದ ಕಲಾತಂಡಗಳೊಂದಿಗೆ ಡಾ.ಬಾಬು ಜಗಜೀವನ ರಾಂ ಭಾವಚಿತ್ರವನ್ನು ಅದ್ಧೂರಿಯಾಗಿ ಮೆರವಣಿಗೆ ನಡೆಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾ ಮಾಜಿ ಸದಸ್ಯೆ ಗಾಯತ್ರಿ, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ, ಪುರಸಭಾ ಮಾಜಿ ಉಪಾಧ್ಯಕ್ಷ ದೇವರಾಜು, ಮುಖಂಡರಾದ ಶ್ರೀನಿವಾಸ ಮೂರ್ತಿ, ರಾಜೇಶ್, ಪ್ರಕಾಶ್, ಅಶೋಕ್, ಸಿದ್ದಪ್ಪ ಮಧುರಾಜ್, ತಾಪಂ ಇಓ ಜೆರಾಲ್ಡ್ ರಾಜೇಶ್, ನಗರಸಭಾ ಆಯುಕ್ತ ಬಸವರಾಜು, ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕ ಕೆಸಿದ್ದಲಿಂಗು ಇತರರು ಉಪಸ್ಥಿತರಿದ್ದರು.

ಶೋಷಿತರ ಏಳಿಗೆಗೆ ಶ್ರಮಿಸಿದ ಬಾಬೂಜಿ

ಶಾಸಕ ಜಿ.ಡಿ.ಹರೀಶ್‌ಗೌಡ ಅಭಿಪ್ರಾಯ


ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಹುಣಸೂರು, ಏ.5– ಸರ್ವರಿಗೂ ಸಮಪಾಲು ನೀಡಿ ಶೋಷಣೆಗೆ ಒಳಗಾದವರ ಏಳಿಗೆಗೆ ಶ್ರಮಿಸಿದ ಮಹಾ ನಾಯಕ ಭಾರತದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಂ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಡಾ.ಅಂಬೇಡ್ಕರ್ ಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಡೆದ ಡಾ.ಬಾಬು ಜಗಜೀವನ್ ರಾಂ ಅವರ 119ನೇ ಜನ್ಮ ದಿನಾಚರಣೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಯಂತಿಗಳ ಮೂಲಕ ಮಹನೀಯರ ಸ್ಮರಣೆಯಾಗಬೇಕು. ಅವರನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸಬಾರದು. ಅವರ ಸಾಧನೆ, ಆದರ್ಶದ ಬದುಕು, ಬರಹ, ಚರಿತ್ರೆಯನ್ನು ಮುಂದಿನ ಪೀಳಿಗೆಗೆ ತಿಳಿಸುವ ಅಗತ್ಯವಿದೆ ಎಂದರು.

ಮುಖ್ಯ ಭಾಷಣಕಾರ ಜೆ.ಜಯರಾಂ ಮಾತನಾಡಿ, ಬಾಬೂಜಿ ದೇಶ ಕಂಡ ಅಪ್ರತಿಮ ನಾಯಕ ಮಾತ್ರವಲ್ಲ ದಕ್ಷ ಆಡಳಿತಗಾರ. ಬಾಲ್ಯದಲ್ಲೇ ಎಲ್ಲಾ ರೀತಿಯ ಅವಮಾನಗಳನ್ನು ಕಂಡು ಶೋಷಣೆಯ ವಿರುದ್ಧ ಹೋರಾಡಿದ ಮಹಾ ಚೇತನ ಬಾಬೂಜಿ ಎಂದರು.

ಅವರ ಸುದೀರ್ಘ 40 ವರ್ಷಗಳ ರಾಜಕೀಯ ಜೀವನದಲ್ಲಿ ತಾಳ್ಮೆ, ಸಹಾನುಭೂತಿ ವ್ಯಕ್ತಿತ್ವದ ಜೊತೆಗೆ ಕೆಚ್ಚೆದೆಯ ಹೋರಾಟ ಅವರ ಅಧಿಕಾರವಧಿಯಲ್ಲಿ ನೆಲೆಯೂರಿತ್ತು. ಆದ್ದರಿಂದಲೇ ಅವರು ದೇಶ ಪ್ರೇಮಿ, ಹಸಿರು ಕ್ರಾಂತಿಯ ದಿಟ್ಟ ನಾಯಕನಾಗಿ ಹೊರಹೊಮ್ಮಿದರು ಎಂದರು.

2 ಬಾರಿ ಕೃಷಿ ಸಚಿವ, ರಕ್ಷಣಾ ಸಚಿವ, ರೈಲ್ವೆ ಕಾರ್ಮಿಕ ಸಚಿವರಾಗಿ ಹಲವು ಖಾತೆಗಳನ್ನು ನಿರ್ವಹಿಸುವ ಮೂಲಕ ಹಸಿವು ಮುಕ್ತ ಭಾರತಕ್ಕೆ ಟ್ರಬಲ್ ಶೂಟರ್ ಆಗಿ ನಿಂತು 1970ರ ದಶಕದಲ್ಲಿ ಆಹಾರ ಸಮತೋಲನಕ್ಕೆ ಕಾರಣರಾದ ಬಾಬೂಜಿ ಸಮಾನತೆಯ ಕಲ್ಪನೆಯ ಶಿಲ್ಪಿಯಾಗಿದ್ದಾರೆ ಎಂದರು.

ಆದಿಜಾಂಬವ ಮುಖಂಡ ಡಿ.ಕುಮಾರ್, ತಹಸೀಲ್ದಾರ್ ಜೆ.ಮಂಜುನಾಥ್ ಮಾತನಾಡಿದರು. ಇಓ ಹೊಂಗಯ್ಯ, ಬಿಇಓ ಎಸ್.ಪಿ. ಮಹದೇವ್, ಪೌರಾಯುಕ್ತೆ ಮಾನಸ, ಸಮಾಜ ಕಲ್ಯಾಣ ಇಲಾಖೆಯ ಭರತ್ ಕುಮಾರ್, ರೇಣುಕಾ ಪ್ರಸಾದ್ ಆದಿಜಾಂಬವ ತಾಲೂಕು ಅಧ್ಯಕ್ಷ ಶಿವಣ್ಣ ರೈತ ಸಂಘದ ಜಿಲ್ಲಾಧ್ಯಕ್ಷ ಕುಮಾರ್, ದಲಿತ ಮುಖಂಡ ನಿಂಗರಾಜ ಮಲ್ಲಾಡಿ, ಎಸ್ಸಿ ಎಸ್ಸಿ ಸದಸ್ಯ ಮಹದೇವ್, ನಗರಸಭೆ ಮಾಜಿ ಸದಸ್ಯ ಸತೀಶ್ ಕುಮಾರ್, ಕೆಂಪರಾಜು, ಪುಟ್ಟರಾಜು, ರಾಮಯ್ಯ, ಜೆಡಿಎಸ್ ಹಿಂದುಳಿದ ವರ್ಗದ ಅಧ್ಯಕ್ಷ ವೀರಭದ್ರಚಾರ್ ಇನ್ನಿತರರಿದ್ದರು.

ಡಾ.ಬಾಬು ಜಗಜೀವನ್‌ರಾಮ್ ಹೆಸರು ಅಜರಾಮರ


ಡಾ.ಬಾಬು ಜಗಜೀವನ ರಾಂ ಭಾವಚಿತ್ರಕ್ಕೆ ಯುವಕರು ಪುಷ್ಪಾರ್ಚನೆ ನೆರವೇರಿಸಿದರು.

ಭೇರ್ಯ, ಏ.5– ತಮ್ಮ ಜೀವಿತಾವಧಿಯಲ್ಲಿ ದೇಶದ ಏಳಿಗೆಗೆ ಅಪಾರ ಕೊಡುಗೆ ನೀಡಿ ಹಸಿರು ಕ್ರಾಂತಿಗೆ ಮುನ್ನುಡಿ ಬರೆದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಹೆಸರು ಅಜರಾಮರ ಎಂದು ಮಾದಿಗ ಸಮಾಜದ ಯುವ ಮುಖಂಡ ಶಿವು ತಿಳಿಸಿದರು.

ಗ್ರಾಮದ ಡಾ.ಬಾಬು ಜಗಜೀವನ ರಾಂ ನಗರದಲ್ಲಿ ಮಾದಿಗ ಸಮುದಾಯ ಯುವಕರು ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತಿಯಲ್ಲಿ ಬಾಬೂಜಿ ಭಾವಚಿತ್ರಕ್ಕೆ ಸಮುದಾಯ ಯುವಕರೊಂದಿಗೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಮಹನೀಯರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದರು.

ಕೇಂದ್ರ ಸಚಿವರಾಗಿ ಅವರು ನಿರ್ವಹಿಸಿದ ಎಲ್ಲಾ ಖಾತೆಗಳಿಗೆ ನ್ಯಾಯ ದೊರಕಿಸಿದ ಅವರು ದೇಶವೇ ನಿಬ್ಬೆರಗಾಗುವ ಸಾಧನೆ ಮಾಡಿ ಇತರರಿಗೆ ಮಾದರಿಯಾಗಿದ್ದಾರೆ ಎಂದು ತಿಳಿಸಿದರು.

ಭಾರತದಲ್ಲಿ ಕೃಷಿ ಅಭಿವೃದ್ಧಿಯ ಮೂಲಾಧಾರವಾಗಿದೆ. ಈ ದೃಷ್ಟಿಯಿಂದ ಡಾ. ಬಾಬು ಜಗಜೀವನರಾಂ ದೇಶದ ಭೀಕರ ಬರಗಾಲದ, ಕ್ಷಾಮದ ಪರಿಸ್ಥಿತಿಯಲ್ಲಿ ಕೈಗೊಂಡ ಕ್ರಮಗಳು ದೇಶದ ಆಹಾರ ಕೊರತೆಯನ್ನು ನೀಗಿಸಿ ಸುಸ್ಥಿರ ಅಭಿವೃದ್ಧಿಗೆ ಸಹಕಾರಿಯಾದವು ಎಂದರು.

ದೇಶದ ರಾಜಕೀಯ, ಸಾಮಾಜಿಕ, ಆರ್ಥಿಕ ಬದಲಾವಣೆಗೆ ಡಾ.ಬಾಬು ಜಗಜೀವನ ರಾಂ ಮೂಲ ಕಾರಣರಾಗಿದ್ದಾರೆ. ದೀನ ದಲಿತರ ಏಳಿಗೆಗಾಗಿ ಸದಾ ಶ್ರಮಿಸುತ್ತಿದ್ದರು. ಸಾಮಾಜಿಕ ಕಳಕಳಿ ಹೊಂದಿದ್ದ ಅವರ ತತ್ವಗಳನ್ನು ವಿದ್ಯಾರ್ಥಿಗಳು ಪಾಲಿಸುವ ಮೂಲಕ ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂದು ಕರೆ ನೀಡಿದರು.

ಈ ವೇಳೆ ಮುಖಂಡರಾದ ರಂಗಸ್ವಾಮಿ, ವಿಜೇಂದ್ರ, ಚರಣ್, ಶಿವಾನಂದ, ಚಿನ್ನಸಾಮಿ, ರಾಮಚಂದ್ರ, ಮಂಜು, ಕಿರಣ್, ಯಶು, ಸುದೀಪ್, ಪೇಪರ್ ಮನೋಜ್, ಪುನೀತ್, ಮನೋಜ್, ಡಿ.ಜೀವನ್ ಸೇರಿದಂತೆ ಅನೇಕರಿದ್ದರು.

ಸಾಮಾಜಿಕ ನ್ಯಾಯ, ಸಮಾನತೆಗಾಗಿ ಬಾಬೂಜಿ ಸೇವೆ ಸ್ಮರಣೀಯ

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ


ಬಾಬೂಜಿ ಪುತ್ಥಳಿಗೆ ಗಣ್ಯರು ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿದರು.

ತಿ.ನರಸೀಪುರ, ಏ.5– ಕಾರ್ಮಿಕರು ಮತ್ತು ದೀನ ದಲಿತರ ಉದ್ಧಾರ ಹಾಗೂ ಸಾಮಾಜಿಕ ನ್ಯಾಯ, ಸಮಾನತೆಗಾಗಿ ಬಾಬೂಜಿ ಸೇವೆ ಸದಾ ಸ್ಮರಣೀಯ ಎಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ತಿಳಿಸಿದರು.

ಡಾ.ಬಾಬು ಜಗಜೀವನರಾಂ ಅವರ 119ನೇ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಪಟ್ಟಣ ಸಮೀಪದ ಭೈರಾಪುರ ಗ್ರಾಮದ ಪ್ರವೇಶ ದ್ವಾರದಲ್ಲಿರುವ ಡಾ.ಬಾಬು ಜಗಜೀವನರಾಂ ಪುತ್ಥಳಿಗೆ ಗ್ರಾಮದ ಹಿರಿಯ ಮುಖಂಡರು, ಯಜಮಾನರೊಟ್ಟಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಲ್ಲಿಸಿ ಅವರು ಮಾತನಾಡಿದರು.

ದೇಶದ ಇತಿಹಾಸದಲ್ಲಿ ಹಸಿರು ಕ್ರಾಂತಿ ಹರಿಕಾರರಾಗಿ ಮಾದರಿ ಸೇವೆ ಸಲ್ಲಿಸಿದ ಡಾ.ಜಗಜೀವನ ರಾಂ ಅವರು ದೇಶದ ಆರ್ಥಿಕತೆ ಕೃಷಿ ರಂಗದ ಮೂಲ ಆಧಾರವಾಗಿದೆ ಎಂದು ತೋರಿಸಿದ ಮಹಾನುಭಾವ. ಸ್ವಾತಂತ್ರ ಹೋರಾಟಗಾರರಾಗಿದ್ದ ಬಾಬೂಜಿ ದಲಿತರು ಹಾಗೂ ಹಿಂದುಳಿದ ಮತ್ತು ಶೋಷಿತರ ನೋವನ್ನು ಸಮೀಪದಿಂದ ಕಂಡವರಾಗಿದ್ದರಿಂದ ಸರ್ವರಿಗೂ ಸಾಮಾಜಿಕ ನ್ಯಾಯ ಒದಗಿಸಲು ಪ್ರಾಮಾಣಿಕ ಸೇವೆ ಸಲ್ಲಿಸಿದರು. ತಮ್ಮ ಜೀವನವನ್ನು ಬಡವರ ಮತ್ತು ದಲಿತರ ಅಭಿವೃದ್ಧಿಗಾಗಿ ಮುಡಿಪಾಗಿಟ್ಟಿದ್ದರು. ಹೀಗಾಗಿ ಅವರ ಆದರ್ಶ ಮೌಲ್ಯಗಳು ಎಲ್ಲರಿಗೂ ಪ್ರೇರಣೆಯಾಗಿವೆ. ಅವರು ಹಾಕಿಕೊಟ್ಟ ಅಭಿವೃದ್ಧಿ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕಿದೆ ಎಂದರು.

> ಕೃಷಿ, ರೈಲ್ವೆ, ರಕ್ಷಣಾ ಮಂತ್ರಿ ಸೇರಿದಂತೆ ದೇಶದ ಉಪ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ ಡಾ. ಬಾಬು ಜಗಜೀವನರಾಂ ದೇಶವನ್ನು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯನ್ನಾಗಿಸುವ ಮೂಲಕ ಹಸಿರು ಕ್ರಾಂತಿಗೆ ಚಾಲನೆ ನೀಡಿದರು. ಅವರ ನಾಯಕತ್ವದ ಮೌಲ್ಯಗಳು, ದೇಶಕೋಸ್ಕರ ಅವರು ಹೊಂದಿದ್ದ ಬದ್ಧತೆ ಎಲ್ಲರಿಗೂ ಪ್ರೇರಣೆ. **– ಎಂ.ಸಿದ್ದರಾಜು, ಬಾಬು ಜಗಜೀವನರಾಂ ಸಂಘದ ಮಾಜಿ ಅಧ್ಯಕ್ಷ.**

ಮಾಜಿ ಉಪ ಪ್ರಧಾನಿ ಬಾಬೂಜಿ ಜನ್ಮ ದಿನಾಚರಣೆಗೆ ಯುವಕರು ಹೆಚ್ಚು ಒತ್ತು ನೀಡಬೇಕು. ಗ್ರಾಮದಲ್ಲಿ ಹೇಗೆ ದಂಡಿನ ಮಾರಮ್ಮ, ಗ್ರಾಮದೇವತೆ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತೀರೋ ಅದೇ ಮಾದರಿ ಬಾಬೂಜಿ ಅವರ ಜಯಂತಿಯನ್ನು ಎಲ್ಲರೂ ಒಗ್ಗೂಡಿ ಆಚರಿಸಬೇಕು ಎಂದು ಸಲಹೆ ನೀಡಿದರು. ಗ್ರಾಮದ ಪ್ರವೇಶ ದ್ವಾರದಲ್ಲಿರುವ ಬಾಬೂಜಿ ಪುತ್ಥಳಿ ಬಳಿ ಪ್ರವೇಶ ದ್ವಾರ ನಿರ್ಮಿಸಲು ಸಿಎಂ ಸಿದ್ದರಾಮಯ್ಯ ಕೋಟಿ ರೂ. ಅನುದಾನ ನೀಡಲು ಒಪ್ಪಿಗೆ ಸೂಚಿಸಿದ್ದಾರೆ. ಹೀಗಾಗಿ ಪ್ರವೇಶ ದ್ವಾರವನ್ನು ಅವರಿಂದಲೇ ಉದ್ಘಾಟಿಸಲಾಗವುದು ಎಂದರು.

ಬಾಬು ಜಗಜೀವನರಾಂ ಸಂಘದ ಉಪಾಧ್ಯಕ್ಷ ವಿಜಾಪುರ ಕೆ.ಶಿವಶಂಕರ್, ಕಾರ್ಯದರ್ಶಿ ಸಿಡಿ ವೆಂಕಟೇಶ್, ಬಾಬು ಜಗಜೀವನ ರಾಮ್ ಮಾಜಿ ಅಧ್ಯಕ್ಷ ಪುಟ್ಟಯ್ಯ, ಕೆಡಿಪಿ ಸದಸ್ಯ ದಿವಾಕರ, ಜಿ ಎನ್ ಪುಟ್ಟಸ್ವಾಮಿ, ಮುಖಂಡರಾದ ಯಜಮಾನ ಚಿಕ್ಕಲಿಂಗಣ್ಣ, ಗುಡ್ಡಪ್ಪ, ಗ್ರಾಮಸ್ಥರು ಹಾಜರಿದ್ದರು.

ಡಾ.ಬಾಬೂಜಿ ತತ್ವಾದರ್ಶ ನಮ್ಮೆಲ್ಲರಿಗೂ ದಾರಿದೀಪ


ಹಳಿಯೂರು ಸರ್ಕಾರಿ ಶಾಲೆ ಮುಖ್ಯ ಶಿಕ್ಷಕ ರಂಗನಾಥ್ ಅವರನ್ನು ತಹಸೀಲ್ದಾರ್ ಮೋಹನ ಕುಮಾರಿ ಸನ್ಮಾನಿಸಿದರು.

ಸರಗೂರು, ಏ.5– ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಆಡಳಿತದಿಂದ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಅವರ 119ನೇ ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಹಸೀಲ್ದಾರ್ ಮೋಹನ ಕುಮಾರಿ, ಡಾ. ಬಾಬು ಜಗಜೀವನ್ ರಾಂ ಅವರು ದೀನ ದಲಿತರ ಹಕ್ಕುಗಳಿಗಾಗಿ ಹೋರಾಟ ನಡೆಸಿದರು. ಅವರು 1931ರಲ್ಲಿ ವಿಜ್ಞಾನದಲ್ಲಿ ಪದವಿ ಪಡೆದರೂ, ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿ ತೋರಿಸಿದರು. ಬಾಬು ಜಗಜೀವನ್ ರಾಂ ಅವರು 1936 ರಿಂದ 1986 ರವರೆಗೆ ನಿರಂತರವಾಗಿ 50 ವರ್ಷಗಳ ಕಾಲ ಸಂಸದರಾಗಿ ವಿಶ್ವ ದಾಖಲೆಗಳ ಹೊಂದಿದ್ದಾರೆ. ದಮನಿತರ ಧ್ವನಿಯಾಗಿ, ಶೋಷಿತರ ಪರವಾಗಿ ಹೋರಾಟ ನಡೆಸಿದ ಮಾಜಿ ಉಪಪ್ರಧಾನಿ ಡಾ.ಜಗಜೀವನ್ ರಾಮ್ ಅವರ ತತ್ವಾದರ್ಶಗಳು ನಮ್ಮೆಲ್ಲರಿಗೂ ದಾರಿದೀಪ. ಭಾರತದ ಕೃಷಿ ಆಧುನೀಕರಣ ಮಾಡುವಲ್ಲಿ ಹಾಗೂ ಹಸಿರು ಕ್ರಾಂತಿ ಹರಿಕಾರರಾಗಿ ಜನಸಾಮಾನ್ಯರು ಎಂದಿಗೂ ಮರೆಯದ ವ್ಯಕ್ತಿತ್ವ ಹೊಂದಿದ್ದರು. ಬಡವರು, ದೀನ ದಲಿತರ ಕಣ್ಣೀರು ಒರೆಸಿದ ಶ್ರೇಷ್ಠ ವ್ಯಕ್ತಿತ್ವ ಹೊಂದಿದ್ದರು ಎಂದರು.

ಕಾರ್ಯಕ್ರಮ ಬಹಿಷ್ಕಾರ

ಮಾದಿಗ ಸಮುದಾಯದ ಮುಖಂಡರು ಡಾ.ಬಾಬು ಜಗಜೀವನ್ ರಾಂ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಕಾರ್ಯಕ್ರಮ ಬಹಿಷ್ಕರಿಸಿದರು. ಎಸ್ಸಿ, ಎಸ್ಟಿ ಸಮಿತಿ ಸದಸ್ಯ ಬೆಟ್ಟಸ್ವಾಮಿ ಮಾತನಾಡಿ, ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸಿಲ್ಲ. ಹೀಗಾಗಿ ಡಾ.ಬಾಬು ಜಗಜೀವನ್ ರಾಂ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ವೇದಿಕೆ ಕಾರ್ಯಕ್ರಮ ಬಹಿಷ್ಕರಿಸಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಯಜಮಾನ ವೆಂಕಟಪ್ಪ, ಸ್ವಾಮಿ, ಯಜ್ಜೂರಯ್ಯ, ಮೂರ್ತಿ, ಆಟೋ ರಮೇಶ್, ದಾಸಯ್ಯ, ಹಂಚೀಪುರ ಗ್ರಾಪಂ ಸದಸ್ಯ ನಾಗರಾಜು, ನಾಗರಾಜು, ಶಿವಕುಮಾರ್, ಇತರರಿದ್ದರು.

ಮುಖ್ಯ ಭಾಷಣಕಾರ ಹಳಿಯೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ರಂಗನಾಥ್ ಮಾತನಾಡಿ, ಅಧಿಕಾರ ಮತ್ತು ಐಶ್ವರ್ಯದಿಂದ ಗಳಿಸಲಾಗದ ಕೀರ್ತಿಯನ್ನು ಸೇವೆ, ತ್ಯಾಗದಿಂದ ಸಂಪಾದಿಸಬಹುದು ಎನ್ನುವ ಸಂದೇಶ ಸಾರಿದ ಹೆಗ್ಗಳಿಕೆ ಡಾ.ಬಾಬು ಜಗಜೀವನರಾಂ ಅವರಿಗೆ ಸಲ್ಲುತ್ತದೆ. ಭಾರತೀಯ ರಾಜಕೀಯ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಜಗಜೀವನ್ ರಾಂ ಅವರ ವೃತ್ತಿ ಜೀವನವು 4 ದಶಕಗಳನ್ನು ವ್ಯಾಪಿಸಿದೆ. ಭಾರತದ ಮೊದಲ ಸಂಪುಟದಲ್ಲಿ ಕಾರ್ಮಿಕ ಸಚಿವರಾದರು. ಅವರು ಎಲ್ಲಾ ಭಾರತೀಯರಿಗೆ ಸಮಾನತೆಗಾಗಿ, ಅಸ್ಪೃಶ್ಯರಿಗೆ ಸಹ ಹೋರಾಟದಲ್ಲಿ ನಾಯಕರಾಗಿದ್ದರು ಎಂದರು.

ಕಾರ್ಯಕ್ರಮದಲ್ಲಿ ಇಓ ಪ್ರೇಮ್ ಕುಮಾರ್, ಪಪಂ ಅಧ್ಯಕ್ಷೆ ಚೈತ್ರ, ಮುಖ್ಯಾಧಿಕಾರಿ ಸಂತೋಷ್ ಕುಮಾರ್, ಎಸ್‌ಐ ಕಿರಣ್, ಎಎಸ್‌ಐ ಶ್ರೀಕಂಠಸ್ವಾಮಿ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಗೋವಿಂದರಾಜು, ಅಣ್ಣಯ್ಯಸ್ವಾಮಿ, ಗೋವಿಂದ ಇನ್ನಿತರರಿದ್ದರು.

ಬಾಬೂಜಿ, ಅಂಬೇಡ್ಕರ್ ದಲಿತ ಸಮುದಾಯದ ಕಣ್ಣುಗಳು

ಕೆಪಿಸಿಸಿ ಪ.ಜಾತಿ ವಿಭಾಗದ ಸಂಚಾಲಕ ವಕೀಲ ರಂಗನಾಥ್ ಪ್ರಸಾದ್


ಬಾಬೂಜಿ ಭಾವಚಿತ್ರಕ್ಕೆ ಕೆಪಿಸಿಸಿ ಪ.ಜಾತಿ ವಿಭಾಗದ ಸಂಚಾಲಕ ವಕೀಲ ರಂಗನಾಥ್ ಪ್ರಸಾದ್ ಪುಷ್ಪಾರ್ಚನೆ ಮಾಡಿದರು.

ತಿ.ನರಸೀಪುರ: ದೇಶದ ಯಾವುದೇ ಸಂವಿಧಾನಿಕ ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿದ ಕೀರ್ತಿ ಬಾಬು ಜಗಜೀವನ್ ರಾಂ ಅವರಿಗೆ ಸಲ್ಲುತ್ತದೆ ಎಂದು ಕೆಪಿಸಿಸಿ ಪ.ಜಾತಿ ವಿಭಾಗದ ಸಂಚಾಲಕ ವಕೀಲ ರಂಗನಾಥ್ ಪ್ರಸಾದ್ ತಿಳಿಸಿದರು.

ತಮ್ಮ ಕಚೇರಿಯಲ್ಲಿ ಬಾಬು ಜಗಜೀವನ ರಾಮ್ ಅವರ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬಾಬೂಜಿ ಹಾಗೂ ಡಾ.ಅಂಬೇಡ್ಕರ್ ದಲಿತ ಸಮುದಾಯದ 2 ಕಣ್ಣುಗಳಿದ್ದಂತೆ. ಆದರೆ ಕೆಲವರು ಕೇವಲ ಭಾಷಣಗಳಲ್ಲಿ ಅವರ ಹೆಸರು ಬಳಸಿಕೊಳ್ಳುತ್ತಿರುವುದು ವಿಷಾದನೀಯ. ಹೀಗಾಗಿ ಅವರು ಹಾಕಿಕೊಟ್ಟ ಬುನಾದಿಯಲ್ಲಿ ನಾವು ನಡೆಯುತ್ತಿದ್ದೇವೆಯೇ ಎಂಬುದನ್ನು ಅವಲೋಕನ ಮಾಡಿಕೊಳ್ಳಬೇಕಿದೆ ಎಂದರು.

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಅವರು, ಕೇಂದ್ರದ ಆಹಾರ ಸಚಿವರಾಗಿ ಕಾರ್ಯ ನಿರ್ವಹಿಸಿದ ವೇಳೆ ದೇಶದಲ್ಲಿ ಉಂಟಾದ ಭೀಕರ ಬರಗಾಲದ ಸಮಯದಲ್ಲಿ ಆಹಾರ ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸಿ, ಆಹಾರ ಉತ್ಪಾದನೆ ಹೆಚ್ಚಿಸಲು ಅಪಾರ ಶ್ರಮಪಟ್ಟರು. ಈ ಕಾರಣಕ್ಕೆ ಅವರಿಗೆ 'ಹಸಿರು ಕ್ರಾಂತಿಯ ಹರಿಕಾರ' ಎಂಬ ಖ್ಯಾತಿ ದೊರಕಿದೆ ಎಂದರು.

ಬಾಬೂಜಿ ಅವರು ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲದೇ, ಸಮಾಜ ಸೇವಕ, ಸಚಿವ, ಉಪ ಪ್ರಧಾನಿಯಾಗಿದ್ದರು. ಅಲ್ಲದೇ ಮಹಾನ್ ದಲಿತ ನಾಯಕರಾಗಿದ್ದರು. ಅಸ್ಪೃಶ್ಯತೆ, ಜಾತಿ ನಿರ್ಮೂಲನಾ ವ್ಯವಸ್ಥೆ ವಿರುದ್ಧ ಹೋರಾಡಿ, ಸಮತಾ ಭಾವನೆ ನೆಲೆಯೂರಲು ಅವಿರತ ಶ್ರಮಿಸಿದ ರಾಜಕೀಯ ಮುತ್ಸದ್ದಿಯಾಗಿದ್ದರು ಎಂದರು.

ಈ ವೇಳೆ ಕೆಪಿಸಿಸಿ ಪ.ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ ಇದ್ದರು.

ಏ.8 ರಂದು ಎಂಆರ್‌ಐಟಿಯಲ್ಲಿ ಎಂಆರ್‌ಐಟ್ನೋವಸ್ 2k26

ಮೈಸೂರು: ಮಂಡ್ಯದ ಮೈಸೂರು ರಾಯಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವ್ಯವಹಾರ ನಿರ್ವಹಣಾ ವಿಭಾಗದಿಂದ ಪದವಿ ವಿದ್ಯಾರ್ಥಿಗಳಿಗಾಗಿ 'ನಿರ್ವಹಣಾ ಉತ್ಸವ ಎಂಆರ್ ಐಟ್ನೋವಸ್ 2k26' ಕಾರ್ಯಕ್ರಮವನ್ನು ಏ.8 ರಂದು ಬೆಳಗ್ಗೆ 10 ಗಂಟೆಗೆ ಕಾಲೇಜಿನ ಆವರಣದಲ್ಲಿ ಆಯೋಜಿಸಿದೆ.

ಇನ್ನೋವೇಟ್, ಸ್ಟ್ರಾಟಜಿ, ಲೀಡ್ ಎಂಬ ಥೀಮ್‌ನಡಿ ಆಯೋಜಿಸಿರುವ ಈ ಉತ್ಸವವು ವಿದ್ಯಾರ್ಥಿಗಳಿಗೆ ವಾಸ್ತವಿಕ ಉದ್ಯಮ ಲೋಕದ ಅನುಭವ ಮತ್ತು ಕೌಶಲ್ಯಾಭಿವೃದ್ಧಿಗೆ ಉತ್ತಮ ವೇದಿಕೆಯಾಗಿದೆ. ಕಾರ್ಯಕ್ರಮವನ್ನು ಜೆಎಸ್‌ಎಸ್ ಸೈನ್ಸ್ ಅಂಡ್ ಟೆಕ್ನಾಲಜಿ ವಿವಿ ಪ್ರೊಫೆಸರ್ ಮತ್ತು ಡೀನ್ ಡಾ.ಪಿ.ನಾಗೇಶ್ ಉದ್ಘಾಟಿಸಲಿದ್ದಾರೆ.

ಸಾವಿತ್ರಿ ಬಾಯಿ ಫುಲೆ ಮಹಿಳಾ ಶಿಕ್ಷಕಿಯರಿಗೆ ಮಾದರಿ

ಶಾಸಕ ಅನಿಲ್ ಚಿಕ್ಕಮಾದು ಪತ್ನಿ ಸೌಮ್ಯ


ಸಾಧನೆ ಮಾಡಿದ ಮಹಿಳಾ ಶಿಕ್ಷಕಿಯರಿಗೆ ಮಹಿಳಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಹೆಚ್.ಡಿ.ಕೋಟೆ, ಏ.5– ಸಾವಿತ್ರಿಬಾಯಿ ಫುಲೆಯವರು 18 ಶಾಲೆಗಳನ್ನು ಆರಂಭಿಸಿ ಶಾಲೆ ಬಿಟ್ಟ ಮಕ್ಕಳಿಗೆ ಮತ್ತೆ ಓದಲು ಅವಕಾಶ ಕಲ್ಪಿಸಿದ್ದರು. ಸಾವಿತ್ರಿ ಭಾಯಿ ಫುಲೆಯವರು ರಾಷ್ಟ್ರದ ಮೊದಲ ಮಹಿಳಾ ಶಿಕ್ಷಕಿಯಾಗಿದ್ದು, ಶಿಕ್ಷಕಿಯರಿಗೆ ಮಾದರಿಯಾಗಿ ನಿಲ್ಲುತ್ತಾರೆ ಎಂದು ಸೌಮ್ಯ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಗುರು ಭವನದಲ್ಲಿ ಸಾವಿತ್ರಿ ಬಾಯಿ ಫುಲೆ ರಾಷ್ಟ್ರೀಯ ಶಿಕ್ಷಕಿಯರ ಫೆಡರೇಷನ್, ಕರ್ನಾಟಕ ರಾಜ್ಯ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘ ಜಿಲ್ಲಾ ಮತ್ತು ತಾಲೂಕು ಘಟಕದಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಫುಲೆಯವರು ಅಂದು ಶಾಲೆ ಬಿಟ್ಟ ಮಕ್ಕಳಿಗೆ ಶಾಲೆ ಕಟ್ಟಿದಂತೆ ಇಂದಿನ ಶಿಕ್ಷಕಿಯರು ಶಾಲೆ ಬಿಟ್ಟ ಮಕ್ಕಳು ಮತ್ತೆ ಶಾಲೆಗೆ ಬರುವಂತೆ ನೋಡಿಕೊಳ್ಳಬೇಕು. ಅಲ್ಲದೇ ಶೂನ್ಯ ದಾಖಲಾತಿ ಇರುವ ಶಾಲೆಗಳಿಗೆ ಮತ್ತೆ ದಾಖಲಾತಿ ಆಗುವ ರೀತಿ ಹಾಗೂ ಹೆಣ್ಣು ಮಕ್ಕಳು ಶಾಲೆ ಬಿಡದಂತೆ ನೋಡಿಕೊಳ್ಳಬೇಕು ಎಂದರು.

ತಾಲೂಕಿನಲ್ಲಿ ಶೇ.80ರಷ್ಟು ಮಹಿಳಾ ಶಿಕ್ಷಕಿಯರಿದ್ದಾರೆ. ಮಕ್ಕಳನ್ನು ತಾಯಿಯಂತೆ ಪೋಷಣೆ ಮಾಡಿ ಶಿಕ್ಷಣ ನೀಡುತ್ತಿದ್ದಾರೆ ಎಂದರು. ಬಿಇಓ ಬಿ.ಎಲ್. ರಾಜು ಮಾತನಾಡಿ, ತಾಲೂಕಿನಲ್ಲಿ ಒಟ್ಟು 350 ಅತಿಥಿ ಶಿಕ್ಷಕರಿದ್ದಾರೆ. ಖಾಯಂ ಶಿಕ್ಷಕರ ಕೊರತೆಯಿಂದಾಗಿ 53 ಶಾಲೆಗಳಲ್ಲಿ ಅತಿಥಿ ಶಿಕ್ಷಕರೇ ಶಾಲೆಗಳನ್ನು ನಡೆಸಿಕೊಂಡು ಹೋಗುವ ಸ್ಥಿತಿ ಇದೆ. ಅಲ್ಲದೇ ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.100 ಫಲಿತಾಂಶ ನೀಡುವ ಭರವಸೆ ನೀಡಿದ್ದಾರೆ. ಅಂತಹ ಅತಿಥಿ ಶಿಕ್ಷಕರನ್ನು ಅಭಿನಂದಿಸಲಾಗಿದೆ ಎಂದರು.

ಸಂಘದ ಅಧ್ಯಕ್ಷೆ ಎಲ್.ಕೆ.ರೂಪ ಪ್ರಮೋದ್ ಮಾತನಾಡಿ, ಮಹಿಳೆಯರ ಮೇಲೆ ದೌರ್ಜನ್ಯ ಇಂದಿಗೂ ನಡೆಯುತ್ತಿದೆ. ದೌರ್ಜನ್ಯದ ಸ್ವರೂಪ ಬದಲಾಗಿದೆಯೇ ಹೊರತು ದೌರ್ಜನ್ಯ ನಿಂತಿಲ್ಲ ಎಂದು ಬೇಸರಿಸಿದ ಅವರು ಗುರುಭವನ ನವೀಕರಣಕ್ಕೆ ಶಾಸಕರ ಗಮನಕ್ಕೆ ತರಬೇಕು ಎಂದು ಶಾಸಕರ ಪತ್ನಿ ಸೌಮ್ಯ ಅವರಿಗೆ ಮನವಿ ಸಲ್ಲಿಸಿದರು.

ಸಮನ್ವಯಾಧಿಕಾರಿ ಕೃಷ್ಣಯ್ಯ ಮಾತನಾಡಿ, ಭಾರತದಲ್ಲಿ ಸಿಂಧೂ ಬಯಲಿನ ನಾಗರಿಕತೆ ಅಧ್ಯಯನ ಮಾಡಿದಾಗ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಇತ್ತು. ನಂತರದ ದಿನಗಳಲ್ಲಿ ಆಧುನಿಕ ಮತ್ತು ರಾಜಾಳ್ವಿಕೆಯಲ್ಲಿ ಪುರುಷ ಪ್ರಧಾನ ಭಾರತವಾಗಿದೆ ಎಂದರು.

ಈ ವೇಳೆ ಸಾಧನೆ ಮಾಡಿದ ಮಹಿಳಾ ಶಿಕ್ಷಕಿಯರಿಗೆ ಮಹಿಳಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಭೀಮಪ್ಪ, ಸೌಮ್ಯ, ಜಿಲ್ಲಾ ಅಧ್ಯಕ್ಷೆ ಸರಸ್ವತಮ್ಮ, ಸಹ ಕಾರ್ಯದರ್ಶಿ ರೇಖಾ, ಜಸ್ಸೀಲಾ, ಮಂಜುನಾಥ್, ಸಿಆರ್‌ಪಿ ನಂಜುಂಡಯ್ಯ, ಲೇಪಾಕ್ಷಿ, ಪ್ರಮೋದ್, ಯಶವಂತ್, ಪ್ರಶಾಂತ್, ಲಿಂಗರಾಜು ಇದ್ದರು.

ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗಿ

ಕಾರ್ಯಕರ್ತರಿಗೆ ವರುಣ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಮಹದೇವಸ್ವಾಮಿ ಕರೆ



ತಿ.ನರಸೀಪುರ, ಏ.5– ಬಿಜೆಪಿ ಕಾರ್ಯಕರ್ತರು ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ಗ್ರಾಪಂ, ತಾಪಂ, ಜಿಪಂ, ಪುರಸಭೆ ಚುನಾವಣೆಗೆ ಸಜ್ಜಾಗಬೇಕು ಎಂದು ವರುಣ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ ಕರೆ ನೀಡಿದರು.

ವರುಣ ವಿಧಾನಸಭಾ ಕ್ಷೇತ್ರದ ಭೈರಾಪುರ ಶಕ್ತಿ ಕೇಂದ್ರದ ಬೂತ್ ಅಧ್ಯಕ್ಷರ ಪದಾಧಿಕಾರಿಗಳ ಪಟ್ಟಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿಜೆಪಿ ರಾಜ್ಯಾಧ್ಯಕ್ಷರ ಸೂಚನೆಯಂತೆ ಪಕ್ಷವನ್ನು ಬೂತ್ ಮಟ್ಟದಿಂದ ಸಂಘಟಿಸಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲು ಕಾರ್ಯತಂತ್ರ ರೂಪಿಸಬೇಕು. ಅಲ್ಲದೇ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು ಸಾಧಿಸಲು ಪಣ ತೊಡಬೇಕು ಎಂದರು.

ಈ ಬಾರಿ ವರುಣದಲ್ಲಿ ಜಿಪಂ, ಗ್ರಾಪಂ, ತಾಪಂ, ಗ್ರಾಪಂ ಚುನಾವಣೆಯಲ್ಲಿ ಯಾರೇ ಅಭ್ಯರ್ಥಿಯಾದರೂ ಅವರ ಪರ ಕೆಲಸ ಮಾಡಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಬೇಕು ಎಂದರು.

ಮೈಸೂರು ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮಾತನಾಡಿ, ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ವರುಣ ಕ್ಷೇತ್ರ ಬಿಜೆಪಿ ವಶವಾಗುವಂತೆ ಮಾಡೋಣ. ಇದಕ್ಕೆ ಎಲ್ಲಾ ವರ್ಗದ ಜನರು ಕೈಜೋಡಿಸಬೇಕು ಎಂದರು.

> ಈ ಬಾರಿ ಯುವಕರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಮುಂಬರುವ ಯಾವುದೇ ಚುನಾವಣೆಯಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡುವ ಮೂಲಕ ನಮ್ಮ ಶಕ್ತಿ ಏನೆಂದು ತೋರಿಸೋಣ. ವರುಣ ಹಾಗೂ ತಿ.ನರಸೀಪುರ ಕ್ಷೇತ್ರದಲ್ಲಿ 2028ಕ್ಕೆ ಬಿಜೆಪಿ ಬಾವುಟ ಹಾರಿಸಬೇಕು. ಇದಕ್ಕಾಗಿ ಬೂತ್ ಅಧ್ಯಕ್ಷರು ಮತದಾರರಿಗೆ ಕಾಂಗ್ರೆಸ್ ಭ್ರಷ್ಟಾಚಾರದ ಬಗ್ಗೆ ಮನವರಿಕೆ ಮಾಡಿಕೊಡಬೇಕು.
> **–ಮಹೇಶ್, ವಿಜಯೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ.**

ಈ ವೇಳೆ ಆಲಗೂಡು ಮುದ್ದುಕೃಷ್ಣ, ಭೈರಾಪುರ ಶಕ್ತಿ ಕೇಂದ್ರದ ಅಧ್ಯಕ್ಷ ನಂದೀಶ್, ಪ್ರಧಾನ ಕಾರ್ಯದರ್ಶಿ ವಿಜಯ ಕುಮಾರ್, ಪ್ರಕಾಶ, ಜಗದೀಶ, ಪ್ರದೀಪ್, ದಿಲೀಪ್, ಬಾಲರಾಜ್, ಪ್ರಶಾಂತ್, ರಜತ್, ಮಂಜುನಾಥ್, ಕೇಬಲ್ ಸುರೇಶ್, ಹೆಚ್.ಎಸ್.ಮೂರ್ತಿ, ಎಲ್‌ಐಸಿ ಸೋಮಶೇಖರ್, ಅಡುಗೆ ಪ್ರಭು, ಬಜ್ಜಿ ನಿಂಗಪ್ಪ, ಆಲಗೂಡು ಮಾದು, ಕೃಷ್ಣ, ಅಶೋಕ, ಎಂ.ಪ್ರದೀಪ, ಅದೃಷ್ಟ ಮಾದಪ್ಪ ಮೋಹನ್, ಮಣಿಕಂಠರಾಜುಗೌಡ, 19 ಬೂತ್ ಅಧ್ಯಕ್ಷರು ಹಾಜರಿದ್ದರು.

ಬಸವಮಾರ್ಗ ಫೌಂಡೇಷನ್‌ನ ಉಚಿತ ವಸತಿನಿಲಯದಲ್ಲಿ ಒಟ್ಟು 100 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಗುರಿ

ಹಾಸ್ಟೆಲ್ ವಿದ್ಯಾರ್ಥಿಗಳಿಂದ ಸನ್ಮಾನ ಸ್ವೀಕರಿಸಿ ಸಂಸ್ಥಾಪಕ ಎಸ್.ಬಸವರಾಜು ಘೋಷಣೆ

ಮೈಸೂರು,ಏ.5(ಪಿಎಂ)– ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಬಸವಮಾರ್ಗ ಫೌಂಡೇಷನ್‌ನ ಉಚಿತ ವಸತಿನಿಲಯವನ್ನು 100 ವಿದ್ಯಾರ್ಥಿಗಳಿಗೆ ವಿಸ್ತರಿಸುವ ಗುರಿ ಹೊಂದಲಾಗಿದೆ ಎಂದು ಫೌಂಡೇಷನ್ ಸಂಸ್ಥಾಪಕ ಎಸ್.ಬಸವರಾಜು ಹೇಳಿದರು.

ನಗರದ ಸರಸ್ವತಿಪುರಂನಲ್ಲಿರುವ ಬಸವಮಾರ್ಗ ಫೌಂಡೇಷನ್‌ನ ಉಚಿತ ವಸತಿ ನಿಲಯದಲ್ಲಿ ಭಾನುವಾರ ಆಯೋಜಿಸಿದ್ದ ಕೃತಜ್ಞತಾ ಕಾರ್ಯಕ್ರಮದಲ್ಲಿ ವಸತಿನಿಲಯ ಮಕ್ಕಳಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಬಸವಮಾರ್ಗ ಫೌಂಡೇಷನ್ ವ್ಯಸನಮುಕ್ತ ಸಮಾಜ ನಿರ್ಮಾಣ ಕನಸು ಹೊತ್ತು ಕಳೆದ ಆರು ವರ್ಷಗಳಿಂದ ಸಮಾಜ ಸೇವೆ ಮಾಡಿಕೊಂಡು ಬರುತ್ತಿದೆ. ಈ ನಿಟ್ಟಿನಲ್ಲಿ ವ್ಯಸನಕ್ಕೆ ದಾಸರಾದ ಪಾಲಕರ ಮಕ್ಕಳು ಮತ್ತು ಬಡ ಮಕ್ಕಳಿಗೆ ಶೈಕ್ಷಣಿಕ ಪ್ರಗತಿಗೆ ಏನಾದರೂ ಕೊಡುಗೆ ನೀಡಬೇಕೆಂದು ಕುಕ್ಕರಹಳ್ಳಿ ಸರ್ಕಾರಿ ಶಾಲೆಯನ್ನು ದತ್ತು ಪಡೆಯಲಾಯಿತು. ಆ ಶಾಲೆಗೆ ದೂರದ ಊರುಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಈ ಪ್ರಯಾಣ ಮಕ್ಕಳ ಓದಿಗೆ ಅಡಚಣೆಯಾಗಿತ್ತು ಎಂದರು.

ಈ ಹಿನ್ನೆಲೆಯಲ್ಲಿ ಆ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ವಸತಿ ನಿಲಯ ಸ್ಥಾಪಿಸುವ ಕಲ್ಪನೆ ಬಂದಾಗ, ಬಸವಮಾರ್ಗ ಉಚಿತ ವಸತಿನಿಲಯ ತಲೆ ಎತ್ತಿ ನಿಂತಿತು. ಈಗ ಕುಕ್ಕರಹಳ್ಳಿ ಶಾಲೆಯ ವಿದ್ಯಾರ್ಥಿಗಳು ಸೇರಿದಂತೆ ಬೇರೆ, ಬೇರೆ ಶಾಲೆಯ ವಿದ್ಯಾರ್ಥಿಗಳು ನಮ್ಮಲ್ಲಿ ವಸತಿ ಪಡೆದು ವ್ಯಾಸಂಗ ಮಾಡುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿಗಳಿಗೆ ವಸತಿ ನಿಲಯ ಕಲ್ಪಿಸಿದಂತೆ ವಿದ್ಯಾರ್ಥಿನಿಯರಿರ ಓದಿಗೂ ಪೂರಕವಾಗುವಂತೆ ಬಸವಮಾರ್ಗ ಸಂಸ್ಥೆಯಿಂದ ಬಸ್ ವ್ಯವಸ್ಥೆ ಮಾಡಿಕೊಡಲಾಗಿದೆ. ಕುಕ್ಕರಹಳ್ಳಿ ಶಾಲೆಗೆ ದೂರದ ಊರುಗಳಿಂದ ಹೆಣ್ಣು ಮಕ್ಕಳು ಬರುತ್ತಿದ್ದರು. ಸರಿಯಾದ ಸಮಯಕ್ಕೆ ಬಸ್ ಬಾರದೇ ಅವರ ಓದಿಗೆ ತೊಂದರೆಯಾಗುತ್ತಿತ್ತು. ಇದನ್ನು ಮನಗಂಡು ಸಂಸ್ಥೆಯಿಂದ ಹೆಣ್ಣುಮಕ್ಕಳಿಗೆಂದೇ ಬಸ್ ಕೊಡುಗೆ ನೀಡಿ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ. ನಿತ್ಯ ಈ ಬಸ್ ಗ್ರಾಮಾಂತರ ಭಾಗದ ವಿದ್ಯಾರ್ಥಿನಿಯರನ್ನು ಶಾಲೆಗೆ ಕರೆದುಕೊಂಡು ಬಂದು ಶಾಲೆ ಬಿಟ್ಟ ಮೇಲೆ ಮತ್ತೆ ಅವರನ್ನು ಮನೆಗೆ ಬಿಡುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದೆ. ವಿದ್ಯಾರ್ಥಿನಿಯರಿಗೂ ವಸತಿ ನಿಲಯ ಸ್ಥಾಪನೆ ಮಾಡಬೇಕು ಎನ್ನುವ ಒತ್ತಾಯ ಕೇಳಿ ಬರುತ್ತಿದೆ. ಮುಂದಿನ ದಿನಗಳಲ್ಲಿ ಅವರಿಗೂ ವಸತಿ ನಿಲಯ ಸ್ಥಾಪನೆ ಮಾಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.



ಮೈಸೂರಿನ ಸರಸ್ವತಿಪುರಂನಲ್ಲಿರುವ ಬಸವಮಾರ್ಗ ಫೌಂಡೇಷನ್‌ನ ಉಚಿತ ವಸತಿನಿಲಯದಲ್ಲಿ ಭಾನುವಾರ ಎಸ್.ಬಸವರಾಜು ಅವರನ್ನು ಸನ್ಮಾನಿಸಲಾಯಿತು.

ಬಸವಮಾರ್ಗ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳ ಓದಿಗೆ ಪೂರಕವಾಗಿ ಒಂದೊಂದು ವಿಷಯಕ್ಕೂ ಶಿಕ್ಷಕರನ್ನು ನೇಮಿಸಿಕೊಂಡು ಅವರ ಮೂಲಕ ಟ್ಯೂಷನ್ ಕೊಡಿಸಲಾಗುತ್ತಿದೆ. ನಮ್ಮ ವಸತಿ ನಿಲಯಕ್ಕೆ ದಾಖಲಾದ ಮೇಲೆ ವಿದ್ಯಾರ್ಥಿಗಳು ಪ್ರತಿ ಹಂತದ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಂದ ತೇರ್ಗಡೆಯಾಗುತ್ತಿದ್ದಾರೆ. ಇದರಿಂದ ಶಾಲೆಗೂ ಉತ್ತಮ ಹೆಸರು ಬರುತ್ತಿದೆ. ವಸತಿ ನಿಲಯದ ಈ ಸಾಲಿನ ಶೈಕ್ಷಣಿಕ ವಿದ್ಯಾರ್ಥಿಗಳು ಮುಂದಿನ ಹಂತಗಳಿಗೆ ಹೋಗುವ ವಿದ್ಯಾರ್ಥಿಗಳು ಕೃತಜ್ಞತಾ ಕಾರ್ಯಕ್ರಮ ಹಮ್ಮಿಕೊಂಡಿರುವುದು ಹರ್ಷ ತಂದಿದೆ ಎಂದು ಸಂತಸ ವ್ಯಕ್ತಪಡಿಸಿದರು.

ನಮ್ಮ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸುವುದರೊಂದಿಗೆ ಮುಂದಿನ ದಿನಗಳಲ್ಲಿ ಶ್ರೇಷ್ಠ ವ್ಯಕ್ತಿತ್ವದೊಂದಿಗೆ ಪ್ರಗತಿ ಸಾಧಿಸಬೇಕು. ಆ ಮೂಲಕ ದೇಶಕ್ಕೆ ಕೀರ್ತಿ ತರುವ ಕೆಲಸ ಮಾಡಬೇಕು ಎಂದು ಶುಭಕೋರಿದರು. ಶಿಕ್ಷಕರಾದ ನಿರಂಜನ್ ರಾಜೇ ಅರಸ್, ಡಾ. ಸುನೀಲ್ ಪಿ.ರಾಜ್, ಪುನಿತಾ, ಕೌಸಲ್ಯ, ವಾರ್ಡನ್ ಜೀವನ್, ಮಕ್ಕಳು ಮತ್ತು ಪೋಷಕರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬೈಕರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲೀಡರ್ (ತ) + ಕಾಳಿದಾಸ–2 (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಫಸ್ಟ್ ನೈಟ್ ವಿತ್ ದೆವ್ವ (ಕ)	4 ಪ್ರದರ್ಶನಗಳು

ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಕುಲಸಚಿವರಾಗಿ ಕುಸುಮಾಕುಮಾರಿ ನೇಮಕ

ಮೈಸೂರು,ಏ.5(ಎಂಟಿವೈ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಆಡಳಿತ ಕುಲಸಚಿವರಾಗಿ ಕೆಎಎಸ್ ಅಧಿಕಾರಿ ಎಸ್.ಕುಸುಮ ಕುಮಾರಿ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.



ಈ ಹಿಂದೆ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರಾಗಿದ್ದ ಪ್ರೊ.ಎಸ್.ಕೆ.ನವೀನ್ ಕುಮಾರ್ ಅವರನ್ನು ಮಂಗಳೂರು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾಗಿ ಮರು ನಿಯೋಜನೆಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ತೆರವಾಗಿದ್ದ ಸ್ಥಾನಕ್ಕೆ ಸ್ಥಳದ ನಿರೀಕ್ಷೆಯಲ್ಲಿದ್ದ ಕೆಎಎಸ್ ಅಧಿಕಾರಿ ಎಸ್.ಕುಸುಮಕುಮಾರಿ ಅವರನ್ನು ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಈ ಹಿಂದೆ ಕುಲಸಚಿವರಾಗಿದ್ದ ಪ್ರೊ.ಕೆ.ಬಿ.ಪ್ರವೀಣ್ ಅವರ ವರ್ಗಾವಣೆ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ನವೀನ್ ಕುಮಾರ್ ಅವರನ್ನು ಏಳು ತಿಂಗಳ ಹಿಂದೆ ಕುಲಸಚಿವರಾಗಿ ನೇಮಕ ಮಾಡಲಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯದಲ್ಲಿ ನೇಮಕ ಪ್ರಕ್ರಿಯೆ ಸೇರಿದಂತೆ ಕೆಲವು ಆರೋಪ ಕೇಳಿ ಬಂದಿತ್ತು ನ್ಯಾಯಮೂರ್ತಿ ಪಾಟೀಲ ಅವರ ನೇತೃತ್ವದ ಸಮಿತಿ ವಿಚಾರಣೆ ನಡೆಸುತ್ತಿರುವಾಗಲೇ ನವೀನ್ ಕುಮಾರ್ ಅವರನ್ನು ವರ್ಗ ಮಾಡಲಾಗಿದೆ.

ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕೆಎಎಸ್ ಅಧಿಕಾರಿಗಳನ್ನೇ ಕುಲಸಚಿವರನ್ನಾಗಿ ನೇಮಿಸುವ ಪದ್ಧತಿ ಇದ್ದರೂ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರನ್ನೇ ಕುಲಸಚಿವರಾಗಿ ನೇಮಕ ಮಾಡಲಾಗುತ್ತಿತ್ತು. ಆದರೆ ಇದೀಗ ಎರಡು ದಶಕದ ನಂತರ ಕೆಎಎಸ್ ಅಧಿಕಾರಿಯನ್ನೇ ಕುಲಸಚಿವರಾಗಿ ನಿಯೋಜಿಸಲಾಗಿದೆ.

ಕುಸುಮಾಕುಮಾರಿ ಅವರು 2006ನೇ ಬ್ಯಾಚ್‌ನ ಕೆಎಎಸ್ ಅಧಿಕಾರಿ. ಮೈಸೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದರು. ನಂತರ ನಗರ ಪಾಲಿಕೆ ವಲಯ 6ರ ಸಹಾಯಕ ಆಯುಕ್ತರಾಗಿದ್ದರು. ಬಳಿಕ ಕಬಿನಿ ಭೂಸ್ವಾಧೀನ ಅಧಿಕಾರಿಯಾಗಿ ನೇಮಿಸಲಾಗಿತ್ತು. ಮೈಸೂರು ಮಹಾನಗರ ಪಾಲಿಕೆ ಹೆಚ್ಚುವರಿ ಆಯುಕ್ತರೂ ಆಗಿದ್ದರು. ಒಂದು ತಿಂಗಳ ಹಿಂದೆಯೇ ಮೈಸೂರು ಮಹಾ ನಗರಪಾಲಿಕೆ ಹೆಚ್ಚುವರಿ ಆಯುಕ್ತರ ಹುದ್ದೆಯಿಂದ ಬಿಡುಗಡೆಯಾಗಿ ಹುದ್ದೆಗಾಗಿ ಕಾಯುತ್ತಿದ್ದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವರಾಗಿ ಸರ್ಕಾರ ನೇಮಕ ಮಾಡಿರುವ ಆದೇಶ ಶನಿವಾರವೇ ಕೈ ಸೇರಿದೆ. ಭಾನುವಾರ ರಜೆ ಇದ್ದುದರಿಂದ ಸೋಮವಾರ ಅಧಿಕಾರ ವಹಿಸಿಕೊಳ್ಳುತ್ತೇನೆ. ಹಿಂದೆ ಮೈಸೂರಿನ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದೇನೆ ಎಂದು ಎಸ್. ಕುಸುಮಾ ಕುಮಾರಿ ತಿಳಿಸಿದರು.

ಇಸ್ಪೀಟ್ ಅಡ್ಡೆ ಮೇಲೆ ಪೊಲೀಸ್ ದಾಳಿ; 2.04 ಲಕ್ಷ ವಶಕ್ಕೆ

ಮತ್ತೊಂದು ಪ್ರಕರಣ ಸೇರಿ 10 ಮಂದಿ ವಿರುದ್ಧ ಪ್ರಕರಣ ದಾಖಲು



ವಾಟಾಳು ಗ್ರಾಮದ ಜಮೀನಿನೊಂದರಲ್ಲಿ ಇಸ್ಪೀಟ್ ಅಡ್ಡೆ ಮೇಲೆ ಪೊಲೀಸರು ದಾಳಿ ನಡೆಸಿರುವುದು.

ಮೈಸೂರು,ಏ.5(ಪಿಎಂ)– ಟಿ.ನರಸೀಪುರ ತಾಲೂಕಿನ ವಾಟಾಳು ಗ್ರಾಮದ ಜಮೀನಿನೊಂದರಲ್ಲಿ ಇಸ್ಪೀಟ್ ಅಡ್ಡೆ ಮೇಲೆ ದಾಳಿ ನಡೆಸಿದ ಜಿಲ್ಲಾ ವಿಶೇಷ ಅಪರಾಧ ತಂಡ ಮತ್ತು ಟಿ.ನರಸೀಪುರ ಪೊಲೀಸ್ ತಂಡ ಪಣಕ್ಕಿಟ್ಟಿದ್ದ ಒಟ್ಟು 2,04,000 ರೂ. ವಶಕ್ಕೆ ಪಡೆದು, ಐವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದೆ.

ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಶನಿವಾರ ಈ ದಾಳಿ ನಡೆಸಲಾಯಿತು. ಮತ್ತೊಂದು ಪ್ರಕರಣದಲ್ಲಿ ಭಾನುವಾರ ತಾಲೂಕಿನ ರಾಮೇಗೌಡಪುರದಲ್ಲಿ ಇಸ್ಪೀಟ್ ಅಡ್ಡೆ ಮೇಲೆ ಟಿ.ನರಸೀಪುರ ಪೊಲೀಸರು ದಾಳಿ ನಡೆಸಿ ಪಣಕ್ಕಿಟ್ಟಿದ್ದ 10 ಸಾವಿರ ರೂ. ವಶಪಡಿಸಿಕೊಂಡು, ಐವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮಾಹಿತಿ ನೀಡಿ: ಜಿಲ್ಲೆಯಾದ್ಯಂತ ಜೂಜಾಟ ಮತ್ತು ಇತರೆ ಅಕ್ರಮ ಚಟುವಟಿಕೆಗಳನ್ನು ನಿಯಂತ್ರಿಸಲು ವಿಶೇಷ ಕಾರ್ಯಚರಣೆಯನ್ನು ಮತ್ತಷ್ಟು ತೀವ್ರಗೊಳಿಸಿದ್ದು, ಇಸ್ಪೀಟ್, ಜೂಜು, ಕ್ರಿಕೆಟ್ ಬೆಟ್ಟಿಂಗ್, ಗಾಂಜಾ ಇತರೆ ಮಾದಕವಸ್ತುಗಳ ಮಾರಾಟ ಮತ್ತು ಮದ್ಯ ಮಾರಾಟ ಮಾಡುವವರ ಬಗ್ಗೆ ಮಾಹಿತಿಗಳನ್ನು ಸಾರ್ವಜನಿಕರು ನಿಮ್ಮ ಹತ್ತಿರದ ಪೊಲೀಸ್ ಠಾಣೆಗೆ ಕರೆ ಮಾಡಿ ನೀಡುವಂತೆ ಜಿಲ್ಲಾ ಪೊಲೀಸ್ ವತಿಯಿಂದ ಕೋರಲಾಗಿದೆ.

ಎಫ್‌ಎಸ್‌ಎಸ್‌ಎಐ ಪರವಾನಗಿ, ನೋಂದಣಿ ಸಂಬಂಧ ತಿದ್ದುಪಡಿಗೆ ಸ್ವಾಗತ

ಮೈಸೂರು,ಏ.5(ಪಿಎಂ)– ಇದೇ ಏ.1ರಿಂದ ಜಾರಿಗೆ ಬಂದಿರುವ ಆಹಾರ ಸುರಕ್ಷತೆ ಮತ್ತು ಮಾನದಂಡಗಳ (ಪರವಾನಗಿ ಮತ್ತು ನೋಂದಣಿ) ತಿದ್ದುಪಡಿ ನಿಯಮಗಳು–2026ರಂತೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ಪರವಾನಗಿ ಹಾಗೂ ನೋಂದಣಿಗಳು ಶಾಶ್ವತ ಮಾನ್ಯತೆ ಹೊಂದಿರಲಿವೆ. ಈ ತಿದ್ದುಪಡಿ ಆದೇಶವನ್ನು ಹೋಟೆಲ್ ಮಾಲೀಕರು ಸ್ವಾಗತಿಸುತ್ತೇವೆ ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಸ್ವಾಗತಿಸಿದ್ದಾರೆ.



ಭಾರೀ ನಿರೀಕ್ಷೆಯಲ್ಲಿದ್ದ 2026ರ ತಿದ್ದುಪಡಿಯಿಂದಾಗಿ ಎಫ್‌ಎಸ್‌ಎಸ್‌ಎಐ ಪರವಾನಗಿಗಳು–ನೋಂದಣಿಗಳು ಈಗ ಶಾಶ್ವತ ಮಾನ್ಯತೆ ಹೊಂದಿವೆ. ರದ್ದು, ಅಮಾನತು ಅಥವಾ ತ್ಯಜಿಸದ ಹೊರತು ಮಾನ್ಯವಾಗಿರುತ್ತವೆ. ಒಮ್ಮೆ ಆಹಾರ ಸುರಕ್ಷತೆ ಎಲ್ಲಾ ತರಹದ ಪರವಾನಗಿಗಳನ್ನು (ಲೈಸನ್ಸ್) ಪಡೆದರೆ ಮತ್ತೆ ನವೀಕರಣದ ಅಗತ್ಯವಿಲ್ಲವೆಂದು ಆದೇಶವಾಗಿದೆ. ಈ ಹಿಂದೆ ಪ್ರತಿವರ್ಷ ನವೀಕರಣ ಮಾಡಬೇಕಾಗಿತ್ತು ಎಂದು ತಿಳಿಸಿದ್ದಾರೆ.

ನೋಂದಣಿ ಸಂಬಂಧ ರಾಜ್ಯ ಮತ್ತು ಕೇಂದ್ರ ಪರವಾನಗಿಗೆ ವಹಿವಾಟು ಮಿತಿಗಳನ್ನು ಪರಿಷ್ಕರಿಸಲಾಗಿವೆ. 1 ಏಪ್ರಿಲ್ 2026ರಿಂದ ಹೊಸ ಅರ್ಜಿಗಳ ನೋಂದಣಿಗೆ ವಾರ್ಷಿಕ ವಹಿವಾಟು 1.5 ಕೋಟಿವರೆಗೆ ಬೇಕಾಗಿಲ್ಲ. ಈ ಹಿಂದೆ ವಾರ್ಷಿಕ ಮಿತಿ 12 ಲಕ್ಷಗಳಿಗೆ ಸೀಮಿತವಾಗಿತ್ತು. ವಾರ್ಷಿಕ 12 ಲಕ್ಷ ವ್ಯಾಪಾರವಾದರೆ ಎಫ್‌ಎಸ್‌ಎಸ್‌ಎಐ ಪರವಾನಗಿ ಪಡೆಯಬೇಕಾಗಿತ್ತು. ಹೊಸ ಆದೇಶದ ಪ್ರಕಾರ ಈಗ ವಾರ್ಷಿಕ 1.5 ಕೋಟಿವರೆಗೆ ಪರವಾನಗಿ ಅಗತ್ಯವಿಲ್ಲ. ಆದರೆ ರಿಜಿಸ್ಟರ್ ಹಾಗೂ ಎನ್‌ರೋಲ್ ಅಗತ್ಯವಾಗುತ್ತದೆ. 1.5 ಕೋಟಿಗಿಂತ ಹೆಚ್ಚು ಮತ್ತು 50 ಕೋಟಿಯವರೆಗೆ ರಾಜ್ಯ ಪರವಾನಗಿ ಹಾಗೂ 50 ಕೋಟಿಗಿಂತ ಹೆಚ್ಚು ಇದ್ದರೆ ಕೇಂದ್ರದ ಎಫ್‌ಎಸ್‌ಎಐ ಪರವಾನಗಿ ಪಡೆಯಬೇಕಾಗುತ್ತದೆ.


ಅಸ್ತಿತ್ವದಲ್ಲಿರುವ ವ್ಯವಹಾರಗಳಿಗೆ ಹೊಸ ಮಿತಿಗಳಿಗೆ ಹೊಂದಿಕೆಯಾಗಲು ವಲಸೆಗೆ ಅವಕಾಶ ನೀಡಲಾಗುತ್ತದೆ. ಪರವಾನಗಿ ಪ್ರಾಧಿಕಾರಗಳ ವ್ಯಾಪ್ತಿ ಬದಲಾಗುವುದಿಲ್ಲ. ಶಾಶ್ವತ ಮಾನ್ಯತೆ ಎಂದರೆ ನವೀಕರಣ ಅಗತ್ಯವಿಲ್ಲ. ಆದರೂ ಸ್ವಚ್ಛತೆ, ಸುರಕ್ಷತಾ ನಿಯಮಗಳನ್ನು ಪಾಲಿಸಬೇಕು. ಒಟ್ಟಾರೆ ಈ ತಿದ್ದುಪಡಿ ಆದೇಶದಿಂದ ಅತಿಯಾದ ಕಿರುಕುಳ ತಪ್ಪಿದಂತಾಗಿದೆ ಎಂದು ಹೇಳಬಯಸುತ್ತಾ ಮೈಸೂರು ಹೋಟೆಲು ಮಾಲೀಕರ ಸಂಘ ಇದನ್ನು ಸ್ವಾಗತಿಸುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಂತಿದ್ದ ಖಾಸಗಿ ಬಸ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ಇಬ್ಬರು ಸಾವು, 35 ಮಂದಿಗೆ ಗಾಯ

ತುಮಕೂರು: ರಸ್ತೆ ಬದಿ ನಿಂತಿದ್ದ ಖಾಸಗಿ ಬಸ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿಯಾಗಿ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿ, 35ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿರುವ ಘಟನೆ ಜಿಲ್ಲೆಯ ಶಿರಾ ಹೊರವಲಯದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ(ಎನ್‌ಹೆಚ್–48) ಸಂಭವಿಸಿದೆ.

ಖಾಸಗಿ ಬಸ್‌ನಲ್ಲಿದ್ದ ಶಿಗ್ಗಾವಿ ಪಟ್ಟಣದ ಪ್ರವೀಣ್(16) ಹಾಗೂ ರೋಣ ತಾಲೂಕಿನ ಸಂಗೀತಾ(16) ಸ್ಥಳದಲ್ಲೇ ಸಾವನ್ನಪ್ಪಿದ್ದು, ಎರಡೂ ಬಸ್‌ಗಳಲ್ಲಿದ್ದ ಸುಮಾರು 35 ಮಂದಿ ಗಾಯಗೊಂಡಿದ್ದಾರೆ. ಈ ಸಂಬಂಧ ಶಿರಾ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿ.ನರೇಂದ್ರರಿಗೆ ಜನ್ಮದಿನ...



ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಅಖಿಲ ಕರ್ನಾಟಕ ಡಾ.ಎಂ.ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ರಾಜ್ಯಾಧ್ಯಕ್ಷ ಸಿ.ನರೇಂದ್ರ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ಹಿನಕಲ್ ಮಂಜು, ಮೈಸೂರು ಜಿಲ್ಲಾ ಗ್ರಾಮಾಂತರ ಪರಿಶಿಷ್ಟ ಪಂಗಡ ವಿಭಾಗದ ಜಿಲ್ಲಾಧ್ಯಕ್ಷ ನಾಗವಾಲ ಮಹೇಶ್, ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಸದಸ್ಯ ಚಿಕ್ಕನಹಳ್ಳಿ ಸಂತೋಷ್, ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ಕಮ್ಮರವಲ್ಲಿ ಸಂತೋಷ್ ಸೇರಿದಂತೆ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಏ.5–ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಮೈಸೂರಿನ ಆಲನಹಳ್ಳಿಯ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ವತಿಯಿಂದ ಆರೋಗ್ಯ ತಪಾಸಣಾ ಶಿಬಿರವನ್ನು, ಏ.7 ರಿಂದ ಮೇ 7 ರವರೆಗೆ ಒಂದು ತಿಂಗಳ ಕಾಲ ಪ್ರತಿದಿನ ಬೆಳಗ್ಗೆ 9.30 ರಿಂದ ಸಂಜೆ4.30 ರವರೆಗೆ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಡಾ .ದೀಪಾ.ಸಿ. ಪಾಟೀಲ್ ಮೊ: 9886485005, ಡಾ.ಬೀನಾ.ಎಂ.ಡಿ. ಮೊ:9538367282, ಆಸ್ಪತ್ರೆ ದೂರವಾಣಿ 0821–2548231, 2548433 ಮೂಲಕ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ಏ.19ರಿಂದ ಎರಡು ದಿನ ಬಸವ ಜಯಂತಿ; ಎರಡು ಪ್ರಚಾರ ವಾಹನಕ್ಕೆ ಚಾಲನೆ



ಮೈಸೂರಿನ ಬಸವೇಶ್ವರರ ಪ್ರತಿಮೆ ಆವರಣದ ಸಮೀಪ ಬಸವ ಜಯಂತಿ ಕುರಿತಂತೆ ಎರಡು ಪ್ರಚಾರ ವಾಹನಗಳಿಗೆ ಚಾಲನೆ ನೀಡಲಾಯಿತು.

ಮೈಸೂರು,ಏ.5(ಪಿಎಂ)– ಬಸವ ತತ್ವಗಳ ಪ್ರಸಾರ ಹಾಗೂ ಸಮಾಜದ ಏಕತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಬಸವ ಜಯಂತಿ–2026 ಅನ್ನು ಏ.19 ಮತ್ತು 20ರಂದು ಮೈಸೂರಿನ ಕಲಾಮಂದಿರದಲ್ಲಿ ಅರ್ಥಪೂರ್ಣ ಮತ್ತು ವೈಶಿಷ್ಟ್ಯಪೂರ್ಣವಾಗಿ ಆಚರಿಸಲು ಬಸವ ಬಳಗಗಳ ಒಕ್ಕೂಟ– ಮೈಸೂರು ನಗರ ಹಾಗೂ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಕೈಗೊಂಡಿದ್ದು, ಭಾನುವಾರ ನಗರ ಪ್ರಚಾರ ಸಮಿತಿಯಿಂದ ಪ್ರಚಾರ ವಾಹನಕ್ಕೆ ಚಾಲನೆ ನೀಡಲಾಯಿತು.

ಈ ಬಾರಿಯ ಬಸವ ಜಯಂತಿಯು 'ನಮ್ಮ ಬಸವಣ್ಣ ಸಾಂಸ್ಕೃತಿಕ ನಾಯಕ' ಶೀರ್ಷಿಕೆಯಡಿ ನಡೆಯಲಿದ್ದು, ಮೈಸೂರು ನಗರ ಪ್ರಚಾರ ಸಮಿತಿಯ ಅಧ್ಯಕ್ಷ ಜೀವಧಾರ ಗಿರೀಶ್ ನೇತೃತ್ವದಲ್ಲಿ ಕುದೇರು ಮಠದ ಕಿರಿಯ ಶ್ರೀಗಳ ಸಮ್ಮುಖದಲ್ಲಿ ಹಾಗೂ ಬಸವ ಜಯಂತಿ ಅಧ್ಯಕ್ಷ ಎಂ.ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ಮೈಸೂರಿನ ಬಸವೇಶ್ವರರ ಪ್ರತಿಮೆ ಆವರಣದ ಸಮೀಪ ಎರಡು ಪ್ರಚಾರ ವಾಹನಗಳಿಗೆ ಚಾಲನೆ ನೀಡಲಾಯಿತು.

ಇದೇ ವೇಳೆ ಮಾತನಾಡಿದ ಪ್ರಚಾರ ಸಮಿತಿ ಅಧ್ಯಕ್ಷ ಗಿರೀಶ್, ಬಸವಣ್ಣನವರ ಸಂದೇಶ ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ, ಅದು ಇಡೀ ಸಮಾಜದ ಪರಿವರ್ತನೆಗೆ ದಾರಿದೀಪವಾಗಿದೆ. ಈ ಬಾರಿ ಜಯಂತಿಯನ್ನು ಕೇವಲ ಆಚರಣೆಯಾಗಿಯಲ್ಲದೆ, ಚಿಂತನೆ ಮತ್ತು ಜಾಗೃತಿ ಅಭಿಯಾನವಾಗಿ ರೂಪಿಸುತ್ತಿದ್ದೇವೆ. ಮನೆ ಮನೆಗೂ ಬಸವ ತತ್ವಗಳನ್ನು ತಲುಪಿಸುವುದು ನಮ್ಮ ಉದ್ದೇಶ ಎಂದು ಹೇಳಿದರು.

ಬಸವ ಜಯಂತಿ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಸಮಾನತೆ, ನ್ಯಾಯ ಮತ್ತು ಮಾನವೀಯತೆಯ ಮೌಲ್ಯಗಳನ್ನು ಸಾರಿದ ಬಸವಣ್ಣನವರ ಆಶಯಗಳನ್ನು ಇಂದಿನ ಯುವಜನತೆಗೆ ತಲುಪಿಸುವುದು ಅತ್ಯಗತ್ಯ. ಈ ವರ್ಷದ ಕಾರ್ಯಕ್ರಮವನ್ನು ಸಮಾಜದ ಎಲ್ಲ ವರ್ಗಗಳನ್ನೂ ಒಳಗೊಂಡಂತೆ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಸಾಮಾಜಿಕ ಅಂಶಗಳನ್ನು ಒಗ್ಗೂಡಿಸಿ ವೈಭವದಿಂದ ಆಚರಿಸಲಾಗುವುದು ಎಂದು ತಿಳಿಸಿದರು.

ಬಸವ ಜಯಂತಿ–2026 ಮೈಸೂರು ನಗರದಲ್ಲಿ ಕೇವಲ ಹಬ್ಬವಾಗಿ ಅಲ್ಲದೆ, ಬಸವ ತತ್ವಗಳ ಜೀವಂತ ಪ್ರತಿಬಿಂಬವಾಗಿ, ಸಮಾಜದಲ್ಲಿ ಚಿಂತನೆಗೆ ಹೊಸ ದಿಕ್ಕು ನೀಡುವ ಮಹತ್ವದ ವೇದಿಕೆಯಾಗಿ ಮೂಡಿಬರಲಿದ್ದು, ಈ ಪ್ರಚಾರ ಕಾರ್ಯಕ್ರಮವು ಅದರ ಮೊದಲ ಹೆಜ್ಜೆ ಎಂದರು.

ಪ್ರಧಾನ ಕಾರ್ಯದರ್ಶಿ ಎ.ಪಿ.ವಿರೂಪಾಕ್ಷ, ಮೆರವಣಿಗೆ ಸಮಿತಿ ಅಧ್ಯಕ್ಷ ಕೆ.ವಿ.ಮಲ್ಲೇಶ್, ನಿಕಟ ಪೂರ್ವ ಅಧ್ಯಕ್ಷ ಕಾನ್ಯ ಶಿವಮೂರ್ತಿ, ಸಂಚಾಲಕ ಚಿಕ್ಕಹಳ್ಳಿ ದೇವರಾಜು, ಖಜಾಂಚಿ ಜಯಶಂಕರ್ ಜಯಂತಿ ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಇದೇ ವೇಳೆ ವಿವರಿಸಿದರು.

ಪ್ರಚಾರ ಸಮಿತಿ ಉಪಾಧ್ಯಕ್ಷ ಸಿ.ಜಿ. ಮುತ್ತಣ್ಣ, ಪುಷ್ಪಲತಾ, ಬಿ.ಕೆ.ನಾಗರಾಜು, ಶರತ್ ಪುಟ್ಟಬುದ್ಧಿ, ಜಗದೀಶ್ ಲಿಂಗಣ್ಣ, ಸಾಮಾಜಿಕ ಮಾಧ್ಯಮ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್, ಎಸ್.ಎಂ.ಸುರೇಶ್, ಶ್ರೀಕಂಠಮೂರ್ತಿ, ಮಹೇಶ್ ಭಾಗಳಿ, ಬಿ.ಕೆ.ನಾಗರಾಜು, ಪ್ರಸಾದ್ ಬಾಬು, ಎಸ್.ಬಿ.ಟಿ.ಸುರೇಶ್, ಶಿವ ಪ್ರೇರಣ್, ಬಿ.ಆರ್.ಶಿವಕುಮಾರ್, ಕಲ್ಮಳ್ಳಿ ನಟರಾಜು, ಜೆಎಸ್‌ಎಸ್ ಮಹೇಶ್, ಗಜೇಂದ್ರ, ಮೂಗೂರು ನಂಜುಂಡಸ್ವಾಮಿ, ಮಹೇಂದ್ರ ಶೈವ, ಬಿ.ಎಂ. ಪರಮೇಶ್, ಬಿ.ಎಂ ಬಸವರಾಜು, ಡಿ.ಎ.ಪರಶಿವಮೂರ್ತಿ, ದನ್ನಾಸತ್ಯೇಂದ್ರಮೂರ್ತಿ, ರೇಣುಕಾ ರಾಜು, ಹೆಚ್.ಎಸ್.ಸರ್ವಮಂಗಳ, ಮಾಲಿನಿ ಪಾಲಾಕ್ಷ, ಮಲ್ಲಿಕಾ ಮಹದೇವಸ್ವಾಮಿ, ಶಿವಮಣಿ, ಶೈಲಜಾ, ಶಾಂತಮ್ಮ, ಉಮಾ ಪ್ರಕಾಶ್ ಸೇರಿದಂತೆ ಅನೇಕ ಗಣ್ಯರು ಹಾಗೂ ಸಮಾಜದ ಮುಖಂಡರು ಹಾಜರಿದ್ದರು.

ರಕ್ತದಾನಿಗಳು ನಿಜವಾದ ಹೃದಯವಂತರು

ಹಲವು ಬಾರಿ ರಕ್ತದಾನ ಮಾಡಿದ 250ಕ್ಕೂ ಹೆಚ್ಚು ರಕ್ತದಾನಿಗಳಿಗೆ ಸನ್ಮಾನ



ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ನಡೆದ ರಕ್ತಧಾನಿಗಳ ಹಬ್ಬದ ಕಾರ್ಯಕ್ರಮಕ್ಕೆ ಬೇಬಿಮಠದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಚಾಲನೆ ನೀಡಿದರು.

ಪ್ರತ್ಯಕ್ಷ, ಪರೋಕ್ಷವಾಗಿ ರಕ್ತದಾನಿಗಳ ಹಬ್ಬ ಆಚರಣೆಗೆ ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳು. ಸಣ್ಣ ವಸ್ತು ಕೇಳಿದರೂ ಕೊಡದ ಕಾಲಘಟ್ಟದಲ್ಲಿ ಇಷ್ಟೊಂದು ಮಂದಿ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುತ್ತಿರುವುದು ಶ್ಲಾಘನೀಯ. ಅಂತಹವರನ್ನು ಸನ್ಮಾನಿಸುವ ಅವಕಾಶ ಸಿಕ್ಕಿದ್ದು ನನ್ನ ಪುಣ್ಯ.

- ಎಸ್.ಇ.ಗಿರೀಶ್,
ಮ್ಯಾನೇಜಿಂಗ್ ಟ್ರಸ್ಟಿ ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ

ಮೈಸೂರು,ಏ.5(ಎಂಟಿವೈ)– ರಕ್ತದಾನಿಗಳ ಹಬ್ಬದ ಅಂಗವಾಗಿ ಹಲವು ಬಾರಿ ರಕ್ತದಾನ ಮಾಡಿದ 250ಕ್ಕೂ ಹೆಚ್ಚು ರಕ್ತದಾನಿಗಳನ್ನು ಸನ್ಮಾನಿಸಲಾಯಿತು.

ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಭಾನುವಾರ ಲಯನ್ಸ್ ಬ್ಲಡ್ ಸೆಂಟರ್ ಜೀವ ಧಾರ, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್, ಬ್ಲಡ್ ಆನ್ ಕಾಲ್ ಕ್ಲಬ್ ಸಂಯುಕ್ತಾ ಶ್ರಯದಲ್ಲಿ ಆಯೋಜಿಸಿದ್ದ ರಕ್ತದಾನಿಗಳ ಹಬ್ಬದ ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ಬಾರಿ ರಕ್ತದಾನ ಮಾಡಿದ 100 ಮಂದಿ ಸೇರಿದಂತೆ 250ಕ್ಕೂ ಹೆಚ್ಚು ರಕ್ತದಾನಿಗಳನ್ನು ಗೌರವಿಸಿ, ರಕ್ತದಾನಿಗಳನ್ನು ಪ್ರೇರೇಪಿಸಲಾಯಿತು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಬೇಬಿಮಠದ ಪೀಠಾಧಿಪತಿ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಮಾತನಾಡಿ, ಅನ್ನದಾಸೋಹಿಗಳಿಗೆ ದಾಸೋಹ ದಿನ ಎಂದು ಆಚರಿಸುವಂತೆ ರಕ್ತ ನೀಡುವವರಿಗೆ ರಕ್ತದಾನಿಗಳ ದಿನ ಆಚರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರ ಕ್ರಮಕೈಗೊಳ್ಳಬೇಕು. ಒಂದು ಜೀವ ಜೀವಂತವಾಗಿ ಇರಲು ರಕ್ತ ಪ್ರಮುಖ ಪಾತ್ರವಹಿಸುತ್ತದೆ. ಅನ್ನದಾನ ಶ್ರೇಷ್ಠದಾನ, ಮಹಾದಾನ ಎನ್ನುವಂತೆ ರಕ್ತದಾನವೂ ಮುಖ್ಯವಾಗಿದೆ. ರಕ್ತದಾನಿಗಳು ನಿಜವಾದ ಹೃದಯವಂತರಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.

ನಮ್ಮಲ್ಲಿ ಅನೇಕ ಟ್ರಸ್ಟ್‌ಗಳಿದ್ದು ಅವೆಲ್ಲವೂ ಹಣ ಹಾಗೂ ಹೆಸರು ಮಾಡುತ್ತಿವೆ. ಆದರೆ, ಸೇವೆ ಮಾಡುವ ನಿಟ್ಟಿನಲ್ಲಿ ಲಯನ್ಸ್ ಜೀವಧಾರ, ಕೆಎಂಪಿಕೆ ಟ್ರಸ್ಟ್ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಪ್ರಪಂಚದಲ್ಲೇ ಹಂಚಿ ತಿನ್ನುವ ಸಂಸ್ಕೃತಿ ಯನ್ನು ಸನಾತನ ಧರ್ಮ ಹೇಳಿಕೊಟ್ಟಿದೆ. ನಮ್ಮ ದೇಶದಲ್ಲಿ ಸನಾತನ ಧರ್ಮದಲ್ಲಿ ವಿಶಾಲ ಮನೋಭಾವನೆ ಹೊಂದಿದೆ. ಪ್ರಧಾನಿ ನರೇಂದ್ರ ಮೋದಿಯವರು ಪ್ರಪಂಚದ ಆರೋಗ್ಯಕ್ಕಾಗಿ ವಿಶ್ವ ಯೋಗ ದಿನವನ್ನು ಆಚರಿಸುವ ಮೂಲಕ ಎಲ್ಲರಿಗೂ ಆರೋಗ್ಯದ ಜಾಗೃತಿ ಮೂಡಿಸಿದರು. ವಿಶ್ವಕ್ಕೆ ಕಾಳಜಿ ವ್ಯಕ್ತಪಡಿಸುವ ಯಾವುದಾದರೂ ದೇಶ ಇದ್ದರೆ ಅದು ಭಾರತ ಮಾತ್ರ ಎಂದರು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ, ನಾನು 18ವರ್ಷಕ್ಕೂ ಮೊದಲೇ ನಮ್ಮ ಅಜ್ಜಿಗೆ ಮೊದಲನೇ ಬಾರಿಗೆ ರಕ್ತದಾನ ಮಾಡಿದ್ದೆ. ಅದಾದ ಬಳಿಕ ಕಾಲೇಜು ಸಮಯದಲ್ಲಿ 35ಕ್ಕೂ ಹೆಚ್ಚು ಬಾರಿ ರಕ್ತದಾನ ಮಾಡಿದ್ದೇನೆ. ಇದೊಂದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ. ಜೀವಾಧಾರ ಗಿರೀಶ್ ಹೆಸರು ಚಿರಪರಿಚಿತ. ಅಷ್ಟರ ಮಟ್ಟಿಗೆ ರಕ್ತದಾನದ ಮೂಲಕ ಸಮಾಜದಲ್ಲಿ ಗುರುತಿಸಿಕೊಂಡಿದ್ದಾರೆ. ಮನೋಜ್, ವಿಕ್ರಂ ಅಯ್ಯಂಗಾರ್ ಸಹ ಕೇವಲ ರಕ್ತದಾನ ಕಾರ್ಯಕ್ರಮ ಮಾತ್ರವಲ್ಲದೆ, ಹೊದಿಕೆ ವಿತರಣೆ, ಆಹಾರ ವಿತರಣೆ, ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಹೀಗೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸೇವೆ ನೀಡುತ್ತಾ ಬಂದಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಡಿಸಿಪಿ ಕೆ.ಎಸ್. ಸುಂದರ್ ರಾಜ್, ಕಿರುತೆರೆ ನಟಿ ಮೀನಾಕ್ಷಿ, 310 ಬಾರಿ ರಕ್ತದಾನ ಮಾಡಿರುವ ವಿ. ಭೂಪೇಂದ್ರನ್, 275 ಬಾರಿ ರಕ್ತದಾನ ಮಾಡಿರುವ ಎಸ್.ಭಾಸ್ಕರ್ ರಾವ್, ಕೆಪಿಸಿಸಿ ಸದಸ್ಯ ನಜರಬಾದ್ ನಟರಾಜ್, ಲಯನ್ಸ್ ಬ್ಲಡ್ ಸೆಂಟರ್ ಜೀವಾಧಾರ ಸಂಸ್ಥಾಪಕ ಟ್ರಸ್ಟಿ ಲಯನ್ ಮನೋಜ್ ಕುಮಾರ್, ಲಯನ್ಸ್ ಬ್ಲಡ್ ಸೆಂಟರ್ ಜೀವಾಧಾರ ಮ್ಯಾನೇಜಿಂಗ್ ಟ್ರಸ್ಟಿ ಎಸ್.ಇ.ಗಿರೀಶ್, ಎಕಿಕ್ಯೂಟಿವ್ ಟ್ರಸ್ಟಿ ಸಿ.ಜೆ.ಮುತ್ತಣ್ಣ, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಬ್ಲಡ್ ಆನ್ ಕಾಲ್ ಕ್ಲಬ್ ಸಂಸ್ಥಾಪಕರಾದ ದೇವೇಂದ್ರ ಕುಮಾರ್, ಆನಂದ್ ಮಂದೂತ್ ಇನ್ನಿತರರು ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ನಂತರ ಮುಂದೇನು?

ಕಾಡಂಚಿನ ಗ್ರಾಮಗಳ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣ, ವೃತ್ತಿಪರ ಕೌಶಲ್ಯ ಕುರಿತು ಮಾರ್ಗದರ್ಶನ

ಮೈಸೂರು,ಏ.5(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೊಳೆಯೂರು ವಲಯ ವ್ಯಾಪ್ತಿಯ ಕಾಡಂಚಿನ ಗ್ರಾಮಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣ ಮತ್ತು ವೃತ್ತಿಪರ ಕೌಶಲ್ಯ ಕುರಿತು ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಲಾಯಿತು.

ಕಾಡಂಚಿನ ಗ್ರಾಮಗಳ ವಿದ್ಯಾರ್ಥಿಗಳು ಕೌಶಲ್ಯಾಧಾರಿತ ಶಿಕ್ಷಣ ಪಡೆಯುವ ನಿಟ್ಟಿನಲ್ಲಿ ಹುರಿದುಂಬಿಸಿ ಮಾರ್ಗದರ್ಶನ ನೀಡುವುದಕ್ಕಾಗಿ ಬಂಡೀಪುರದ ಅಧಿಕಾರಿಗಳು ಮೊಳೆಯೂರು ವಲಯ ಬಿ.ಮಟಕೆರೆಯಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 'ಎಸ್‌ಎಸ್‌ಎಲ್‌ಸಿ ನಂತರದ ಶಿಕ್ಷಣ ಮಾರ್ಗದರ್ಶಿ ಹಾಗೂ ವೃತ್ತಿಪರ ಕೌಶಲ್ಯ ಮಾರ್ಗದರ್ಶನ ಕಾರ್ಯಾಗಾರ'ದಲ್ಲಿ ಬಿ.ಮಟಕೆರೆ, ಕೂಡಗಿ, ಹೆಗ್ಗನೂರು, ಕಾಟವಾಳು ಸೇರಿದಂತೆ ವಿವಿಧ ಗ್ರಾಮಗಳ 200ಕ್ಕೂ ಹೆಚ್ಚು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ವಿದ್ಯಾರ್ಥಿಗಳು ಪಾಲ್ಗೊಂಡು ಎಸ್‌ಎಸ್‌ಎಲ್‌ಸಿ ನಂತರ ಪಡೆಯಬಹುದಾದ ಶಿಕ್ಷಣದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ ಪಡೆದರು.



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೊಳೆಯೂರು ವಲಯದ ಕಾಡಂಚಿನ ಗ್ರಾಮಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬಿ.ಮಟಕೆರೆಯಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಅರಣ್ಯ ಇಲಾಖೆ ವತಿಯಿಂದ ಎಸ್‌ಎಸ್‌ಎಲ್‌ಸಿ ನಂತರ ಏನು ವಿಷಯ ಕುರಿತು ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ಕಾಡಂಚಿನ ವಿವಿಧ ಗ್ರಾಮಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು.

ಮೈಸೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದ ವೈಜ್ಞಾನಿಕ ಅಧಿಕಾರಿ ಡಾ.ಹೆಚ್.ಬಿ.ಚಂದ್ರಶೇಖರ್ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ನಂತರ ಪಿಯುಸಿಯಲ್ಲಿ ವಿಜ್ಞಾನ ವಿಷಯವನ್ನು ಅಧ್ಯಯನ ಮಾಡುವುದರಿಂದ ಭವಿಷ್ಯದಲ್ಲಿ ಯಾವ ಯಾವ ಕ್ಷೇತ್ರದಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಬಹುದು. ಅಲ್ಲದೆ, ಏನೆಲ್ಲಾ ಸಾಧನೆ ಮಾಡಬಹುದು ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.


ನೇತಾಜಿ ಕೆರಿಯರ್ ಅಕಾಡೆಮಿಯ ಎಂ.ರಘು ಕಲೆ ಮತ್ತು ವಾಣಿಜ್ಯ ಶಿಕ್ಷಣ ಹಾಗೂ ಕೆ.ಶಿವರಾಜು ಕೌಶಲ್ಯ ಆಧಾರಿತ ವೃತ್ತಿ ಮಾರ್ಗದರ್ಶನ ನೀಡಿದರು. ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳಲ್ಲಿ ಕೆಲವರು ವಿಜ್ಞಾನ ಶಿಕ್ಷಣ ಪಡೆಯಲು ಬಯಸಿದರೆ, ಮತ್ತೆ ಕೆಲವರು ಕಲಾ ಮತ್ತು ವಾಣಿಜ್ಯ ಶಿಕ್ಷಣ ಪಡೆಯುವ ಒಲವು ವ್ಯಕ್ತಪಡಿಸಿದರು. ಮತ್ತಷ್ಟು ವಿದ್ಯಾರ್ಥಿಗಳು ಕೌಶಲ್ಯ ಆಧಾರಿತ ಶಿಕ್ಷಣವಾದ ಐಟಿಐ, ಡಿಪ್ಲೊಮಾ ಸೇರಿದಂತೆ ಇನ್ನಿತರ ಶಿಕ್ಷಣ ಪಡೆದು ಉದ್ಯೋಗ ಪಡೆಯುವ ಹಂಬಲ ವ್ಯಕ್ತಪಡಿಸಿದರು.

ಇದೇ ವೇಳೆ ಅರಣ್ಯ ಸಿಬ್ಬಂದಿಗಳು ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ಪಡೆದರೆ ಅರಣ್ಯ ಇಲಾಖೆಯಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳುವ ಹಾಗೂ ಅರಣ್ಯ ಇಲಾಖೆಯಲ್ಲಿನ ಕಾರ್ಯವೈಖರಿ ಬಗ್ಗೆ ಮಾಹಿತಿ ನೀಡಿದರು.

ತರಬೇತಿ ಕಾರ್ಯಾಗಾರದ ಕುರಿತು ಮೊಳೆಯೂರು ವಲಯದ ಆರ್‌ಎಫ್‌ಓ ಕೆ.ಆರ್.ನಾರಾಯಣ್ ಮಾತನಾಡಿ, ಕಾಡಂಚಿನ ಗ್ರಾಮಗಳ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದೊಂದಿಗೆ ಕೌಶಲ್ಯ ಆಧಾರಿತ ಶಿಕ್ಷಣ ಪಡೆಯಲು ಪ್ರೇರೇಪಿಸಲು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್ ಮಾರ್ಗದರ್ಶನದಲ್ಲಿ 'ಎಸ್‌ಎಸ್‌ಎಲ್‌ಸಿ ನಂತರ ಏನು' ಎಂಬ ಶೀರ್ಷಿಕೆಯಲ್ಲಿ ಈ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಕಾರ್ಯಾಗಾರ ನಡೆಸಲಾಗಿದೆ ಎಂದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳು ಕಲೆ, ವಾಣಿಜ್ಯ ಮತ್ತು ವಿಜ್ಞಾನ ಹಾಗೂ ಕೌಶಲ್ಯಾಧಾರಿತ ಶಿಕ್ಷಣ ಪಡೆಯುವುದರಿಂದ ಆಗುವ ಉಪಯೋಗದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ, ಮಾರ್ಗದರ್ಶನ ನೀಡಿದ್ದಾರೆ. ಇದರಿಂದ ವಿದ್ಯಾರ್ಥಿಗಳಲ್ಲಿ ಮುಂದಿನ ಶಿಕ್ಷಣದ ಬಗ್ಗೆ ಸ್ಪಷ್ಟ ಚಿತ್ರಣ ದೊರೆತಂತಾಗಿದೆ. ಇದುವರೆಗೆ ಕಾಡಂಚಿನ ಗ್ರಾಮಗಳ ವಿದ್ಯಾರ್ಥಿಗಳಿಗೆ ಶಿಕ್ಷಣದ ಬಗ್ಗೆ ಮಾರ್ಗದರ್ಶನ ನೀಡುವವರು ಯಾರು ಇಲ್ಲದ ಕಾರಣ, ಅವರಿಗೆ ಎಸ್‌ಎಸ್‌ಎಲ್‌ಸಿ ನಂತರ ಯಾವ ವಿಷಯ ಶಿಕ್ಷಣ ಪಡೆಯಬೇಕು ಎಂದು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಗೊಂದಲ ಉಂಟಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಮುಂದಿನ ಶಿಕ್ಷಣದ ಗುರಿ ಬಗ್ಗೆ ಮನವರಿಕೆ ಮಾಡಿಕೊಡಲು ತರಬೇತಿ ಕಾರ್ಯಾಗಾರ ನಡೆಸಲಾಗಿದೆ ಎಂದು ತಿಳಿಸಿದರು.

ಕೈಲಾಸ ಶಿವಗಣಾರಾಧನೆ



ಶ್ರೀ ಚಂದ್ರಶೇಖರ್ ಎಸ್
ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾ ನಿರ್ದೇಶಕರು ಹಾಗೂ ಮಲೆ ಮಹದೇಶ್ವರ ಪತ್ತಿನ ಸಹಕಾರ ಸಂಘದ ನಿರ್ದೇಶಕರು

ಇವರ ಶಿವಗಣಾರಾಧನೆಯನ್ನು ದಿನಾಂಕ 06-04-2026ರಂದು ನಮ್ಮ ಸ್ವಗೃಹವಾದ ಹಡಜನ ಗ್ರಾಮ, ವರುಣಾ ಹೋಬಳಿ, ಮೈಸೂರು ಜಿಲ್ಲೆಯಲ್ಲಿ ಏರ್ಪಡಿಸಲಾಗಿದ್ದು. ಇವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು
ಸಹೋದರರು ಮತ್ತು ಕುಟುಂಬ ವರ್ಗ

ವಿಶ್ವ ಆರೋಗ್ಯ ದಿನದ ಅಂಗವಾಗಿ ಕುಕ್ಕರಹಳ್ಳಿ ಕೆರೆಯಲ್ಲಿ ವಾಕಥಾನ್



ವಿಶ್ವ ಆರೋಗ್ಯ ದಿನದ ಅಂಗವಾಗಿ ಕುಕ್ಕರಹಳ್ಳಿ ಕೆರೆಯಲ್ಲಿ ಭಾನುವಾರ ವಾಕಥಾನ್ ನಡೆಸಲಾಯಿತು.

ಮೈಸೂರು, ಏ.5(ಎಂಕೆ)– ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ವಿಶ್ವ ಆರೋಗ್ಯ ದಿನದ ಅಂಗವಾಗಿ ಭಾನವಿ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ವಾಕಥಾನ್ ನಡೆಸಲಾಯಿತು. 'ಆರೋಗ್ಯಕ್ಕಾಗಿ ಒಟ್ಟಾಗಿ ವಿಜ್ಞಾನದೊಂದಿಗೆ ನಿಲ್ಲೋಣ' ಶೀರ್ಷಿಕೆಯಡಿ ಕುಕ್ಕರಹಳ್ಳಿ ಕೆರೆ ಸುತ್ತಲೂ ಕಾಲ್ನಡಿಗೆಯಲ್ಲಿ ಸಾಗಿದ 300ಕ್ಕೂ ಹೆಚ್ಚು ಮಂದಿ ಆರೋಗ್ಯಕರ ಜೀವನ ಶೈಲಿಗೆ ಅನುಸರಿಸಬೇಕಾದ ಮಾರ್ಗಗಳ ಬಗ್ಗೆ ತಿಳಿಸುವ ಮೂಲಕ ಆರೋಗ್ಯದ ಅರಿವು ಮೂಡಿಸಿದರು.

ಬಳಿಕ ವಾಯು ವಿಹಾರಿಗಳಿಗೆ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಲಾಯಿತು. ಭಾನವಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಎನ್.ವಿಜಯ್ ಚೆಲುವರಾಜ್, ವೈದ್ಯಕೀಯ ಮೇಲ್ವಿಚಾರಕ ಡಾ.ಹೆಚ್.ಎನ್.ಚಂದನ್‌ಕುಮಾರ್, ಜನರಲ್ ಮ್ಯಾನೇಜರ್ ಆರ್.ಪ್ರಶಾಂತ್, ನರ್ಸಿಂಗ್ ಸೂಪರಿಂಟೆಂಡೆಂಟ್ ಕೆ.ಎಸ್.ನಿರಂಜನ್ ಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಏ.5–ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಮೈಸೂರಿನ ಆಲನಹಳ್ಳಿಯ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣಾ ಶಿಬಿರವನ್ನು, ಏ.7ರಿಂದ ಮೇ 7ರವರೆಗೆ ಒಂದು ತಿಂಗಳ ಕಾಲ ಪ್ರತಿದಿನ ಬೆಳಗ್ಗೆ 9.30 ರಿಂದ ಸಂಜೆ 4.30ರವರೆಗೆ ಆಯೋಜಿಸಲಾಗಿದೆ.

ಶಿಬಿರದಲ್ಲಿ ಚರ್ಮ, ಬೆನ್ನುಮೂಳೆ ಮತ್ತು ಕೀಲುನೋವು, ಚಯಾಪಚಯ ಸಮಸ್ಯೆ ಸೇರಿದಂತೆ ಇತರೆ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ತಜ್ಞ ವೈದ್ಯರಿಂದ ಉಚಿತವಾಗಿ ಸಲಹೆ ಮತ್ತು ಸಮಾಲೋಚನೆ ಪಡೆಯಬಹುದು. ಹೆಚ್ಚಿನ ಮಾಹಿತಿಗೆ ಡಾ.ದೀಪಾ ಸಿ.ಪಾಟೀಲ್ ಮೊ: 9886485005, ಡಾ.ಬೀನಾ ಎಂ.ಡಿ. ಮೊ: 9538367282, ಆಸ್ಪತ್ರೆ ದೂರವಾಣಿ: 0821–2548231, 2548433 ಮೂಲಕ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.



ದಾವಣಗೆರೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಮಲ್ಲಿಕಾರ್ಜುನ್ ಅವರ ಪರ ಮೈಲ್ಯಾಕ್ ಅಧ್ಯಕ್ಷ ಹೆಚ್.ಡಿ.ಗಣೇಶ್, ತುರ್ಚಗಟ್ಟ, ಸಿರಮಗೊಂಡನಹಳ್ಳಿ ಸೇರಿದಂತೆ ಇನ್ನಿತರೆ ಗ್ರಾಮಗಳಲ್ಲಿ ಪ್ರಚಾರ ನಡೆಸಿದರು. ಈ ವೇಳೆ ಜವರೇಗೌಡ, ಟಿಎಪಿಸಿಎಂಎಸ್ ನಿರ್ದೇಶಕರಾದ ಶಿವಕುಮಾರ್, ಉಮೇಶ್ ಉಪಸ್ಥಿತರಿದ್ದರು.



ಬೆಂಗಳೂರಿನ ಕೆಎಸ್‌ಆರ್‌ಪಿಸಿ ಪರೇಡ್ ಮೈದಾನದಲ್ಲಿ ನಡೆದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಮೈಸೂರಿನ ಕೆಎಸ್‌ಆರ್‌ಪಿ 5ನೇ ಪಡೆಯ ಸ್ಪೆಷಲ್ ಆರ್‌ಪಿಐ ಪ್ರದೀಪ್ ನಾಯಕ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಎಂ ಪದಕ ಪ್ರದಾನ ಮಾಡಿದರು.

ಅನ್ನಭಾಗ್ಯ ಅಕ್ಕಿ, ರಾಗಿ ಖರೀದಿಸುತ್ತಿದ್ದವರ ವಿರುದ್ಧ ಪ್ರಕರಣ ದಾಖಲು

ಮೈಸೂರು,ಏ.5(ಎಸ್‌ಪಿಎನ್)–ಅನ್ನ ಭಾಗ್ಯ ಯೋಜನೆಯ ಲಕ್ಷಾಂತರ ರೂ. ಮೌಲ್ಯದ ಧಾನ್ಯವನ್ನು ಪಡಿತರದಾರರಿಂದ ಅಕ್ರಮವಾಗಿ ಖರೀದಿಸಿ ಸಾಗಿಸುತ್ತಿದ್ದ ಆರೋಪದಡಿ ಐವರ ವಿರುದ್ಧ ಎನ್.ಆರ್.ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೌಸಿಯಾನಗರ 9ನೇ ಕ್ರಾಸ್ ನಿವಾಸಿ ನಾಸಿರ್ ಬೇಗ್(29), ಮಂಡಿ ಮೊಹಲ್ಲಾ ನಿವಾಸಿ ಸಮೀರ್ ಪಾಷಾ(23), ನಾಯ್ಡು ನಗರದ ಮೊಹಮ್ಮದ್ ಇರ್ಷಾದ್ (40), ಬೆಲವತ್ತದ ಮೊಹಮ್ಮದ್ ಹನೀಫ್(40), ಲಷ್ಕರ್ ಮೊಹಲ್ಲಾದ ಏಜಾಜ್ ಪಾಷಾ (54)ನನ್ನು ವಶಕ್ಕೆ ಪಡೆದು, ಇವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇವರಿಂದ ಪಿಕಪ್ ಗೂಡ್ಸ್ ವಾಹನ(ಕೆಎ 09 ಸಿ.4317), 32.45 ಕ್ವಿಂಟಾಲ್ ಅಕ್ಕಿ, 1.41 ಕ್ವಿಂಟಾಲ್ ರಾಗಿ, ಎಲೆಕ್ಟ್ರಾನಿಕ್ಸ್ ತೂಕದ ಯಂತ್ರವನ್ನು ವಶಪಡಿಸಿಕೊಳ್ಳಲಾಗಿದೆ.

ಶ್ರೀ ರಾಮ ಪಟ್ಟಾಭಿಷೇಕ ದಿನದ ಅಂಗವಾಗಿ ಓಕುಳಿ ಉತ್ಸವ




ಮೈಸೂರಿನ ಗೊಲ್ಲಗೇರಿಯ ಶ್ರೀ ಜಾನಕಿ ರಾಮಮಂದಿರದಲ್ಲಿ ಓಕುಳಿ ಉತ್ಸವ ನಡೆಯಿತು.

ಮೈಸೂರು,ಏ.5(ಎಂಕೆ)–ಮೈಸೂರಿನ ಗೊಲ್ಲಗೇರಿಯಲ್ಲಿರುವ ಶ್ರೀ ಜಾನಕಿ ರಾಮ ಮಂದಿರದಲ್ಲಿ ಶ್ರೀ ರಾಮ ಪಟ್ಟಾಭಿಷೇಕ ದಿನದ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯಗಳೊಂದಿಗೆ ಭಾನುವಾರ ಓಕುಳಿ ಉತ್ಸವ ಆಚರಿಸಲಾಯಿತು.

ನೂರು ವರ್ಷಗಳ ಇತಿಹಾಸವುಳ್ಳ ಶ್ರೀ ಜಾನಕಿ ರಾಮ ಮಂದಿರದಲ್ಲಿ ಶ್ರೀ ರಾಮನವಮಿ ದಿನದಿಂದ ಆರಂಭವಾದ ಭಜನೆ ಹಾಗೂ ಸಂಗೀತ ಕಾರ್ಯಕ್ರಮಗಳು ಶ್ರೀ ರಾಮ ಪಟ್ಟಾಭಿಷೇಕ ದಿನದವರೆಗೆ ಶ್ರದ್ಧಾ–ಭಕ್ತಿಯಿಂದ ನೆರವೇರಿಸಲಾಯಿತು.

ಮಧ್ಯಾಹ್ನದ ವೇಳೆಗೆ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಗೊಲ್ಲಗೇರಿಯ ಪ್ರತೀ ಮನೆಯ ಮುಂದೆಯೂ ಪಾತ್ರೆಗಳಲ್ಲಿ ದೊಡ್ಡ ಡ್ರಮ್‌ಗಳನ್ನು ನೀರು ತುಂಬಿ ಪರಸ್ಪರ ನೀರಿನಲ್ಲಿ ಮಿಂದುವ ಮೂಲಕ ಓಕುಳಿ ಆಚರಿಸಿ ಸಂಭ್ರಮಿಸಲಾಯಿತು. ಹಿರಿಯರು ಸೇರಿದಂತೆ ಮಹಿಳೆಯರು, ಮಕ್ಕಳು ಓಕುಳಿಯಲ್ಲಿ ಭಾಗವಹಿಸುವ ಮೂಲಕ ಗಮನ ಸೆಳೆದರು. ಈ ವೇಳೆ ಶ್ರೀ ಜಾನಕಿ ರಾಮ ಮಂದಿರದ ವಿಶ್ವನಾಥ್, ಮಂಜುನಾಥ್, ಮಂಗಳ ಗೌರಿ, ಯೋಗೇಶ್, ನೀಲಕಂಠ, ನಿರಂಜನ್, ಚಂದ್ರಕಲಾ, ನಟರಾಜ್, ಜಾನಕಿ ಗೋವರ್ಧನ, ಮಂಗಳ ಗೌರಿ, ಚೇತನ್, ಪುಷ್ಪ, ಅಮೃತ್ ವಿಷ್ಣುಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

10ನೇ ವರ್ಷದ ಸವಿನೆನಪು



ಶ್ರೀ.ಬಿ.ಬೋರೇಗೌಡ್ರು (ಗಂಡೈದ)

(ಶ್ರೀಮತಿ ನಿಂಗಮ್ಮ ಮತ್ತು ಲೇಟ್ ಕೆ.ಬೋರಯ್ಯನವರ ಮಗ, ಕೆ.ಜಿ.ಕೊಪ್ಪಲ್, ಮೈಸೂರು)
ಮಾಲೀಕರು: ಶ್ರೀ ಕಾಲಭೈರವೇಶ್ವರ ಕನ್ವೆನ್ಷನ್ ಹಾಲ್

ನಿಮ್ಮ ಅಗಲಿಕೆಯ ನೋವಿನ ಛಾಯೆ ನಮ್ಮಲ್ಲಿ ಶಾಶ್ವತ ನೋವನ್ನು ತಂದಿದೆ.
ನಿಮ್ಮ ನೆನಪಿನಲ್ಲೇ ಜೀವನವಿಡಿ ಇರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ.

ದುಃಖತಪ್ತರು:
ಮೃತರ ತಾಯಿ ಶ್ರೀಮತಿ ನಿಂಗಮ್ಮ ಮತ್ತು ಲೇಟ್ ಕೆ.ಬೋರಯ್ಯನವರ ಮಕ್ಕಳು,
ಮೃತರ ಪತ್ನಿ ಶ್ರೀಮತಿ ಹೆಚ್.ಎಸ್. ಪುಷ್ಪಲತಾ ಮತ್ತು ಮಕ್ಕಳಾದ ಬಿ.ಶರತ್‌ಗೌಡ,
ಬಿ.ಚಂದನ ಪರಮೇಶ್, ಅರವಿಂದನಗರ ಹಾಗೂ ಬಂಧು–ಮಿತ್ರರು